CC-O. In Public Domain. Digitized by eGangotri

ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರುಮಹಾಸಂಸ್ಥಾನದ ಗ್ರಂಥಪ್ರಕಟಣೆಗಳು

ಶ್ರೀಶಾಂಕರತತ್ತ್ವಜ್ಞಾನಾಮೃತಭೃಂಗಾರಃ ।
(ಶ್ರೀಶಂಕರಭಗವತ್ಪಾದರವರ ಉಪದೇಶಾಮೃತದಿಂದ ತುಂಬಿರುವ ಚಿನ್ನದ ಬಟ್ಟಲು)

ಶ್ರೀಶೃಂಗಗಿರಿಕವಿನರಸಿಂಹಶರ್ಮರಚಿತಕರ್ಣಾಟಕ
ಭಾಷಾವಿವರಣಸಹಿತಃ
ಶ್ರೀವಿಶ್ವನಾಥವಿದ್ವತ್ಕವಿವಿರಚಿತಃ

ಶ್ರೀಸಚ್ಚಿದಾನಂದವಿಜಯಃ ।
ಶ್ರೀಗುರೂಪದೇಶಃ ।
ಶ್ರೀಗುರುಪಾದುಕಾಸ್ತೋತ್ರಂ
ಶ್ರೀಗುರುಪಾದುಕಾಸ್ತವಃ ।
ಶ್ರೀಭವಬಂಧಮುಕ್ತ್ಯಷ್ಟಕಂ ।
ಶ್ರೀದೇಶಿಕೋತ್ಕರ್ಷಮಂಜರೀ ।

೧೯೮೧

ಸಮ್ಯಗ್ದರ್ಶನಗ್ರಂಥಮಾಲಾ : ನಂಜನಗೂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಸಚ್ಚಿದಾನಂದವಿಜಯಃ—ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರು-ಮಹಾಸಂಸ್ಥಾನದ ಮೂವತ್ತುಮೂರನೆಯ ಅಧಿಪತಿಗಳಾಗಿ ವಿರಾಜಿಸಿದ ಶ್ರೀಮತ್ಸಚ್ಚಿದಾನಂದಶಿವಾಭಿನವನರಸಿಂಹಭಾರತೀಗುರುಸಾರ್ವಭೌಮರ ದಿವ್ಯಚರಿತ್ರೆಯ ಲಘುಕಾವ್ಯ—ವಿಶ್ವನಾಥವಿದ್ವದ್ವಿರಚಿತಃ—ಶೃಂಗಗಿರಿಕವಿನರಸಿಂಹಶರ್ಮವಿರಚಿತಕರ್ಣಾಟಕಭಾಷಾವಿವರಣೆಸಹಿತ—ಇತರ ಕೆಲವು ಪ್ರಕರಣಗಳೂ ಸೇರಿವೆ–ಪುಟ ಕ್ರೌನ್ ಅಷ್ಟ—100 + 8. ಬೆಲೆ: ರೂ. 5-00.

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀಶೃಂಗಗಿರಿ ಶ್ರೀ[illegible]ಜಗದ್ಗುರು ಮಹಾಸಂಸ್ಥಾನದ

ಗ್ರಂಥಪ್ರಕಟಣೆಗಳು

ಶ್ರೀಶಾಂಕರತತ್ತ್ವಜ್ಞಾನಾಮೃತಭೃಂಗಾರಃ ।
(ಶ್ರೀಶಂಕರಭಗವತ್ಪಾದರವರ ಉಪದೇಶಾಮೃತದಿಂದ ತುಂಬಿರುವ ಚಿನ್ನದ ಬಟ್ಟಲು)

ಶ್ರೀಶೃಂಗಗಿರಿಕವಿನರಸಿಂಹಶರ್ಮರಚಿತಕರ್ಣಾಟಕ ಭಾಷಾವಿವರಣಸಹಿತಃ

ಶ್ರೀವಿಶ್ವನಾಥವಿದ್ವತ್ಕವಿವಿರಚಿತಃ

ಶ್ರೀಸಚ್ಚಿದಾನಂದವಿಜಯಃ ।

ಶ್ರೀಗುರೂಪದೇಶಃ ।

ಶ್ರೀಗುರುಪಾದುಕಾಸ್ತೋತ್ರಂ

ಶ್ರೀಗುರುಪಾದುಕಾಸ್ತವಃ ।

ಶ್ರೀಭವಬಂಧಮುಕ್ತ್ಯಷ್ಟಕಂ ।

ಶ್ರೀದೇಶಿಕೋತ್ಕರ್ಷಮಂಜರೀ ।

೧೯೭೧

ಸಮ್ಯಗ್ದರ್ಶನಗ್ರಂಥಮಾಲಾ : ನಂಜನಗೂಡು

Sri Vidyabharathi Book Centre, Sringeri

ಇದು ೧೯೮೨ರ ಮುದ್ರಣ
CC-O. In Public Domain. Digitized by eGangotri

೧೦೦೦ ಪ್ರತಿಗಳು

ಶ್ರೀಶೃಂಗಗಿರಿಜಗದ್ಗುರುಮಹಾಸಂಸ್ಥಾನದ
ಗ್ರಂಥಪ್ರಕಟಣೆಗಳು

ಬೆಲೆ : ಐದು ರೂಪಾಯಿಗಳು ಮಾತ್ರ

ಮುದ್ರಕರು:
ವಾಣೀ ಪ್ರೆಸ್ : ಗೀತಾ ರಸ್ತೆ : ಮೈಸೂರು 570 004

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಚಯ

ಕಾಷಾಯವಸ್ತ್ರಂ ಕಮನೀಯಗಾತ್ರಂ
ಕಾರುಣ್ಯಪಾತ್ರಂ ದುರಿತೌಘಶತ್ರುಂ।
ಕಾಮಾರಿಮಿತ್ರಂ ಪರಮಂ ಪವಿತ್ರಂ
ರತ್ನಂ ಗುರೂಣಾಂ ಪ್ರಣಮಾಮಿ ನಿತ್ಯಂ॥

[ಕಾಷಾಯವಸ್ತ್ರದಿಂದ ಅಲಂಕೃತರಾಗಿ, ದಿವ್ಯಮನೋಹರರೂಪದಿಂದ ಶೋಭಿಸುವ; ದಯೆಗೆ ತೌರೂರಾಗಿ, ಭಕ್ತರ ಸಕಲಪಾಪಗಳನ್ನು ಪರಿಹರಿಸುವ; ಕಾಮದಹನನಾದ ಶ್ರೀಪರಶಿವನಿಗೆ ಸಮಾನರಾಗಿ, ಪರಮಪವಿತ್ರರಾಗಿರುವ; ಶ್ರೀಸದ್ಗುರುಪರಬ್ರಹ್ಮರನ್ನು ನಿರಂತರವೂ ವಂದಿಸುತ್ತೇನೆ.]

"ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ॥"

"ಶಾಸ್ತ್ರದ ವಿಧಿಯನ್ನು ತ್ಯಜಿಸಿ ನಡೆಯುವವನು, ತನಗೆ ತೋರಿಬಂದಂತೆ ನಡೆದಂತಾಗುವುದು; ಇಂಥವನಿಗೆ ಯಾವ ಪ್ರಯೋಜನವೂ ಸಿದ್ಧಿಸುವುದಿಲ್ಲ—ಇಹದಲ್ಲಿ ಸುಖವಾಗಲಿ, ಪರದಲ್ಲಿ ಸದ್ಗತಿಯಾಗಲಿ ದೊರೆಯುವುದಿಲ್ಲ."

"ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ-
ವ್ಯವಸ್ಥಿತೌ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ॥"

"ಯಾರು, ಯಾವುದನ್ನು, ಯಾವಾಗ, ಹೇಗೆಮಾಡಿದರೆ ಇಹಪರಗಳಲ್ಲಿ ಸುಖಸದ್ಗತಿಗಳಾಗುವುವು; ಯಾವುದರಿಂದ ಇಹಪರಗಳಲ್ಲಿ ಇಷ್ಟವು ಲಭಿಸದೆ, ಅನರ್ಥವು ಸಂಭವಿಸುವುದು—ಎಂಬ ವಿಷಯವು ಅತೀಂದ್ರಿಯವಾದ್ದರಿಂದ, ಈ ವಿಷಯದಲ್ಲಿ, ಅಪೌರುಷೇಯವಾಗಿ ನಿರ್ದುಷ್ಟವಾಗಿರುವ ವೇದಶಾಸ್ತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri
ವೊಂದೇ ಪ್ರಮಾಣವಾಗಿದೆ; ಆದ್ದರಿಂದ ಇಹಪರಗಳಲ್ಲಿ ಶ್ರೇಯಃಸನ್ನು ಪಡೆಯಲು, ಶಾಸ್ತ್ರದಲ್ಲಿ ಹೇಳಿರುವುದನ್ನು ಸರಿಯಾಗಿ ತಿಳಿದುಕೊಂಡು, ಅದರಂತೆ ನಡೆಯಬೇಕು"—

ಇದು ಶ್ರೀಪರಮಾತ್ಮನ ಸರ್ವಹಿತೋಪದೇಶವು. ಶಾಸ್ತ್ರದಲ್ಲಿ ವಿಹಿತವಾಗಿರುವ "ಕಾರ್ಯಾಕಾರ್ಯ"ಗಳೇ "ಧರ್ಮಾಧರ್ಮ"ಗಳು. ಸರ್ವಶ್ರೇಯಸ್ಕರವಾಗಿರುವ ಈ ಶಾಸ್ತ್ರೀಯಧರ್ಮವನ್ನು ರಕ್ಷಿಸುವುದಕ್ಕಾಗಿಯೇ–"ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"—ಎಂಬಂತೆ—ಶ್ರೀಪರಮಾತ್ಮನು ಅವತರಿಸಿಬರುವ ಪ್ರಯಾಸವನ್ನು ಅಂಗೀಕರಿಸುತ್ತಾನೆ.

"ಧರ್ಮರಕ್ಷಣೆ–"ಯೆಂದರೆ—"ಜನರು ತಮ್ಮ ತಮ್ಮ ಸ್ವಧರ್ಮವನ್ನು, ಶಾಸ್ತ್ರವಿಧಿಗನುಸಾರವಾಗಿ, ಅನುಷ್ಠಿಸುವಂತೆ ಮಾಡುವುದು." ಜನರು ಹೀಗೆ ಸ್ವಧರ್ಮವನ್ನು ಅನುಷ್ಠಿಸುವುದು ಶಾಸ್ತ್ರವನ್ನು ಉದ್ಧಾರಮಾಡುವುದಕ್ಕಾಗಿ ಅಲ್ಲ; ಪರಮಾತ್ಮನನ್ನು ಉದ್ಧಾರಮಾಡುವುದಕ್ಕಾಗಿ ಅಲ್ಲ; ಧರ್ಮವನ್ನು ಉದ್ಧಾರಮಾಡುವುದಕ್ಕಾಗಿ ಅಲ್ಲ; ಅಥವಾ ಲೋಕವನ್ನು ಉದ್ಧಾರಮಾಡುವುದಕ್ಕಾಗಿ ಅಲ್ಲ; ಮತ್ತೇನೆಂದರೆ, ತನ್ನ ಇಹಪರಗಳ ಉದ್ಧಾರಕ್ಕೇ ಆಗಿರುತ್ತದೆ—ಇಲ್ಲವಾದರೆ ತನಗೇ ಇಹಪರಗಳಲ್ಲಿ ಅನರ್ಥವೇ ಪ್ರಾಪ್ತವಾಗುವುದು.

ಈ ಪ್ರಕಾರವಾಗಿ, ಮಾನವನ ಹಿತಾಹಿತಗಳ ಪರಿಜ್ಞಾನವು, ಶಾಸ್ತ್ರೈಕವೇದ್ಯವಾಗಿರುತ್ತದೆ. ಪ್ರಾಣಿಮಾತ್ರಕ್ಕೂ ಜೀವಿತದ ವ್ಯವಹಾರಕ್ಕೆ ಬೇಕಾದ ತಿಳಿವು ಇರುವುದಾದರೂ, ಶಾಸ್ತ್ರಾಧೀನವಾದ ಹಿತಾಹಿತಗಳ ಪರಿಜ್ಞಾನವು ಮನುಷ್ಯನಿಗೆ ಮಾತ್ರವೇ ಸಂಭವಿಸುವುದು. ಆದ್ದರಿಂದ—"ಅಹಿತಹಿತವಿಚಾರಶೂನ್ಯಬುದ್ಧೇಃ ಪುರುಷಪಶೋಶ್ಚ ಪಶೋಶ್ಚ ಕೋ ವಿಶೇಷಃ ?"—"ಶಾಸ್ತ್ರೈಕವೇದ್ಯವಾಗಿರುವ ಹಿತಾಹಿತಪರಿಜ್ಞಾನವಿಲ್ಲದವನಿಗೂ, ಅಂಥ ಪಶುವಿಗೂ ವ್ಯತ್ಯಾಸವೇನು ?"—ಎಂದು—ಶಾಸ್ತ್ರದ ತಿಳಿವು ಇಲ್ಲದ ಮನುಷ್ಯನು ಪಶುವೇ ಸರಿಯೆಂದು ನಿಂದ್ಯನಾಗಿರುವನು.

ದೇವಾಲಯ, ಧರ್ಮಛತ್ರ—ಮುಂತಾದ ಸತ್ಕಾರ್ಯಗಳನ್ನು ಯಾರು ಮಾಡಿದರೂ, ಅದು ಸರಿಯಾದರೀತಿಯಲ್ಲಿ ನಡೆಯುವಂತೆ ಏರ್ಪಡಿಸುವ

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಾರವೂ ಅವರಿಗೆ ಇದ್ದೇ ಇರುತ್ತದೆ. ಇದರಂತೆ, ಜಗತ್ತನ್ನು ಸೃಷ್ಟಿಸಿರುವ ಪರಮಾತ್ಮನು, ಪ್ರಜೆಗಳ ಇಹಪರಗಳ ಶ್ರೇಯಃಸಿದ್ಧಿಗಾಗಿ, ಅದಕ್ಕೆ ಅವಶ್ಯವಾಗಿರುವ ಧರ್ಮಾಧರ್ಮಗಳನ್ನು ಲೋಕದಲ್ಲಿ ವೇದಶಾಸ್ತ್ರಗಳ ಮೂಲಕ ಪ್ರಚಾರಮಾಡಿ, ಅದು ಯಥಾವತ್ತಾಗಿ ನಡೆದುಬರುವಂತೆ ಮಾಡುವುದಕ್ಕಾಗಿಯೇ, ಧರ್ಮನಿಯಮವು ಕೆಟ್ಟುಹೋದಾಗ, ಅದನ್ನು ವ್ಯವಸ್ಥೆಮಾಡುವುದಕ್ಕಾಗಿ, ಅವತರಿಸಿಬರುವನು. ನಿತ್ಯತೃಪ್ತನಾಗಿ, ಯಾವ ಕರ್ತವ್ಯದ ಭಾರವೂ ಇಲ್ಲದ(ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ|) ಶ್ರೀಪರಮಾತ್ಮನಿಗೆ, ತಾನು ಪ್ರಚಾರಮಾಡಿರುವ ಶಾಸ್ತ್ರೀಯವರ್ಣಾಶ್ರಮಧರ್ಮದ ರಕ್ಷಣೆಯೊಂದೇ ಗುರುತರವಾದ ಕಾರ್ಯವಾಗಿದೆ. ಇದು ತಾನು ಮಾಡುವುದರಿಂದ ನೆರವೇರುವುದಲ್ಲ—ಮತ್ತೇನೆಂದರೆ, ಜನರೇ ಮಾಡುವಂಥದ್ದಾಗಿದೆ—ಜನರು ತಮ್ಮ ತಮ್ಮ ಶಾಸ್ತ್ರೀಯಧರ್ಮದಲ್ಲಿ ನಿರತರಾದರೆ, ಆಗ ಪರಮಾತ್ಮನು ಇದರ ರಕ್ಷಣೆಗೆ ಅವತರಿಸಿಬಂದು, ದುಷ್ಟರೂ, ಮೂರ್ಖರೂ ಆಗಿರುವವರೊಡನೆ ಸೆಣಸಾಡುವ ಕ್ಲೇಶವು ಪರಿಹಾರವಾಗಿ, ಧರ್ಮನಿರತರಾದವರ ಮೇಲೆ ಪರಮಾತ್ಮನ ಅನುಗ್ರಹವು ಅನಾಯಾಸವಾಗಿ ಲಭಿಸಿ, ಅವರಿಗೆ ಇಹಪರಗಳಲ್ಲಿ ಪರಮಶ್ರೇಯೋಭ್ಯುದಯಗಳೂ ಸಿದ್ಧಿಸುವುವು.

ಈ ಕಲಿಯುಗದಲ್ಲಿ ಮೂರುಸಹಸ್ರಸಂವತ್ಸರಗಳು ಕಳೆಯುವಲ್ಲಿ, ನಾಸ್ತಿಕಮತಗಳ ಪ್ರಾಬಲ್ಯದಿಂದ, ಜನರಿಗೆ ಶಾಸ್ತ್ರದಲ್ಲಿಯೂ, ಶಾಸ್ತ್ರವಿಹಿತಗಳಾಗಿರುವ ಧರ್ಮಾಧರ್ಮಗಳ ನಿಯಮಗಳಲ್ಲಿಯೂ ಶ್ರದ್ಧೆಯು ನಿರ್ಮೂಲವಾಗಿದ್ದಾಗ—"ಈಶಾನಃ ಸರ್ವವಿದ್ಯಾನಾಂ|"—ಎಂಬ ಶ್ರುತಿಯಂತೆ ಸರ್ವವಿದ್ಯಾಧಿಪತಿಯಾಗಿರುವ ಶ್ರೀಪರಮೇಶ್ವರನೇ ಜನರಿಗೆ ಶಾಸ್ತ್ರದ ಸರಿಯಾದ ತಿಳಿವನ್ನು ಉಂಟುಮಾಡಲು ಸಮರ್ಥನಾದ್ದರಿಂದ, ಶ್ರೀಮಚ್ಛಂಕರಭಗವತ್ಪೂಜ್ಯಪಾದರವರ ರೂಪದಿಂದ ಅವತರಿಸಿಬಂದು, ಶಾಸ್ತ್ರದ ಯಥಾರ್ಥತತ್ತ್ವವನ್ನು ಪ್ರತಿಪಾದಿಸಿದ್ದಾನೆ.

"ನಾವು ಪರಮಾರ್ಥವಾಗಿಯೂ ನಿತ್ಯಮುಕ್ತಾದ್ವಿತೀಯಪರಬ್ರಹ್ಮಸ್ವರೂಪರೇ ಆಗಿರುತ್ತೇವೆ; ಅನಾದಿಯಾದ ಅಜ್ಞಾನದಿಂದ ಈ ನಮ್ಮ ವಾಸ್ತವಸ್ವರೂಪವು ತಿಳಿಯಬರದೆ, ನಾವು ಅನಾದ್ಯನಂತವಾದ ಸಂಸಾರದುಃಖಕ್ಕೆ ಗುರಿಯಾಗಿದ್ದೇವೆ; ನಮ್ಮ ಈ ಸ್ವರೂಪವನ್ನು ಅನುಭವಕ್ಕೆ ತಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡರೆ, ನಾವು ಕೃತಾರ್ಥರಾಗುತ್ತೇವೆ; ಇದು ಅನುಭವಸಿದ್ಧವಾಗುವುದಕ್ಕೆ, ಶಾಸ್ತ್ರಬೋಧಿತವಾಗಿರುವ ವರ್ಣಾಶ್ರಮಸದ್ಧರ್ಮಗಳನ್ನು ನಿಷ್ಕಾಮನೆಯಿಂದ, ಈಶ್ವರಾರ್ಪಿತವಾಗಿ, ಅನುಷ್ಠಿಸುವುದೇ ಮೂಲಸಾಧನೆಯಾಗಿದೆ; ಆದ್ದರಿಂದ, ಎಲ್ಲರೂ ತಮ್ಮ ತಮ್ಮ ಶ್ರೇಯಃಸಿದ್ಧಿಗಾಗಿ. ಸ್ವಧರ್ಮನಿರತರಾಗಬೇಕು"—ಎಂದು, ಪ್ರಾಮಾಣಿಕವಾಗಿಯೂ, ಯುಕ್ತಿಯುಕ್ತವಾಗಿಯೂ, ಸ್ವಧರ್ಮಾನುಷ್ಠಾನದ ಅವಶ್ಯಕತೆಯನ್ನು, ಎಲ್ಲರಿಗೂ ತಿಳಿಯುವಂತೆ ಶ್ರೀಶಂಕರಭಗವತ್ಪಾದರವರು ವಿಶದವಾಗಿ ಬೋಧಿಸಿರುತ್ತಾರೆ.

ಈ ಬೋಧೆಯು ಎಲ್ಲರಿಗೂ ಯಾವಾಗಲೂ ಸಿಗುವಂತೆ, ಭರತಖಂಡದ ನಾಲ್ಕು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿ, ಸದ್ಗುರುಪರಂಪರೆಯನ್ನು ಪ್ರವರ್ತಿಸಿರುತ್ತಾರೆ. ಇವುಗಳಲ್ಲಿ ಶ್ರೀಶೃಂಗಗಿರಿ ಶ್ರೀಶಾರದಾಪೀಠವು ಪ್ರಧಾನವಾಗಿರುತ್ತದೆ ಧರ್ಮಪ್ರಚಾರಕ್ಕಾಗಿ ಒಲಿಸಿಕೊಂಡ, ಬ್ರಹ್ಮವಿದ್ಯಾಭಿಮಾನಿನಿಯಾಗಿರುವ ಶ್ರೀಶಾರದಾದೇವಿಯನ್ನು ಇಲ್ಲಿಯೇ ಪ್ರತಿಷ್ಠಿಸಿದ್ದಾರೆ; ಸರ್ವಶಾಸ್ತ್ರವಿಶಾರದರಾಗಿರುವ ಶ್ರೀಸುರೇಶ್ವರಾಚಾರ್ಯರನ್ನು ಇಲ್ಲಿ ಪ್ರಥಮಾಚಾರ್ಯರನ್ನಾಗಿ ನಿಯಮಿಸಿದರು; ಮುಖ್ಯವಾದ ವ್ಯಾಖ್ಯಾನಸಿಂಹಾಸನವನ್ನು ಇಲ್ಲಿಯೇ ಸ್ಥಾಪಿಸಿದ್ದಾರೆ.

ಈ ಪರಂಪರೆಯಲ್ಲಿ ವಿರಾಜಿಸಿರುವ ಆಚಾರ್ಯರುಗಳೆಲ್ಲರೂ ಶಾಸ್ತ್ರೀಯಧರ್ಮದ ಪ್ರಚಾರಕಾರ್ಯದಲ್ಲಿ ಯಾವಾಗಲೂ ಜಾಗರೂಕರಾಗಿಯೇ ಇದ್ದಾರೆ. ಕಲಿಯ ಪ್ರಾಬಲ್ಯದಿಂದ ಜನರಲ್ಲಿ ಧರ್ಮಶ್ರದ್ಧೆಯು ಬೇಗಬೇಗನೆ ಶಿಥಿಲವಾಗುವುದನ್ನು ಪರಿಶೀಲಿಸಿ, ಈ ಪರಂಪರೆಯಲ್ಲಿ ಪ್ರತಿಹನ್ನೊಂದನೆಯವರಾಗಿ ಶ್ರೀಭಗವತ್ಪಾದರೇ ಅಂಶದಿಂದ ಅವತರಿಸಿಬರುವರೆಂದು ಪ್ರಸಿದ್ಧಿಯಿದೆ.

ಪಾಶ್ಚಾತ್ಯಪಾಮರಶಿಕ್ಷಣದ ಪ್ರಚಾರದಿಂದ, ಸನಾತನಶಾಸ್ತ್ರಾಧ್ಯಯನವು ತಿರಸ್ಕೃತವಾಗಿ, ಧರ್ಮಕ್ಕೆ ಮತ್ತೆ ಅತಿಶಯವಾದ ಆಘಾತವು ಪ್ರಾಪ್ತವಾಗಲಾಗಿ, ಈ ಪರಂಪರೆಯಲ್ಲಿ ಮೂವತ್ತಮೂರನೆಯವರಾದ ಶ್ರೀಮತ್ಸಚ್ಚಿದಾನಂದಶಿವಾಭಿನವನರಸಿಂಹಭಾರತೀಯತಿಸಾರ್ವಭೌಮರ ರೂಪದಿಂದ ಶ್ರೀಭಗವತ್ಪಾದರು ಅವತರಿಸಿಬಂದರು. ಶ್ರೀಭಗವತ್ಪಾದರವರ ಉಪದೇಶವೇ ಈಗಲೂ ಅವಶ್ಯವಾಗಿದೆಯಾಗಿ, ಅದರ ಪ್ರಚಾರಕ್ಕಾಗಿಯೇ ಶ್ರೀಗುರು

Sri Vidyabharathi Book Centre, Sringeri

 CC-O. In Public Domain. Digitized by eGangotri

ವರ್ಯರು ಅತಿಶಯವಾದ ಪ್ರಯತ್ನಶೀಲರಾದರು. ಇವರ ವಿಸ್ತೃತವಾದ ಚರಿತ್ರೆಯಿಂದ ಇದು ವಿಶದವಾಗಿದೆ.

ಇವರ ಕರಕಮಲಸಂಜಾತರಾಗಿ ವಿರಾಜಿಸಿದ ಶ್ರೀಮಚ್ಚಂದ್ರಶೇಖರ ಭಾರತೀಮಹಾಸ್ವಾಮಿಗಳವರೂ ಸಹ ಅಮೋಘಗಳಾದ ತಮ್ಮ ಧರ್ಮಾಚರಣೆಗಳಿಂದ ಲೋಕವನ್ನು ಅನುಗ್ರಹಿಸಿರುವುದನ್ನು ಅನೇಕಶಿಷ್ಯಭಕ್ತರುಗಳು ಅತಿಶಯವಾಗಿ ಪ್ರಚುರಪಡಿಸಿಯೇ ಇದ್ದಾರೆ. ಇವರ ಶಿಷ್ಯೋತ್ತಮರಾಗಿ ಶ್ರೀಶಾರದಾಜಗದ್ಗುರುಪೀಠದಲ್ಲಿ ವಿರಾಜಮಾನರಾಗಿರುವ ಶ್ರೀಶ್ರೀಮದಭಿನವ ವಿದ್ಯಾತೀರ್ಥಮಹಾಸನ್ನಿಧಾನದವರೂ, ಇವರ ಕರಕಮಲಸಂಜಾತರಾಗಿ ವಿರಾಜಿಸುತ್ತಿರುವ ಶ್ರೀಶ್ರೀಭಾರತೀತೀರ್ಥಸನ್ನಿಧಾನದವರೂ ಸಹ ಈ ಕಾರ್ಯದಲ್ಲಿ ನಿತ್ಯನಿರತರಾಗಿರುವುದು ಸರ್ವರಿಗೂ ಪ್ರತ್ಯಕ್ಷವೇ ಇರುತ್ತದೆ.

ಶ್ರೀಮಚ್ಚಂದ್ರಶೇಖರಭಾರತೀಮಹಾಸ್ವಾಮಿಗಳವರ ಶಿಷ್ಯಕೋಟಿಯಲ್ಲಿ ಶ್ರೀವಿಶ್ವನಾಥವಿದ್ವಾಂಸರು ಶ್ರೀಗುರುಭಕ್ತಿಸಂಪನ್ನರಾಗಿ, ಆಶುಕವಿತಾನಿಪುಣರಾಗಿದ್ದರು. ತಮ್ಮ ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀ ಗುರುಸಾರ್ವಭೌಮರ ಚರಿತ್ರೆಯನ್ನು ವರ್ಣಿಸಬೇಕೆಂಬ ಶ್ರೀಗುರುವರ್ಯರ ಆಜ್ಞೆಯನ್ನು ಶಿರಸಾವಹಿಸಿ, ಒಂದೇರಾತ್ರಿಯಲ್ಲಿ, ಒಂದುನೂರುಪದ್ಯಗಳಿಂದ, ಶ್ರೀಗುರುಸಾರ್ವಭೌಮರ ಚರಿತ್ರೆಯನ್ನು ಅದ್ಭುತವಾದ ರೀತಿಯಲ್ಲಿ ವರ್ಣಿಸಿ, ಶ್ರೀಗುರುವರ್ಯರ ಪಾದಕಮಲಗಳಲ್ಲಿ ಅರ್ಪಿಸಿದರು. "ಸಚ್ಚಿದಾನಂದವಿಜಯ" —ವೆಂಬ ಈ ಲಘುಕಾವ್ಯವು ಸರ್ವರಿಗೂ ಆನಂದಕರವಾಗಿಯೂ, ಬೋಧಕವಾಗಿಯೂ ಇರುವುದರಿಂದ, ಶ್ರೀಗುರುವರ್ಯರ ಆಜ್ಞೆಯಂತೆ ಇದನ್ನು ಕನ್ನಡ ನುಡಿಯಲ್ಲಿ ವಿವರಿಸಲು ಉದ್ಯುಕ್ತನಾಗಿದ್ದೇನೆ. ಮಹಾತ್ಮರಚರಿತ್ರೆಯು ಲೋಕಕ್ಕೆ ಪರಮಪಾವನಕರವೂ, ಸನ್ಮಾರ್ಗದರ್ಶಕವೂ ಆಗಿರುತ್ತದೆ.

ಶ್ರೀವಿಶ್ವನಾಥವಿದ್ವಾಂಸರು ರಚಿಸಿರುವ ಶ್ರೀಗುರುಪಾದುಕಾಸ್ತವವನ್ನೂ, ಶ್ರೀಗುರುಸಾರ್ವಭೌಮರು ರಚಿಸಿರುವ ಶ್ರೀಗುರುಪಾದುಕಾಸ್ತೋತ್ರವನ್ನೂ, ಭಕ್ತಜನರ ಉಪಯೋಗಕ್ಕಾಗಿ ಇದರ ಜತೆಯಲ್ಲಿ ಸೇರಿಸಿರುತ್ತೇನೆ.

ಶ್ರೀವಿಶ್ವನಾಥವಿದ್ವಾಂಸರು, ಅನಂತರ ಪರಮಹಂಸಸನ್ನ್ಯಾಸವನ್ನು ಪರಿಗ್ರಹಿಸಿ, ಮುಕ್ತಿಕ್ಷೇತ್ರವಾದ ಶ್ರೀವಾರಾಣಸಿಯಲ್ಲಿದ್ದು, ಶ್ರೀಶಂಕರಾನಂದಸರಸ್ವತಿಗಳೆಂದು ಪ್ರಸಿದ್ಧರಾಗಿ, 'ಅದ್ವೈತತತ್ತ್ವಾದರ್ಶ'—ವೆಂಬ ಲಘುಪ್ರಕ

Sri Vidyabharathi Book Centre, Sringeri

CC-O. In Public Domain. Digitized by eGangotri

ರಣಗ್ರಂಥವನ್ನು ರಚಿಸಿ, ಅಲ್ಲಿಯೇ ಪರಮಪದಸಿದ್ಧರಾದರು. 'ಅದ್ವೈತತತ್ತ್ವದರ್ಶ' ಪ್ರಕರಣದ ನಮ್ಮ ಕನ್ನಡಾನುವಾದವು, ಹೊಸಪೇಟೆಯ ನಾರಾಯಣದೇವರಕೆರಿಯ ಶ್ರೀಶಂಕರಜಯಂತೀಸಭೆಯ ಶ್ರೀಶಂಕರಾದ್ವೈತಗ್ರಂಥಮಾಲೆಯಲ್ಲಿ, ೧೯೩೭ರಲ್ಲಿ, ಪ್ರಕಟವಾಗಿ ಪ್ರಚಾರವಾಗಿರುತ್ತದೆ.

ಶ್ರೀ ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಗುರುಸಾರ್ವಭೌಮರ ಕೃತಿಗಳು ಶ್ರೀರಂಗದ ವಾಣೀವಿಲಾಸಮುದ್ರಣಾಲಯದಿಂದ—'ಭಕ್ತಿಸುಧಾತರಂಗಿಣಿ'—ಎಂಬ ಗ್ರಂಥದ ರೂಪದಲ್ಲಿ ಪ್ರಕಟವಾಗಿರುತ್ತವೆ. ಅಮೋಘಗಳಾದ ಶ್ರೀಗುರುವರ್ಯರ ವಚನಗಳೂ ಶ್ರೀಭಗವತ್ಪಾದರ ಸರಣಿಯನ್ನೇ ಜ್ಞಾಪಿಸಿಕೊಡುತ್ತ, ಇವರ ಶ್ರೀಭಗವತ್ಪಾದರ ಅವತಾರಪುರುಷತ್ವಕ್ಕೆ ಸಾಕ್ಷಿಯಾಗಿವೆ. ಶ್ರೀಗುರುವರ್ಯರ ಉಪದೇಶದಮಹಿಮೆಯ ಉದಾಹರಣೆಗಾಗಿ—'ಭವಬಂಧಮುಕ್ತ್ಯಷ್ಟಕ'—ವೆಂಬ ಒಂದು ಚಿಕ್ಕಪ್ರಕರಣವು ಅರ್ಥವಿವರಣೆಸಹಿತವಾಗಿ ಇಲ್ಲಿ ಪ್ರಕಟವಾಗಿರುತ್ತೆ. ಹಾಗೆಯೇ, ಶ್ರೀಮಚ್ಚಂದ್ರಶೇಖರಭಾರತೀಮಹಾಸ್ವಾಮಿಗಳಿಗೆ ಶ್ರೀಗುರುವರ್ಯರಲ್ಲಿದ್ದ ಭಕ್ತ್ಯತಿಶಯವನ್ನು ದ್ಯೋತಿಸುವ, ಅವರ ಕೃತಿಗಳಲ್ಲಿ—'ಶ್ರೀದೇಶಿಕೋತ್ಕರ್ಷಮಂಜರೀ'—ಎಂಬ ಒಂದು ಸ್ತುತಿಯನ್ನೂ ಅರ್ಥವಿವರಣಪೂರ್ವಕವಾಗಿ ಇಲ್ಲಿ ಸೇರಿಸಿರುತ್ತೇನೆ.

ಇವುಗಳಿಂದ, ಶ್ರೀಯಸ್ವಾಮಿಗಳಾದ ಸನ್ನತಿಗಳಿಗೆ, ಶಾಸ್ತ್ರ ಮತ್ತು ಶಾಸ್ತ್ರೀಯಧರ್ಮದಲ್ಲಿ ಆಸ್ತಿಕ್ಯವೂ, ಶ್ರದ್ಧೆಯೂ ಅಂಕುರಿಸುವುದಕ್ಕೆ ಲೇಶಮಾತ್ರವಾದರೂ ಉಪಯುಕ್ತವಾದೀತೆಂದು ಭಾವಿಸಿ, ಶ್ರೀಗುರುಚರಣಾರವಿಂದಗಳಲ್ಲಿ ಸಮರ್ಪಿಸಿ ಕೃತಾರ್ಥನಾಗುತ್ತೇನೆ.

ಓದುಗರು ಮೊದಲು ಶುದ್ಧಿಪತ್ರದಂತೆ ತಿದ್ದಿಕೊಳ್ಳಬೇಕಾಗಿ ವಿನಂತಿ.

ಇತಿ ಶ್ರೀಗುರುಚರಣನಳಿಯುಗಲಸಕ್ತಚಿತ್ತಃ
ಶೃಂಗಗಿರಿ ಕವಿ ನರಸಿಂಹಶರ್ಮಾ
"ಅದ್ವೈತಾಶ್ರಮಃ"

೫, 'ರಮಾ'
ಶ್ರೀಲಕ್ಷ್ಮೀಅಗ್ರಹಾರ
ನಂಜನಗೂಡು–೫೭೧೩೦೧
ದುರ್ಮತಿ ಸಂ|| ಶ್ರೀಗುರುಪೂರ್ಣಿಮಾ
೧೭–೭–೧೯೮೧

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಓಂ ॥

॥ ಬ್ರಹ್ಮೈವ ಸತ್ಯಂ ॥

ಶ್ರೀಸಚ್ಚಿದಾನಂದಶಿವಾಭಿನವ್ಯ-
ನೃಸಿಂಹಭಾರತ್ಯಭಿಧಂ ಮಹಾಂತಂ ।

ಶ್ರೀಶಂಕರಾಚಾರ್ಯನವಾವತಾರಂ
ಶ್ರೀಮದ್ಗುರುಂ ಸಂತತಮಾನತೋಽಸ್ಮಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಗುರವೇ ನಮಃ ।

ಶ್ರೀಮದಪ್ಪಯ್ಯದೀಕ್ಷಿತೇಂದ್ರವಂಶಮುಕ್ತಾಫಲಭೂತ-
ಶ್ರೀಮದ್ವಿಶ್ವನಾಥವಿದ್ವದ್ವರವಿರಚಿತಃ;
ಶ್ರೀಶೃಂಗಗಿರಿ ಕವಿ ನರಸಿಂಹಶರ್ಮವಿರಚಿತ-
ಕರ್ಣಾಟಭಾಷಾನುವಾದವಿವರಣಸಹಿತಃ

ಶ್ರೀಸಚ್ಚಿದಾನಂದವಿಜಯಃ ।

ಕಲ್ಯಾಣಕಾರಿಷು ವರಾತ್ ಕಮನೀಯರೂಪಾತ್
ಕಾರುಣ್ಯಸಾಂದ್ರಹೃದಯಾತ್ಕಲಿಕಲ್ಮಷಘ್ನಾತ್ ।
ಕಾಮಾರಿಸೇವನರತಾತ್ಕಲಿತಾಶ್ರಿತತ್ರಾತ್
ಶ್ರೀಸದ್ಗುರೋರಿತರದೈವಮಹಂ ನ ಜಾನೇ ॥ ॥ ೧ ॥

ಶ್ರೀಪರಮೇಶ್ವರಸ್ವರೂಪರಾದ ಶ್ರೀಸದ್ಗುರುಗಳು, ಮಾತಾಪಿತೃಸಹಸ್ರರಿಗಿಂತಲೂ ಅತಿಶಯವಾಗಿ ಲೋಕಕ್ಕೆ ಪರಮಶ್ರೇಯಃಸ್ಸನ್ನು ಅನುಗ್ರಹಿಸುವ ಮಹಾಮಹಿಮಶಾಲಿಗಳು; ಪರಿಪೂರ್ಣದಯಾಸಮುದ್ರರು; ದರ್ಶನಮಾತ್ರದಿಂದಲೇ ಸಕಲದುರಿತದೋಷಗಳನ್ನೂ ನಿರ್ನಾಶಮಾಡುವ, ಮನೋಹರದಿವ್ಯಸ್ವರೂಪರು; ಲೋಕಕ್ಕೆ ಸನ್ಮಾರ್ಗದರ್ಶಕರಾಗಿ, ನಿತ್ಯವೂ ಕಾಮಧ್ವಂಸಿಯಾಗಿರುವ ಶ್ರೀಪರಮೇಶ್ವರನ ಆರಾಧಕರು; ಅಗ್ನಿಯಂತೆ ತಮ್ಮನ್ನು ಆಶ್ರಯಿಸಿದವರಿಗೆ ಅಭಯವನ್ನಿತ್ತು, ಸರ್ವಾಪತ್ತಿನಿಂದಲೂ ರಕ್ಷಿಸುವವರು; ಇಂಥ ಶ್ರೀಸದ್ಗುರುಸಾರ್ವಭೌಮರನ್ನಲ್ಲದೆ ಬೇರೆ ದೇವರನ್ನು ಕಾಣೆನು.

'ಸಚ್ಚಿದಾನಂದವಿಜಯ'ವೆಂಬ ಈ ಲಘುಕಾವ್ಯವನ್ನು ಕರ್ಣಾಟಭಾಷೆಯಲ್ಲಿ ಅನುವಾದಮಾಡಲು ಉದ್ಯುಕ್ತರಾಗಿರುವ ಅನುವಾದಕರ ಮಂಗಳಾಚರಣೆಯು, ಈ ಮೇಲಿನ ಪದ್ಯವು. ಶಿಷ್ಟಾಚಾರವನ್ನು ಅನುಸರಿಸುವ ಅನುವಾದಕರು ಹೀಗೆ ಮಂಗಳವನ್ನಾಚರಿಸಿ, ಈಗ ತಮ್ಮ ಕರ್ತವ್ಯವನ್ನು ಉಲ್ಲೇಖಿಸುತ್ತಾರೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರದೇಶಿಕೇಂದ್ರರಚಿತೇ ಶ್ರೀತುಂಗಭದ್ರಾನದೀ-
ತೀರೇ ಶೃಂಗಗಿರೌ ವಿರಾಜದತುಲವ್ಯಾಖ್ಯಾನಪೀಠಾಶ್ರಿತಾತ್ ।
ಶ್ರೀಮಚ್ಚಂದ್ರಕಲಾವತಂಸಸುಗುರೋರಾದೇಶತಸ್ತದ್ಗುರೋಃ
ವ್ಯಾಖ್ಯಾಸ್ಯೇ ಲಘುಕಾವ್ಯಮೇತದಧುನಾ ಶ್ರೀವಿಶ್ವನಾಥೀಯಕಂ
॥ ೧ ॥

ಸರ್ವವಿದ್ಯಾಧಿಪತಿಯಾದ ಶ್ರೀಪರಮೇಶ್ವರನು, ತಾನು ಸೃಷ್ಟಿಸಿರುವ ಜಗತ್ತಿನ ಶ್ರೇಯೋಭ್ಯುದಯಗಳಿಗಾಗಿ ಪ್ರವರ್ತಿಸಿರುವ ವೈದಿಕಸನಾತನವರ್ಣಾಶ್ರಮಧರ್ಮದ ರಕ್ಷಣೆಗಾಗಿ ಶ್ರೀಮಚ್ಛಂಕರಭಗವತ್ಪೂಜ್ಯಪಾದಾಚಾರ್ಯರ ರೂಪದಿಂದ, ಕರ್ಮಭೂಮಿಯಾಗಿರುವ ಭರತಖಂಡದಲ್ಲಿ ಅವತರಿಸಿಬಂದು, ಅನಿತರಸಾಧಾರಣಗಳಾದ ಸಾಹಸವಿಶೇಷಗಳಿಂದ ಅವೈದಿಕಮಾರ್ಗಗಳನ್ನೆಲ್ಲ ನಿರ್ಮೂಲಗೊಳಿಸಿ, ಪ್ರಸ್ಥಾನತ್ರಯಭಾಷ್ಯಾದಿಗಳಿಂದ ವರ್ಣಾಶ್ರಮಧರ್ಮವನ್ನು ಪ್ರಚಾರಗೊಳಿಸಿ, ಶ್ರೀತುಂಗಭದ್ರಾಪರಮಪಾವನನದಿಯ ತಟದಲ್ಲಿ ಶೋಭಿಸುವ, ಶ್ರೀಋಷ್ಯಶೃಂಗಮುನೀಶ್ವರರ ದಿವ್ಯತಪಃಕ್ಷೇತ್ರವಾದ ಶ್ರೀಶೃಂಗಗಿರಿಯಲ್ಲಿ, ಸರ್ವವಿದ್ಯಾಧಿದೇವತೆಯಾದ ಶ್ರೀಶಾರದಾದೇವಿಯನ್ನು ಸ್ಥಿರಗೊಳಿಸಿ, ಪ್ರಧಾನವಾದ ವ್ಯಾಖ್ಯಾನಪೀಠವನ್ನು ಸ್ಥಾಪಿಸಿ, ಉಭಯಮೀಮಾಂಸಾಧುರೀಣರಾದ ಶ್ರೀಸುರೇಶ್ವರವಾರ್ತಿಕಾಚಾರ್ಯರಿಂದ ಆರಂಭಿಸಿರುವ ಶ್ರೀಸದ್ಗುರುಪರಂಪರೆಯನ್ನು ಪ್ರವರ್ತಿಸಿರುವರು. "ಸದ್ಗುರುಃ ಸ್ವೀಯ-ಶಿಷ್ಯೇ ಸ್ವೀಯಂ ಸಾಮ್ಯಂ ವಿಧತ್ತೇ, ಬ್ರಹ್ಮವಿದ್ಬ್ರಹ್ಮೈವ ಭವತಿ।"— ಮುಂತಾದ ಪ್ರಮಾಣವಚನಾನುಸಾರವಾಗಿ, ಈ ಸತ್ಪರಂಪರೆಯ ಆಚಾರ್ಯರುಗಳೆಲ್ಲರೂ ಸಾಕ್ಷಾತ್ಪರಮೇಶ್ವರಸ್ವರೂಪರೇ ಆಗಿ, ಸನಾತನ ವೈದಿಕವರ್ಣಾಶ್ರಮಧರ್ಮದ ಅಚ್ಚಳಿಯದ ಪ್ರದೀಪದ ಪ್ರಭೆಯನ್ನು ಲೋಕದಲ್ಲೆಲ್ಲ ಬೀರುತ್ತಲೇ ಬಂದಿರುತ್ತಾರೆ. ಅಂಧರು ಈ ಪ್ರಭೆಯನ್ನು ಕಾಣಲಾರದೆ ಹಳ್ಳಕಿಟ್ಟಿಗಳ ಕುಮಾರ್ಗದಲ್ಲಿ ಬಿದ್ದು, ಅನರ್ಥಗಳಿಗೆ ಗುರಿಯಾಗುವುದು, ಅವರ ದೌರ್ಭಾಗ್ಯವೇ ಸರಿ.

ಶ್ರೀವಿದ್ಯಾತೀರ್ಥರು, ಶ್ರೀಭಾರತೀತೀರ್ಥರು, ಶ್ರೀವಿದ್ಯಾರಣ್ಯರು— ಮುಂತಾದವರು ಧರ್ಮರಕ್ಷಣಪ್ರಚಾರಗಳಿಗಾಗಿ ಮಾಡಿರುವ ಸಾಹಸವು

Sri Vidyabharathi Book Centre, Sringeri

CC-0. In Public Domain. Digitized by eGangotri

ಜಗದ್ವಿಖ್ಯಾತವೇ ಇದೆ. ಇದೇ ಮಾರ್ಗದಲ್ಲಿ ಶ್ರೀ (ಉಗ್ರ) ವೃದ್ಧನರಸಿಂಹ ಭಾರತೀಗುರುವರ್ಯರೂ ಜಗನ್ಮಾನ್ಯತೆಯ ಶಿಖರವನ್ನೇರಿದರು. ಇವರ ಅಚ್ಚುಮೆಚ್ಚಿನ ಶಿಷ್ಯೋತ್ತಮರಾದ ಶ್ರೀಸಚ್ಚಿದಾನಂದಶಿವಾಭಿನವನರಸಿಂಹ ಭಾರತೀ ಗುರುಸಾರ್ವಭೌಮರ ದಿವ್ಯಚರಿತಾಮೃತವು ಈಗಲೂ ಹಲವರಿಗೆ ನಿತ್ಯಾಸ್ವಾದನೀಯವಾಗಿದೆ. ಇವರ ಕರಕಮಲಸಂಜಾತರಾದ ಶ್ರೀಮಚ್ಚಂದ್ರ ಶೇಖರಭಾರತೀದೇಶಿಕೇಂದ್ರರ ಉಪದೇಶಾಮೃತವನ್ನು ಸೇವಿಸದವರ ಜನ್ಮವೇ ವಿಫಲವೆಂಬುದು ಬಲ್ಲವರ ಅನುಭವಸಿದ್ಧ ವಿಷಯ.

ಶ್ರೀಪರಶಿವಪರಾವತಾರರಾದ ಶ್ರೀಮದಪ್ಪಯ್ಯದೀಕ್ಷಿತೇಂದ್ರರು ಜಾಂತ ಧ್ವಾಂತಕುಮತಗಳ ಹುಟ್ಟಡಗಿಸಿ, ವೈದಿಕಾದ್ವೈತಪರಮಸಿದ್ಧಾಂತವನ್ನು ಸ್ಥಿರ ಗೊಳಿಸಿದುದು ಸರ್ವಪ್ರಸಿದ್ಧವೇ ಇದೆ. ಇವರ ವಂಶದಲ್ಲಿ ಜನಿಸಿಬಂದ ಶ್ರೀವಿಶ್ವ ನಾಥವಿದ್ವಾಂಸರು ಶಾಸ್ತ್ರಪಾಂಡಿತ್ಯದಂತೆ ಆಶುಕವಿತೆಯಲ್ಲಿಯೂ ನಿಪುಣರಾ ಗಿದ್ದು, ಶ್ರೀಮಚ್ಚಂದ್ರಶೇಖರಭಾರತೀಮಹಾಸ್ವಾಮಿಗಳವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ತಮ್ಮ ಗುರುವರ್ಯರ ಚರಿತ್ರೆಯನ್ನು ಬರೆಯಬೇಕೆಂಬ ಶ್ರೀಗುರುಗಳ ಆದೇಶವನ್ನು ಶಿರಸಾವಹಿಸಿ, ಈ ವಿಶ್ವನಾಥ ವಿದ್ವಾಂಸರು ಒಂದೇ ರಾತ್ರಿಯಲ್ಲಿ, ಒಂದು ನೂರು ಪದ್ಯಗಳ **ಶ್ರೀಸಚ್ಚಿದಾನಂದವಿಜಯ** ವೆಂಬ ಈ ಲಘುಕಾವ್ಯವನ್ನು ರಚಿಸಿ, ಶ್ರೀಗುರುಪಾದುಕೆಗಳಲ್ಲಿ ಕಾಣಿಕೆ ಯಾಗಿ ಅರ್ಪಿಸಿದರು. ಆಕಾರದಲ್ಲಿ ಮಾತ್ರವಲ್ಲದೆ ಅರ್ಥದಲ್ಲಿಯೂ ಈ ಕಾವ್ಯವು ಅನ್ವರ್ಥವಾಗಿಯೇ ಲಘುವಾಗಿದ್ದು, ಸಚ್ಚಿದಾನಂದರ ವಿಜಯವನ್ನೇ ಬೆಳಗಿಸು ತ್ತಿದೆ. ಇದು ಸಚ್ಚಿದಾನಂದರೂಪಪರಮಾತ್ಮನ ವಿಜಯವೂ ಆಗಿದೆ. ಮಹಾಕವಿ ಗಳ ಮಹಾಕಾವ್ಯಗಳ ಶ್ರೇಣಿಗೆ ಸೇರಲು ಅರ್ಹವಾದ ಈ ಲಘುಕಾವ್ಯವು ಅನೇಕವಿಧಶಬ್ದಾರ್ಥಾಲಂಕಾರಗಳಿಂದ ಅಲಂಕೃತವಾಗಿ, ವಿದ್ವಾಂಸರ ಅಂತಃಕರಣವನ್ನು ಸೂರೆಗೊಳ್ಳುತ್ತದೆ. ಕೇವಲಕಲ್ಪನಾಮಯವರ್ಣನೆಗಳ ಕುಕಾವ್ಯಗಳಂತಲ್ಲದೆ, ಪರಮಶ್ರೇಯಸ್ಕರಗಳಾದ ಜ್ಞಾನವೈರಾಗ್ಯಭಗವದ್ಭಕ್ತಿ-ಧರ್ಮಶ್ರದ್ಧೆಗಳ ಸನ್ಮಾರ್ಗೋಪದೇಶಪ್ರಧಾನವಾಗಿ ಶೋಭಿಸುವ ಈ ಕಾವ್ಯವು ಸರ್ವರಿಗೂ ಮಾನ್ಯವಾಗಿದೆ.

ಈ ಕಾರಣದಿಂದಲೇ, ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರು ವ್ಯಾಖ್ಯಾನಸಿಂಹಾಸನಾಧ್ಯಾಸೀನರಾಗಿ ಪ್ರಕೃತದಲ್ಲಿ ವಿರಾಜಮಾನರಾಗಿರುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶ್ರೀಮದಭಿನವವಿದ್ಯಾತೀರ್ಥಮಹಾಸನ್ನಿಧಾನದವರ, ಮತ್ತು ಇವರ ಕರಕಮಲಸಂಜಾತರಾಗಿರುವ ಶ್ರೀಶ್ರೀಭಾರತೀತೀರ್ಥಸನ್ನಿಧಾನದವರ ನಿದೇಶಾಧೀನನಾಗಿ, ಕನ್ನಡಜನತೆಯ ಪ್ರಯೋಜನಕ್ಕಾಗಿ ಈ ಕಾವ್ಯದ ಅಭಿಪ್ರಾಯವನ್ನು ಸಾಧ್ಯವಾದಮಟ್ಟಿಗೆ ಕನ್ನಡನುಡಿಯಲ್ಲಿ ವರ್ಣಿಸಲು ಉದ್ಯುಕ್ತನಾಗಿದ್ದೇನೆ.

ಈ ಪದ್ಯದಲ್ಲಿ—**ಶ್ರೀಮಚ್ಛಂಕರದೇಶಿಕೇಂದ್ರರಚಿತೇ; ಶ್ರೀಮಚ್ಚಂದ್ರಕಲಾವತಂಸಸುಗುರೋಃ**—ಎಂಬ ಪದಗಳಿಂದ, ಶ್ರೀಮಚ್ಛಂಕರಭಗವತ್ಪಾದರಂತೆಯೇ ಈ ಪರಂಪರೆಯ ಆಚಾರ್ಯರೆಲ್ಲರೂ ಶ್ರೀಚಂದ್ರಶೇಖರನಾದ ಶ್ರೀಪರಮೇಶ್ವರಸ್ವರೂಪರೇ—ಎಂಬುದು ಸೂಚಿತವಾಗಿದೆ. **ಶ್ರೀಮಚ್ಚಂದ್ರಕಲಾವತಂಸಸುಗುರೋರಾದೇಶತಃ ತದ್ಗುರೋಃ ಲಘುಕಾವ್ಯಮೇತತ್**—ಎಂಬಲ್ಲಿ—ಶ್ರೀಮಚ್ಚಂದ್ರಶೇಖರಭಾರತೀಮಹಾಸ್ವಾಮಿಗಳ ಅಪ್ಪಣೆಯಂತೆ, ಅವರ ಗುರುವರ್ಯರಾದ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀಮಹಾಸ್ವಾಮಿಗಳ ವಿಷಯವಾಗಿ ರಚಿತವಾದದ್ದು ಈ ಕಾವ್ಯ—ಎಂಬುದು ತಿಳಿಸಲ್ಪಟ್ಟಿದೆ. **ಶ್ರೀವಿಶ್ವನಾಥೀಯಕಂ** ಎಂಬ ಪದವು, ಈ ಕಾವ್ಯವು ಸಾಕ್ಷಾದ್ವಿಶ್ವನಾಥನಾದ ಶ್ರೀಪರಮೇಶ್ವರಸ್ವರೂಪರೇ ಆಗಿರುವ ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಸ್ವಾಮಿಗಳವರ ದಿವ್ಯಚರಿತ್ರೆಯ ವಿಷಯಕವೆಂಬುದನ್ನೂ, ಶ್ರೀವಿಶ್ವನಾಥನಾಮಧೇಯರಾದ ಕವಿಗಳ ಕೃತಿಯೆಂಬುದನ್ನೂ ವ್ಯಕ್ತಪಡಿಸುವುದು.

ಅನುವಾದಕರು ಇನ್ನು ಮುಂದೆ ಈ ಕಾವ್ಯವನ್ನು ಉದಹರಿಸಿ ಅರ್ಥಾನುವಾದವನ್ನು ಮಾಡುವರು:—

ಶ್ರೀವಿಶ್ವನಾಥಕವಿವರ್ಯರು, ಜಗದೇಕಸದ್ಗುರುಸಾರ್ವಭೌಮರಾದ ಶ್ರೀ ಮತ್ಸಚ್ಚಿದಾನಂದಶಿವಾಭಿನವನರಸಿಂಹಭಾರತೀಮಹಾಸ್ವಾಮಿಗಳವರ ದಿವ್ಯಭವ್ಯಚರಿತ್ರೆಯನ್ನು ಶ್ರೀಮಚ್ಚಂದ್ರಶೇಖರಭಾರತೀಮಹಾಸ್ವಾಮಿಗಳವರ ಆಜ್ಞಾನುಸಾರವಾಗಿ, ಒಂದುನೂರು ಪದ್ಯಗಳ ಲಘುಕಾವ್ಯದಿಂದ ವರ್ಣಿಸಲು ಉದ್ಯುಕ್ತರಾಗಿ—'**ಗ್ರಂಥಸಮಾಪ್ತಿಕಾಮಃ ಮಂಗಳಮಾಚರೇತ್**' —'ತನ್ನ ಗ್ರಂಥವು ನಿರ್ವಿಘ್ನವಾಗಿ ಪೂರ್ಣವಾಗಬೇಕೆಂದು ಬಯಸುವವನು ವಿಘ್ನಶಾಂತಿಗಾಗಿ ಮೊದಲು ಮಂಗಳವನ್ನು ಆಚರಿಸತಕ್ಕದ್ದು'—ಎಂಬ ಶಿಷ್ಟರ

Sri Vidyabharathi Book Centre, Sringeri

CC-0. In Public Domain. Digitized by eGangotri

ಆಚಾರಮೂಲಕವಾದ ಶ್ರುತಿಯ ಪ್ರಮಾಣವನ್ನು ಅನುಸರಿಸಿ, ಮೊದಲು ಮಂಗಳವನ್ನು ಆಚರಿಸುತ್ತಾರೆ;

'ಆಶೀರ್ನಮಸ್ಕ್ರಿಯಾ ವಸ್ತುನಿರ್ದೇಶೋ ವಾಪಿ ತನ್ಮುಖಂ'— ಎಂಬ ಆಲಂಕಾರಿಕರ ಪ್ರಮಾಣದಂತೆ, ಅಪೇಕ್ಷಿತವಾದ ಫಲವನ್ನು ಕೋರುವಂಥ ಮಂಗಳವನ್ನು ಮಾಡುತ್ತಾರೆ;

'ಶ್ರೇಯಾಂಸಿ ಬಹುವಿಘ್ನಾನಿ ಭವಂತಿ ಮಹತಾಮಪಿ'— ಎಂಬ ವಚನದಂತೆ, ಪರಮಶ್ರೇಯಸ್ಕರವಾಗಿರುವ ಶ್ರೀಸದ್ಗುರುಮಹಿಮಾವರ್ಣನೆಯಲ್ಲಿ ವಿಘ್ನಬಾಹುಳ್ಯವನ್ನು ಆಶಂಕಿಸಿ, ಮೂರು ಪದ್ಯಗಳಿಂದ ಮಂಗಳವನ್ನು ಅನುಷ್ಠಿಸುತ್ತಾರೆ—

ಕಲ್ಯಾಣರುಚಿರಾಕಾರಂ ಕಲ್ಯಾಣೈಕನಿಕೇತನಂ।
ಕಲ್ಯಾಣದಾಯಿ ಭಜತಾಂ ಕಲ್ಯಾಣಾಯ ಮಹೋಽಸ್ತು ನಃ॥೧॥

"ಅಶುಭಾನಿ ನಿರಾಚಷ್ಟೇ ತನೋತಿ ಶುಭಸಂತತಿಂ।"— ಎಂಬಂತೆ, ಎಲ್ಲ ಅಮಂಗಳಗಳನ್ನೂ ಪರಿಹರಿಸಿ, ಕಲ್ಯಾಣಪರಂಪರೆಯನ್ನು ಉಂಟುಮಾಡುತ್ತ, ಮನೋಹರವಾಗಿದ್ದು, ಸಕಲಮಂಗಳಗಳಿಗೂ ತೌರುಮನೆಯಾಗಿರುವ, ಸ್ವಪ್ರಕಾಶಪರಮಾತ್ಮಚೈತನ್ಯವು, ಅದನ್ನು ಸೇವಿಸುವ ನಮಗೆ ಮಂಗಳವನ್ನು ಉಂಟುಮಾಡಲಿ.

ಪರಮಾತ್ಮಭಕ್ತಿಯಂತೆ ಗುರುಭಕ್ತಿಯೂ ಅವಶ್ಯವಾದ್ದರಿಂದ ಶ್ರೀಗುರುಮಹಿಮೆಯನ್ನು ಕೀರ್ತಿಸುವ ಮಂಗಳವನ್ನು ಮಾಡುತ್ತಾರೆ—

ಗುರುವರಚರಣದ್ವಂದ್ವಂ ಗುರುತರಫಲದಾನನಿಷ್ಪ್ರತಿದ್ವಂದ್ವಂ।
ಭಜತಾಮನನ್ಯಭಕ್ತ್ಯಾ ಭಜತಿ ನು ಭವನೀರಧಿಸ್ಥಲತಾಂ ॥೨॥

ಶ್ರೀಸದ್ಗುರುವರ್ಯರ ಪಾದಕಮಲಗಳ ಜತೆಯು, ಪರಮಶ್ರೇಷ್ಠವಾದ ಫಲವನ್ನು ಅನುಗ್ರಹಿಸುವಲ್ಲಿ ಅಸಮಾನವಾಗಿರುತ್ತದೆ; ಅನನ್ಯಭಕ್ತಿಯಿಂದ ಇದನ್ನು ಭಜಿಸುವವರಿಗೆ ಸಂಸಾರಾಪಾರದುಃಖಸಾಗರವು, ಕ್ಲೇಶವಿಲ್ಲದೆ ದಾಟಿಹೋಗಲು ಅನುಕೂಲವಾಗುವಂತೆ, ಆಳವಿಲ್ಲದ್ದಾಗುವುದು.

ಭಕ್ತಿ—ಎಂದರೆ ಭಜನೆ, ಸೇವೆ ಎಂದರ್ಥ. ಸೇವೆಯೆಂದರೆ, ಯಾರನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇವಿಸುವುದೋ, ಅವರ ಕಷ್ಟವನ್ನು ಪರಿಹರಿಸುವುದು ಮತ್ತು ಅವರಿಗೆ ಸುಖವನ್ನು ಉಂಟುಮಾಡುವುದು. ನಿತ್ಯಸಿದ್ಧರಾಗಿರುವ ಶ್ರೀಗುರುವರ್ಯರಿಗೆ ಇವೆರಡೂ ಪ್ರಸಕ್ತವಾಗುವುದಿಲ್ಲ. ಎಲ್ಲರೂ ಶ್ರೇಯೋಭ್ಯುದಯಭಾಗಿಗಳಾಗಲೆಂಬ ಕರುಣೆಯೊಂದೇ ಅವರಿಗೆ ಇರುವುದು. ಇದಕ್ಕೆ, ನಿಷ್ಕಾಮ ಸ್ವಸ್ವವರ್ಣಾಶ್ರಮಧರ್ಮನಿಷ್ಠೆಯೊಂದೇ ಸಾಧನೆಯು. ಇದರಿಂದ—'ತಾನು ಪರಮಾತ್ಮನಿಗೆ ಅನನ್ಯನೇ ಹೊರತು, ಅನ್ಯನಲ್ಲ'—ಎಂಬ ಅನುಭವವು ಸಿದ್ಧಿಸಿ ಎಲ್ಲರೂ ಕೃತಾರ್ಥರಾಗುವರು. ಅನುಭವಗಮ್ಯವಾಗಬೇಕಾದ ಈ ತತ್ತ್ವಾರ್ಥವನ್ನು ಲಕ್ಷಿಸಿ, ಇದಕ್ಕಾಗಿ ನಿಷ್ಕಾಮಸ್ವಧರ್ಮಾನುಷ್ಠಾನವನ್ನು ಮಾಡುವುದೇ 'ಅನನ್ಯಭಕ್ತಿ'ಯು. ಹೀಗೆ ಧರ್ಮನಿರತರಾದವರಿಗೆ, ಚಿತ್ತಶುದ್ಧಿ-ಜ್ಞಾನಪ್ರಾಪ್ತಿಗಳ ಮೂಲಕವಾಗಿ ಪರಮಪುರುಷಾರ್ಥವು ಕೈಗೂಡುವುದು.

ಜಗಜ್ಜಾಲಂ ನಾಲಂ ವಲದನಲಜಾಲೋಪಮಮಿದಂ
ಯದಾಲೋಕೇ ಶುಕ್ತೌ ರಜತಮಿವ ಭಾತುಂ ಮತಿಮತಾಂ।
ತದದ್ವೈತಂ ತೇಜೋ ಜನಿನಿಧನಹೀನಂ ಸುಖಘನಂ
ಕರಾಲಂ ನಿರ್ಮೂಲಂ ಮಮ ಜನನಜಾಲಂ ಜರಯತು ॥ ೩ ॥

'ದ್ವಿತೀಯಾದ್ವೈ ಭಯಂ ಭವತಿ'—ಎಂಬ ಶ್ರುತಿಯಂತೆ, ದ್ವೈತಪ್ರಪಂಚವೆಲ್ಲ, ಎಲ್ಲ ಕಡೆಗೂ ಹರಡಿಕೊಂಡು ಬರುತ್ತಿರುವ ಭಯಂಕರವಾದ ಕಾಡ್ಗಿಚ್ಚಿನಂತೆ ಅನರ್ಥಕರವಾಗಿದೆ. ನಿತ್ಯನಿರ್ವಿಕಾರವಾದ ಪರಬ್ರಹ್ಮಚೈತನ್ಯವೇ ಈ ಸಮಸ್ತದ್ವೈತಪ್ರಪಂಚಕ್ಕೂ ಮೂಲಕಾರಣವೆಂದು ಶ್ರುತಿಯು ಬೋಧಿಸುತ್ತಿದೆ. ಆದ್ದರಿಂದ ನಿರ್ವಿಕಾರವಾಗಿರುವ ಶುಕ್ತಿ(ಕಪ್ಪೆಚಿಪ್ಪು) ಯಲ್ಲಿ ರಜತ(ಬೆಳ್ಳಿ)ದಂತೆ, ನಿತ್ಯನಿರ್ವಿಕಾರವಾದ ಪರಬ್ರಹ್ಮಚೈತನ್ಯದಲ್ಲಿ ಈ ದ್ವೈತಪ್ರಪಂಚವೆಲ್ಲ ಕಲ್ಪಿತಭ್ರಾಂತಿಯೆಂದೇ ನಿಶ್ಚಿತವು. ರಜತದ ಕಲ್ಪನೆಗೆ ಅಧಿಷ್ಠಾನವಾಗಿರುವ ಶುಕ್ತಿಯು ತಿಳಿದುಬಂದ ಅನಂತರ, ಆ ರಜತವು ಕಾಣಬರುವುದಿಲ್ಲ. ಇದರಂತೆ, ಪ್ರಪಂಚದ ಕಲ್ಪನೆಗೆ ಅಧಿಷ್ಠಾನವಾಗಿರುವ ಪರಬ್ರಹ್ಮತತ್ತ್ವವು ಗೋಚರವಾಗಲು, ದ್ವೈತಪ್ರಪಂಚವೂ ಕಾಣದಾಗಿ, ಸರ್ವಸಂಸಾರಭಯವೂ ನಿಃಶೇಷವಾಗಿ ತೊಲಗುವುದು.

ಶುಕ್ತಿಯನ್ನು ಕಂಡಮೇಲೆ, ಅದರಲ್ಲಿ ಕಲ್ಪಿತವಾಗಿರುವ ರಜತವು ಕಾಣ

Sri Vidyabharathi Book Centre, Sringeri

CC-0. In Public Domain. Digitized by eGangotri

ಬರಲಾರದಂತೆ, ಯಾವ ಪರಬ್ರಹ್ಮತತ್ತ್ವದ ಸಾಕ್ಷಾತ್ಕಾರರೂಪವಾದ ಅನುಭವವು ಉದಯಿಸಿದ ಕ್ಷಣವೇ, ಅದರಲ್ಲಿ ಕಲ್ಪಿತವಾಗಿ ದುಃಖಕರವಾಗಿರುವ ದ್ವೈತಪ್ರಪಂಚವು ಈ ತತ್ತ್ವಜ್ಞರಿಗೆ ಕಾಣಬರಲಾರದೋ; ಸಕಲದ್ವೈತ ಪ್ರಪಂಚಕ್ಕೂ ಮೂಲಕಾರಣವಾಗಿ, ಅದ್ವಿತೀಯಸ್ವರೂಪವೂ, ಉತ್ಪತ್ತಿ ನಾಶರಹಿತವಾಗಿ ನಿತ್ಯನಿರ್ವಿಕಾರವೂ, ಸ್ವಪ್ರಕಾಶವೂ, ಅಸಂಗಸ್ವರೂಪವಾಗಿ ಪರಮಾನಂದಘನಸ್ವರೂಪವೂ ಆಗಿರುವ ಪ್ರತ್ಯಗಾತ್ಮರೂಪಪರಬ್ರಹ್ಮ ವಸ್ತುವು, ಭಯಂಕರವಾಗಿರುವ ಜನನಮರಣಪರಂಪರಾರೂಪವಾದ ಈ ಸಂಸಾರಜಾಲವನ್ನು ನಾಶಮಾಡಲಿ.

'ಜಾಲ'ವೆಂದರೆ 'ಸಮೂಹ'ವೆಂದು ಒಂದು ಅರ್ಥವು; 'ಬಲೆ'ಯೆಂದು ಮತ್ತೊಂದು ಅರ್ಥವು. ದ್ವೈತಜಗತ್ತೂ, ಜನ್ಮಮರಣಪರಂಪರಾರೂಪವಾದ ಸಂಸಾರವೂ, ಅದರ ಸುಖದುಃಖಾನುಭವವೂ ಸಹ—ಮೀನುಗಳನ್ನೂ ಹಕ್ಕಿಗಳನ್ನೂ ಮೃಗಗಳನ್ನೂ ಬಲೆಯು ಬಂಧಿಸಿ ಹಿಂಸಿಸಿ ನಾಶಮಾಡುವಂತೆ—ಆತ್ಮನನ್ನು ಬಂಧಿಸಿ ಹಿಂಸಿಸುತ್ತದೆಂಬುದನ್ನು ಸೂಚಿಸುವುದಕ್ಕಾಗಿ 'ಜಾಲ'ವೆಂದು ಇವುಗಳನ್ನು ವರ್ಣಿಸಿರುವುದು ಯುಕ್ತವಾಗಿದೆ.

ಏತಕ್ಕೋಸ್ಕರ ಈ ಪ್ರಕಾರವಾಗಿ ಮಂಗಳವನ್ನು ಆಚರಿಸಿದರೋ, ಗ್ರಂಥಕಾರರು ಈಗ ಆ ತಮ್ಮ ಕರ್ತವ್ಯವನ್ನು ತಿಳಿಸುತ್ತಾರೆ—

ಮಹತಾಂ ಕರುಣಾವತಾಂ ಗುರೂಣಾಂ
ಕರುಣಾತೋ ಗುರುನಾಥಸಚ್ಚರಿತ್ರಂ।
ಕುತುಕಾತ್ಕಥಯಾಮಿ ಪದ್ಯಜಾಲೈಃ
ಕುಶಲಾಶೀರ್ವಚನಾಭಿಕಾಂಕ್ಷಯೈವ ॥ ೪ ॥

ದಯಾಮಯರೂ ಅತಿಶಯಮಹಿಮವಂತರೂ ಆಗಿರುವ ಶ್ರೀಮಚ್ಚಂದ್ರಶೇಖರಭಾರತೀಗುರುವರ್ಯರ ಆಜ್ಞೆಯಂತೆ, ಅವರ ದಯೆಯನ್ನೇ ಅವಲಂಬಿಸಿಕೊಂಡು, ಅವರ ಮತ್ತು ಸಮಸ್ತಜಗತ್ತಿನ ಗುರುನಾಥರಾಗಿರುವ ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಗುರುಸಾರ್ವಭೌಮರ ದಿವ್ಯಚರಿತ್ರೆಯನ್ನು, ಶ್ರೀಗುರುವರ್ಯರ ಆಶೀರ್ವಚನಮಾತ್ರದ ಲಾಭದ ಆಸೆಯಿಂದ, ಕುತೂಹಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಭರಿತನಾಗಿ, ನಾನಾವಿಧಪದ್ಯಗಳಿಂದ ವರ್ಣಿಸುತ್ತೇನೆ.

ಹೀಗೆ ಪ್ರತಿಜ್ಞೆ ಮಾಡಿ, ಶ್ರೀಗುರುಚರಿತ್ರೆಯನ್ನೇ ಆರಂಭಿಸುತ್ತಾರೆ—

ಮಹೀಶೂರಾಖ್ಯಾನಂ ಮಹಿತವಿಭವಾನಾಂ ನಿಲಯನಂ
ಕಲಾಲೀಲಾಗಾರಂ ಕಲಿಕಲುಷದೂರಂ ಪುರವರಂ ।
ವಿಭಾತೀಜ್ಯಾಶೀಲೈರವನಿಸುರಸಂಘೈರವಿರಲಂ
ಪುರಾರಾತೇರ್ಯೋಷಾ ಮಹಿಷಮವಧೀದ್ಯತ್ರ ದನುಜಂ ॥ ೫ ॥

ಭೂಮಂಡಲದಲ್ಲಿ ಶೂರರೆಂದು ಪ್ರಖ್ಯಾತಿಪಡೆದ ಕ್ಷತ್ರಿಯವೀರರ ರಾಜಧಾನಿಯಾದ ಮೈಸೂರು ಎಂಬ ಮಹಾಪಟ್ಟಣವು ಸಕಲಸಂಪದ್ಭರಿತವೂ, ಸಕಲಕುಶಲವಿದ್ಯೆಗಳ ವಿಹಾರಸ್ಥಾನವೂ, ಕಲಿದೋಷರಹಿತವಾಗಿ, ಸನಾತನ ವೈದಿಕವರ್ಣಾಶ್ರಮಧರ್ಮನಿಷ್ಠರಾಗಿ ಯಾಗಾದಿಶ್ರೌತಸ್ಮಾರ್ತಕರ್ಮಗಳಲ್ಲಿ ನಿರಂತರವೂ ನಿರತರಾಗಿರುವ ಬ್ರಾಹ್ಮಣೋತ್ತಮರಿಂದ ನಿಬಿಡವೂ ಆಗಿ ವಿರಾಜಿಸುತ್ತಿದೆ. ತ್ರಿಪುರಹರನಾದ ಶ್ರೀಪರಶಿವನ ಪ್ರಿಯರಮಣಿಯಾದ ಪಾರ್ವತೀ ದೇವಿಯು ಲೋಕಕಂಟಕನಾಗಿದ್ದ ಮಹಿಷಾಸುರನನ್ನು ವಧಿಸಿದ ಪುಣ್ಯಕ್ಷೇತ್ರವೇ ಇದು.

ತನ್ಮೈಸೂರುಂ ಪುರಮಧಿವಸನ್ ಸರ್ವಕರ್ಣಾಟದೇಶಾನ್
ಧೀಮಾನ್ವಿದ್ವಾನ್ಪರಮಕರುಣೋ ನೀತಿಮಾನ್ಧಾರ್ಮಿಕಶ್ಚ ।
ಶ್ರೀಮಾನ್ದಾತಾ ಸಕಲಸುಮನಃಪಕ್ಷಪಾತೀ ಯಶಸ್ವೀ
ಶ್ರೀಕೃಷ್ಣಾಖ್ಯೋ ನರಪತಿರಶಾತ್ಸ್ವಪ್ರಜಾನಿರ್ವಿಶೇಷಂ ॥ ೬ ॥

ವಿದ್ವಾಂಸನೂ, ವಿವೇಕಶಾಲಿಯೂ, ನೀತಿವಂತನೂ, ಧರ್ಮಿಷ್ಠನೂ, ಶ್ರೀಮಂತನೂ, ಕೀರ್ತಿಮಂಡಿತನೂ, ದಯಾಪೂರ್ಣನೂ, ಸಕಲ ವಿದ್ವತ್ಪಕ್ಷಪಾತಿಯೂ ಆಗಿದ್ದ ಶ್ರೀಕೃಷ್ಣರಾಜಪ್ರಭುವು ಈ ಮೈಸೂರು ರಾಜಧಾನಿಯಲ್ಲಿ ಇದ್ದು, ಸಕಲಕರ್ಣಾಟರಾಜ್ಯವನ್ನೂ, ತನ್ನ ಸಾಕ್ಷಾನ್ಮಕ್ಕಳಂತೆ ಮಮತೆಯಿಂದ ಆಳುತ್ತಿದ್ದನು.

ಗುರೋರ್ಗರ್ವಂ ಸರ್ವಂ ಸುಮತಿರಥ ಖರ್ವಂ ವಿರಚಯನ್
ಯಶಸ್ತೋಮಾನ್ ಸೋಮಾನ್ ಸತತಮಭಿರಾಮಾನ್
ವಿಶಯದನ್ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಅಸಾವಾನ್ಯೋ ಧನ್ಯೋ ನೃಪತಿಕುಲಮಾನ್ಯೋsತ್ರ ನಗರೇ
ಗುಣಾರಾಮೋ ರಾಮಾಭಿಧಬುಧಲಲಾಮಃ ಸಮಲಸತ್ ॥೭॥

ಈ ಮಹಾರಾಜಧಾನಿಯಲ್ಲಿ ರಾಮಶಾಸ್ತ್ರಿಗಳೆಂಬ ಬ್ರಾಹ್ಮಣೋತ್ತಮರು ವಿರಾಜಿಸುತ್ತಿದ್ದರು. ಇವರು ವಿದ್ವತ್ಪತಿಭೆಯಲ್ಲಿ ದೇವಗುರುವಾದ ಶ್ರೀಬೃಹಸ್ಪತಿಗಳ ಅಹಂಕಾರವನ್ನೂ ಕೀಳಾಗಿಸಿದ್ದರು; ದಿಕ್ಕುದಿಕ್ಕುಗಳಲ್ಲಿಯೂ ತಮ್ಮ ಪಾಂಡಿತ್ಯದ ಕೀರ್ತಿಯ ಚಂದ್ರಿಕೆಯನ್ನು ಹರಡುತ್ತಿದ್ದರು; ಶಾಸ್ತ್ರಪ್ರವಚನದಲ್ಲಿ ಅಸದೃಶರಾಗಿದ್ದರು; ರಾಜಾಧಿರಾಜರುಗಳಿಂದಲೂ ಸನ್ಮಾನಿತರಾಗಿ, ಸದ್ಗುಣಾಲಂಕೃತರಾಗಿ, ಧನ್ಯರಾಗಿ ಬೆಳಗುತ್ತಿದ್ದರು.

ಯದೀಯೈಃ ಶಿಷ್ಯೈಃ ಪ್ರೈರವನಿತಲಮಾಕ್ರಾಂತಮಧುನಾ
ಸ್ವತಃ ಪಾರಂಪರ್ಯಾದಪಿ ಸುರಗುರುಪ್ರಖ್ಯಮತಿಭಿಃ
ವಿಶೇಷಾದ್ವಿಶೇಷಾಮನುಗಮವಿಧಾ ತರ್ಕವಿದುಷಾಂ
ಮನೋಜ್ಞಾ ಚಾಪೂರ್ವಾ ಜಗತಿ ಯದುಪಜ್ಞಾ ವಿಜಯತೇ
॥ ೮ ॥

ಸ್ವಂತವಾಗಿಯೂ ವಂಶಪಾರಂಪರ್ಯದಿಂದಲೂ ಬೃಹಸ್ಪತಿಗೆ ಸಮವಾದ ಬುದ್ಧಿಕೌಶಲದಿಂದ ದೇಶದೇಶಗಳಲ್ಲಿ ಶೋಭಿಸುತ್ತಿರುವ ವಿದ್ವಾಂಸರೆಲ್ಲರೂ ಈ ಶ್ರೀರಾಮಶಾಸ್ತ್ರಿಗಳ ಶಿಷ್ಯಕೋಟಿಯವರೇ ಆಗಿರುತ್ತಾರೆ! ತರ್ಕಶಾಸ್ತ್ರ ಪ್ರವೀಣರಾದವರಲ್ಲಿ ಪ್ರಸಿದ್ಧವಾಗಿರುವ, ಅಸಾಧಾರಣವಾದ, "ಅನುಗಮ"ವೆಂಬ ಪ್ರಕ್ರಿಯೆಗೆ ಶ್ರೀರಾಮಶಾಸ್ತ್ರಿಗಳೇ ಮೂಲಪುರುಷರು!

ವಿಜಾತೀಯಖ್ಯಾತೇರ್ವಿಬುಧಕುಲಚೂಡಾಮಣಿವರಾ-
ದ್ವಿನಿಷ್ಪನ್ನೋ ಯಸ್ಮಾದ್ವಿದಿತಶತಕೋಟಿಃ ಸುಮನಸಾಂ ।
ನಿಗಾಢಂ ಭಾಗ್ಯೇನ ಶ್ರವಸಿ ಹೃದಯೇ ವಾ ನಿಪತಿತೋ
ಮನಃಸೀಮಾತೀತಂ ಕುತುಕಭರಮದ್ಯಾಪಿ ತನುತೇ ॥ ೯ ॥

ಲೋಕೋತ್ತರಕೀರ್ತಿಶಾಲಿಗಳಾಗಿರುವ, ಬ್ರಾಹ್ಮಣವಂಶಕ್ಕೇ ಶಿಖರಪ್ರಾಯರಾಗಿರುವ ಈ ಶ್ರೀರಾಮಶಾಸ್ತ್ರಿಗಳಿಂದಲೇ, ವಿದ್ವದ್ಗೋಷ್ಠಿಯಲ್ಲಿ ಪ್ರಸಿದ್ಧವಾಗಿರುವ 'ಶತಕೋಟಿ'ಯೆಂಬ ಗ್ರಂಥರತ್ನವು ಪ್ರಕಟಗೊಂಡಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ತರ್ಕಪಾಂಡಿತ್ಯದ ದುರಹಂಕಾರದಿಂದ ಮೆರೆಯುವವರಿಗೆ, ಇದು ಅನ್ವರ್ಥವಾಗಿ ಶತಕೋಟಿಯೇ (ವಜ್ರಾಯುಧವೇ) ಆಗಿರುತ್ತದೆ. ಪುಣ್ಯಶಾಲಿಗಳಾದ ತರ್ಕರಸಿಕರಿಗೆ ಇದು ಕಿವಿಗೂ ಮನಸ್ಸಿಗೂ ಗೋಚರವಾಗಲಾಗಿ, ಇವತ್ತಿಗೂ ಅಪರಿಮಿತವಾದ ಆಶ್ಚರ್ಯಾನಂದಗಳನ್ನು ಉಂಟುಮಾಡುತ್ತದೆ.

ಕಲಾಪಾರಾವಾರಾತ್ಕಲಿತಕುಶಲಾತ್ಪಾರವಿಕಲಾತ್
ಸುರಾಣಾಮಕ್ಷೋಭ್ಯಾದಥ ಚ ದನುಜಾನಾಮಪಿ ನೃಣಾಂ ।
ಭುಜಂಗಾಸಂಗಾದಪಿ ಭುಜಗಪತಿಭೂಷಸ್ಯ ಕೃಪಯಾ
ಲಲಾಸಾಸ್ಮಾಲ್ಲಕ್ಷ್ಮೀನೃಹರಿಸುಮತಿಃ ಕೌಸ್ತುಭಮಣಿಃ ॥ ೧೦ ॥

ಅಪಾರವೂ ಮಂಗಳಕರವೂ ಆಗಿರುವ ಕ್ಷೀರಸಾಗರವನ್ನು ದೇವ ದಾನವರು ಸೇರಿ ಸರ್ಪರಾಜನನ್ನು ಮಂದರಪರ್ವತದ ಕಡಗೋಲಿಗೆ ಕಟ್ಟಿ ಕಡೆಯಲಾಗಿ, ಶ್ರೀಮಹಾವಿಷ್ಣುವಿಗೆ ಅಲಂಕಾರವಾದ ಕೌಸ್ತುಭಮಣಿಯು ಕ್ಷೀರಸಮುದ್ರದಿಂದ ಹುಟ್ಟಿಬಂತು.

ಶ್ರೀರಾಮಶಾಸ್ತ್ರಿಗಳೂ ಸಹ ಕ್ಷೀರಸಾಗರದಂತೆ ಪಾರವಿಲ್ಲದ ಪಾಂಡಿತ್ಯ ಶಾಲಿಗಳೂ ಸಕಲಕಲಾಪಾರಂಗತರೂ ಆಗಿದ್ದರು. ಆದರೆ ಕ್ಷೀರಸಾಗರದಂತೆ, ದೇವದಾನವರಿಂದಲೂ ಅಕ್ಷೋಭ್ಯವಿದ್ವತ್ಪೂರ್ಣರಾಗಿದ್ದರು; ಮತ್ತೆ ಮನುಷ್ಯ ರಿಗೆ ಇವರನ್ನು ಕ್ಷೋಭಿಸಲು ಶಕ್ಯವೆ? ಕ್ಷೀರಸಮುದ್ರಕ್ಕೆ ಭುಜಂಗ(ಸರ್ಪ)ದ ಸಂಬಂಧವಿತ್ತು; ಶ್ರೀರಾಮಶಾಸ್ತ್ರಿಗಳಿಗೆ ಭುಜಂಗರ—ಎಂದರೆ, ಹಾವುಗಳ ಹಾಗೂ ದುರಾಚಾರಿಗಳ—ಸಹವಾಸಲೇಶವೂ ಇರಲಿಲ್ಲ. ಇಂಥ ಶ್ರೀರಾಮ ಶಾಸ್ತ್ರಿಗಳೆಂಬ ವಿದ್ವತ್ಸಮುದ್ರದಿಂದ, ಸರ್ಪಭೂಷಣನಾದ ಶ್ರೀಪರಮೇಶ್ವರನ ಅನುಗ್ರಹದಿಂದ, ಶ್ರೀಲಕ್ಷ್ಮೀನರಸಿಂಹಶಾಸ್ತ್ರಿಗಳೆಂಬ ಪುತ್ರಕೌಸ್ತುಭಮಣಿಯು ಉದಯವಾಯಿತು.

ಮುದಾಲಂಕರ್ವಿರ್ಣೈರ್ವಿಬುಧಮುಖಮುದ್ರಾಪಣವಿಧೌ
ಪರಾಕ್ರಾಂತಂ ನ್ಯಾಯೇಽಪ್ಯತುಲಮಥ ಕಾಣಾದಸರಣೌ ।
ವಿಜಹ್ರೇಽಪ್ಯಶ್ರಾಂತಂ ಫಣಿಭಣಿತವಾಣೀಜಲನಿಧೌ
ಅಧೀತೇ ಮೀಮಾಂಸೇ ಗುರುವರಸಕಾಶಾದತಿತಮಾಂ ॥ ೧೧ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀಲಕ್ಷ್ಮೀನರಸಿಂಹಶಾಸ್ತ್ರಿಗಳು ತಮ್ಮ ಜನಕರಾದ ಶ್ರೀರಾಮಶಾಸ್ತ್ರಿಗಳಿಂದಲೇ ವ್ಯಾಕರಣ, ನ್ಯಾಯ, ವೈಶೇಷಿಕ, ಪೂರ್ವೋತ್ತರಮೀಮಾಂಸಾಶಾಸ್ತ್ರಗಳನ್ನು ಆಳವಾಗಿ ಅಧ್ಯಯನಮಾಡಿ, ಪ್ರತಿವಾದಿಗಳ ಬಾಯಿಮುಚ್ಚಿಸುವುದರಲ್ಲಿ ಪೂರ್ಣಜಯಶೀಲರಾಗಿದ್ದರು.

ಮಾಧ್ವದ್ವೈತಮತಾವಲಂಬಿಗಳಾದ ವ್ಯಾಸತೀರ್ಥರು ವೈದಿಕಾದ್ವೈತಮತವನ್ನು ದೂಷಿಸಿ ನ್ಯಾಯಾಮೃತವೆಂಬ ಒಂದು ಗ್ರಂಥವನ್ನು ರಚಿಸಿದ್ದಾರೆ. ಶ್ರೀಮಧುಸೂದನಸರಸ್ವತೀಯತೀಂದ್ರರು ಈ ಗ್ರಂಥವನ್ನು—

ಇಹ ಕುಮತಿರತತ್ತ್ವೇ ತತ್ತ್ವವಾದೀ ವರಾಕಃ
ಪ್ರಲಪತಿ ಯದಕಾಂಡೇ ಖಂಡನಾಭಾಸಮುಚ್ಚೈಃ ।
ಪ್ರತಿವಚನಮಮುಷ್ಮೈ ವಕ್ತಿ ಕೋ ನಾಮ ವಿದ್ವಾನ್
ನ ಹಿ ರುತಮನುರೌತಿ ಗ್ರಾಮಸಿಂಹಸ್ಯ ಸಿಂಹಃ ॥

(ಅತತ್ತ್ವವಾಗಿರುವ ದ್ವೈತವನ್ನೇ ತತ್ತ್ವವೆಂದು ವಾದಿಸುವ ಈ ವರಾಕನು, ಅಸಂಗತವಾಗಿ ಆಭಾಸಖಂಡನೆಗಳನ್ನು ಪ ಲಾಪಿಸುತ್ತಾನೆ; ಇವನಿಗೆ ಯಾವ ವಿದ್ವಾಂಸನು ತಾನೆ ಉತ್ತರ ಹೇಳುವುದು ಗೌರವವೆನಿಸೀತು? ಬೀದಿಯ ನಾಯಿಯ ಬೊಗಳುವಿಕೆಗೆ ಮೃಗರಾಜನಾದ ಸಿಂಹವು ಪ್ರತಿಗರ್ಜಿಸುತ್ತದೆಯೆ?)—

ಎಂದು ತಮ್ಮ ಅದ್ವೈತಸಿದ್ಧಿಗ್ರಂಥದಲ್ಲಿ ನಿರಾಕರಿಸಿರುತ್ತಾರೆ.

ಇದರ ಮೇಲೆ, ವ್ಯಾಸತೀರ್ಥರ ಶಿಷ್ಯರಾದ ರಾಮತೀರ್ಥರು ನ್ಯಾಯಾಮೃತತರಂಗಿಣೀ—ಎಂದು ತಮ್ಮ ಗುರುಗಳ ನ್ಯಾಯಾಮೃತಗ್ರಂಥಕ್ಕೆ ವ್ಯಾಖ್ಯಾನಮಾಡಿ, ಅದ್ವೈತಸಿದ್ಧಿಯಲ್ಲಿ ಹೇಳಿರುವ ಅದರ ದೂಷಣೆಗಳಿಗೆ ಪರಿಹಾರವನ್ನು ಮಾಡಲು ಯತ್ನಿಸಿದ್ದಾರೆ. ಶ್ರೀಗೌಡಬ್ರಹ್ಮಾನಂದಯತಿವರ್ಯರು ಅದ್ವೈತಸಿದ್ಧಿಗೆ ಲಘುಚಂದ್ರಿಕೆಯೆಂಬ ವ್ಯಾಖ್ಯಾನವನ್ನು ಮಾಡಿ, ರಾಮತೀರ್ಥರ ವ್ಯಾಖ್ಯಾನಗಳನ್ನು ನಿರಾಕರಿಸಿರುತ್ತಾರೆ. ರಾಮಾನುಜಮತೀಯರಾದ ಅನಂತಾಚಾರ್ಯರು ಬ್ರಹ್ಮಾನಂದಿಯನ್ನು ನ್ಯಾಯಭಾಸ್ಕರವೆಂಬ ತಮ್ಮ ಗ್ರಂಥದಲ್ಲಿ ದೂಷಿಸಿರುವರು. ಶ್ರೀಲಕ್ಷ್ಮೀನರಸಿಂಹಶಾಸ್ತ್ರಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಯಭಾಸ್ಕರಗ್ರಂಥವನ್ನು ನ್ಯಾಯೇಂದುಶೇಖರವೆಂಬ ತಮ್ಮ ಗ್ರಂಥದಿಂದ ಖಂಡಿಸಿರುತ್ತಾರೆ.

ದುರ್ವಾಸನಾಲಿಪುರನೋಕಹದುಷ್ಪ್ರವೇಶಂ
ದುರ್ವಾರದುರ್ವಿಷಯದುಃಖಫಲಪ್ರಧಾನಂ ।
ದುಷ್ಟಂ ದುರಾಚರಣಕಾನನಮಸ್ತಮೂಲಂ
ನಿರ್ದಗ್ಧುಮತ್ರ ಕರುಣಾವರುಣಾಲಯೇನ ॥ ೧೨ ॥

ಮಾಹೇಶ್ವರೇಣ ಮಹಸಾ ಮಹತಾವತೀರ್ಣಂ
ಶ್ರೀಪಿಂಗಲಾಬ್ದ ಶುಭಫಾಲ್ಗುಣಕೃಷ್ಣಪಕ್ಷೇ ।
ಏಕಾದಶೀಶುಭದಿನೇ ಜಗತೀಶುಭಾಯ
ಲಕ್ಷ್ಮೀನೃಸಿಂಹಸುಧಿಯಾಮನುಜಾತ್ಮನೈವ ॥ ೧೩ ॥

'ಅಕುರ್ವನ್ವಿಹಿತಂ ಕರ್ಮ ನಿಂದಿತಂ ಚ ಸಮಾಚರನ್।'—ಎಂಬಂತೆ ಅನರ್ಥಕರವಾಗಿರುವ ಶಾಸ್ತ್ರವಿಹಿತಸ್ವಧರ್ಮಾನಾಚರಣೆ, ನಿಷಿದ್ಧಾಚರಣೆಗಳೆಂಬ ಮಹಾಗೊಂಡಾರಣ್ಯವು, ಅನಾದಿಜನ್ಮಗಳ ದುರಿತದುರ್ವಾಸನೆಗಳೆಂಬ ಮಹಾವೃಕ್ಷಗಳಿಂದ ನಿಬಿಡವಾಗಿ, ಪ್ರವೇಶಿಸಲಾಗದಂತೆ ಇದ್ದು, ತಡೆಗಟ್ಟಲಾಗದಂಥ ನಿಷಿದ್ಧವಿಷಯಾಸಕ್ತಿಯಿಂದ ದುಃಖಫಲವನ್ನೇ ಉಂಟುಮಾಡುವಂಥದ್ದಾಗಿತ್ತು; ಇಂಥ ಈ ಮಹಾರಣ್ಯವನ್ನು ನಿರ್ಮೂಲವಾಗುವಂತೆ ಸುಟ್ಟುಹಾಕುವ ಉದ್ದೇಶದಿಂದ, ಕರುಣಾಸಮುದ್ರನಾದ ಶ್ರೀಪರಮೇಶ್ವರನು, ಶ್ರೀಪಿಂಗಳನಾಮಸಂವತ್ಸರದ ಫಾಲ್ಗುಣಮಾಸದ ಕೃಷ್ಣಪಕ್ಷದ ಶುಭೈಕಾದಶೀ ದಿವಸ, ಶ್ರೀಲಕ್ಷ್ಮೀನರಸಿಂಹಶಾಸ್ತ್ರಿವರ್ಯರ ಅನುಜರರೂಪದಿಂದ ಜಗತ್ತಿನ ಕಲ್ಯಾಣಕ್ಕಾಗಿ ಅವತರಿಸಿಬಂದನು.

ಶ್ರೀಶೃಂಗಗಿರಿ ಜಗದ್ಗುರುಪೀಠದಲ್ಲಿ ಪ್ರತಿ ಹನ್ನೊಂದನೆಯ ಪರ್ಯಾಯದಲ್ಲಿ ಶ್ರೀಭಗವತ್ಪಾದರೇ ಸಾಕ್ಷಾತ್ತಾಗಿ ಪೀಠಾಧಿಪತಿಗಳಾಗುವರು.

ಪ್ರಸೇದುಃ ಸರ್ವಾಶಾಃ ಪ್ರಯಯುರಥ ತಾಪಾಃ ಸುಕೃತಿನಾಂ
ವವುಃ ಶೀತಾ ವಾತಾಃ ವವಮುರಥ ವೃಷ್ಟಿಂ ಜಲಮುಚಃ ।
ವಿಜಹ್ರುಃ ಶ್ರುತ್ಯಂತಾ ಜಗುರಥ ಚ ಗೀತಂ ಯುವತಯೋ
ನನಂದುರ್ದಾಯಾದಾ ನಯನಸರಣಿಂ ತೇಜಸಿ ಗತೇ ॥ ೧೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹತ್ತುದಿಕ್ಕುಗಳೂ ನಿರ್ಮಲವಾಗಿ ಪ್ರಕಾಶಿಸಿದುವು; ಪುಣ್ಯವಂತರ ತಾಪಗಳೆಲ್ಲ ಶಾಂತವಾದುವು; ಹಿತಕರಗಳಾಗಿ ಗಾಳಿಗಳು ಮಂದಮಂದವಾಗಿ ಬೀಸಿದುವು; ಮೇಘಗಳು ಮಳೆಗರೆದುವು; ವೇದಾಂತಗಳು ಉಲ್ಲಾಸಗೊಂಡವು; ಯುವತಿಯರಾದ ಸುಮಂಗಲಿಯರು ಆನಂದದಿಂದ ಸ್ತುತಿಸಿ ಗಾನಮಾಡಿದರು; ಬಂಧುವರ್ಗವೆಲ್ಲ ಆನಂದಸಾಗರದಲ್ಲಿ ಓಲಾಡಿತು. ಲೋಕಕ್ಷೇಮಕ್ಕಾಗಿ ಶ್ರೀಪರಶಿವನ ತೇಜಸ್ಸು ಆವಿರ್ಭವಿಸಿದ ಶುಭಮುಹೂರ್ತದಲ್ಲಿ ಸಕಲಮಂಗಳ ಸೂಚಕಗಳಾದ ಚಿಹ್ನೆಗಳೂ ವ್ಯಕ್ತಗೊಂಡವು.

ಜಾತಸ್ಯ ತಸ್ಯ ಜನನೋಚಿತಜಾತಕರ್ಮ-
ಜಾತಂ ಜನಾನುಸರಣಾಜ್ಜನಕಾತ್ತದಾಸೀತ್ ।
ಸಂಶುದ್ಧಸರ್ವಚರಿತಸ್ಯ ಸಮಸ್ತಲೋಕ-
ಸಂಸ್ಕರ್ತುರದ್ಭುತಮತೇಃ ಕಿಮು ಸಂಸ್ಕೃತಿಃ ಸ್ಯಾತ್ ॥ ೧೫ ॥

ಜನಿಸಿಬಂದ ಶಿಶುವಿಗೆ ತಂದೆಗಳಾದ ಶ್ರೀರಾಮಶಾಸ್ತ್ರಿಗಳು ಜಾತಕರ್ಮಾದಿ ಎಲ್ಲ ಸಂಸ್ಕಾರಗಳನ್ನೂ ಯಥೋಚಿತವಾಗಿ ಲೋಕಾಚಾರವನ್ನು ಅನುಸರಿಸಿ ನೆರವೇರಿಸಿದರು. ಆದರೆ, ಸಂಸ್ಕಾರವು ಅಶುದ್ಧಿಯನ್ನು ಕಳೆಯುವ ಕರ್ಮವು. ನಿತ್ಯಶುದ್ಧಚರಿತ್ರೆಯುಳ್ಳ, ಸಮಸ್ತಲೋಕಕ್ಕೂ ಸಂಸ್ಕಾರಮಾಡುವ ಸರ್ವಜ್ಞನಾದ ಶ್ರೀಪರಶಿವನಿಗೆ ಸಂಸ್ಕಾರವೆಂತಹುದು?

ಶಿವಃ ಸಾಕ್ಷಾತ್ಸೋಽಯಂ ಶಿವತರಚರಿತ್ರಸ್ತ್ವಯಮಸೌ
ಶಿವಾ ಕಾಂತಿಸ್ತಸ್ಯಾಂ ಶಿವಕರಕೃಪಾಶೇವಧಿರಪಿ ।
ಶಿವಾ ವಾಣೀ ವಕ್ತ್ರೇ ಶಿವಚರಣಭಕ್ತಿರ್ಹೃದಿ ತತಃ
ಶಿವಸ್ಯಾವಿರ್ಭಾವಾತ್ಯಾಖ್ಯಾಮಲಭತ ಶಿವಾರಾಧನಪರಃ ॥ ೧೬ ॥

ಈ ಶಿಶುವು ಸಾಕ್ಷಾತ್ಪರಶಿವಸ್ವರೂಪನೇ ಆಗಿದ್ದನು. ಶಿವ(ಮಂಗಳ)ತರಚರಿತ್ರೆಯುಳ್ಳವನು; ದೇಹದಲ್ಲಿಯೂ ಮಂಗಳಕರವಾದ ಕಾಂತಿ; ಲೋಕಕ್ಕೆಲ್ಲ ಮಂಗಳವನ್ನುಂಟುಮಾಡುವಂಥ ಕೃಪಾಳುವು; ಮುಖದಲ್ಲಿ ಮಂಗಳಕರವಾದ ಮಾತು; ಹೃದಯದಲ್ಲಿ ಶಿವಪಾದಾರವಿಂದಗಳಲ್ಲಿ ನಿರತಿಶಯವಾದ ಭಕ್ತಿ; ಈ ಪ್ರಕಾರವಾಗಿ ಶ್ರೀಶಿವಾರ್ಚನೆಯಲ್ಲಿ ಶ್ರದ್ಧಾವಂತನಾಗಿರುವ ಈ ಶಿಶುವಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri
ಶಿವಸ್ವಾಮಿಯೆಂದೇ ಅನ್ವರ್ಥವಾಗಿ ನಾಮಕರಣವನ್ನು ಮಾಡಿದರು.

ಶಿವಾರ್ಚಾವ್ಯೈಯ್ಯಗ್ರ್ಯಾ ಶಿವಮಹಿಮನುತ್ಯಾ ಮಧುರಯಾ
ತ್ರಿಪುಂಡ್ರಸ್ಯಾಪ್ಯತ್ಯಾ ತ್ರಿಪುರಹರಮೂರ್ತೇರ್ನಿಜಶಿಶೋಃ ।
ಮುಹುಃ ಸ್ಮೇರಂ ಸ್ಮೇರಂ ಮುಖಕಮಲಮಾಲೋಕ್ಯ ಜನಕಃ
ಪರಾಮೋದಾಂಭೋಧೇಃ ಕಥಮಪಿ ನ ಪಾರಂ ಹೃದಿ ಯಯೌ
॥ ೧೭ ॥

ಯಾವಾಗಲೂ ಶ್ರೀಶಿವಪೂಜೆಯಲ್ಲಿ ಆಸಕ್ತಿ; ಮೃದುಮಧುರವಾಗಿ ಶಿವನಸ್ತೋತ್ರ; ಭಸ್ಮಧಾರಣೆಯಲ್ಲಿ ಶ್ರದ್ಧೆ;—ಈ ನಡತೆಯುಳ್ಳ ಶ್ರೀತ್ರಿಪುರಹರನಾದ ಪರಶಿವನ ರೂಪನಾದ ಶಿಶುವಿನ ಮುಖಕಮಲವನ್ನು ಮತ್ತೆ ಮತ್ತೆ ನೋಡುತ್ತ ನೋಡುತ್ತ, ತಂದೆಗಳಾದ ಶ್ರೀರಾಮಶಾಸ್ತ್ರಿಗಳು ಪರಮಾನಂದ ಸಮುದ್ರದ ಪಾರವನ್ನೇ ಕಾಣದಾದರು.

ಜನಕೋ ಜನಕಾವನೀಪತುಲ್ಯಃ
ಕುಶಲೋಽಯಂ ಕುಲಮುದ್ಧರಿಷ್ಯತೀತಿ ।
ಪ್ರತಿಪಾದಿತನಿಶ್ಚಯಃ ಸಹರ್ಷಂ
ಮಹಿಮಾನಂ ಸ್ವಮವಾಪ ಬೋಧಶಕ್ತ್ಯಾ ॥ ೧೮ ॥

ತತ್ತ್ವಜ್ಞಾನಸಂಪನ್ನರಾಗಿ ಜನಕಮಹಾರಾಜನಿಗೆ ಸಮಾನರಾಗಿದ್ದ ಶ್ರೀರಾಮಶಾಸ್ತ್ರಿಗಳು, ವಂಶೋದ್ಧಾರಕನಾದ ಈ ಸುಪುತ್ರನು ಸರ್ವವಂಶೋದ್ಧಾರಕನಾಗುವನೆಂಬ ನಿಶ್ಚಯದಿಂದ ಸಂತುಷ್ಟರಾಗಿ, ತಮ್ಮ ತತ್ತ್ವಜ್ಞಾನದ ಮಹಿಮೆಯಿಂದ ಸ್ವಸ್ವರೂಪವನ್ನು ಪಡೆದು ಧನ್ಯರಾದರು.

ವಿದ್ಯಾಧಿಪೋಽಪಿ ಲಿಖಿತಾಮವನೌ ಲಿಪಿಂ ಯ-
ಲ್ಲಿಪ್ಯಂತರಸ್ಯ ಕರಣಾಯ ಮಮಾರ್ಜ ರಮ್ಯಂ ।
ತದ್ಭಾವಿನಃ ಪ್ರಣತದುರ್ಲಿಪಿಮಾರ್ಜನಸ್ಯ
ಸಂಸೂಚಕಂ ಸಮಭವತ್ಕರುಣಾಂಬುರಾಶೇಃ ॥ ೧೯ ॥

ಸ್ವತಃಸಿದ್ಧಸರ್ವವಿದ್ಯಾಧಿಪರಾಗಿದ್ದರೂ ಶ್ರೀಶಿವಸ್ವಾಮಿಶಿಶುಗಳು, ತಾವು ಬರೆದ ಲಿಪಿ(ಲೇಖನ)ಗಳನ್ನು, ಹೊಸಬರೆವಣಿಗೆಗಾಗಿ ಅಳಿಸುತ್ತಿದ್ದುದು,

Sri Vidyabharathi Book Centre, Sringeri

CC-O. In Public Domain. Digitized by eGangotri

ಕರುಣಾಸಮುದ್ರರಾದ ಅವರು, ತಮ್ಮನ್ನು ನಮಸ್ಕರಿಸುವವರ ದುಷ್ಟಬ್ರಹ್ಮಲಿಪಿಯನ್ನು ಮುಂದೆ ಅಳಿಸುವಿಕೆಯನ್ನು ಸೂಚಿಸುತ್ತಿತ್ತು.

ಬಾಲಃ ಸಲೀಲಮತಿನೋಹನಬಾಲಕೇಲೌ
ನೂನಂ ಸಮಾನವಯಸಾಮಪಿ ಬಾಲಕಾನಾಂ।
ವ್ಯಾಖ್ಯಾತವಾನ್ಯದಿಹ ತಂತ್ರವಿದಾಂ ರಹಸ್ಯಂ
ವ್ಯಾಖ್ಯಾನಪೀಠವಿಧೃತೇಃ ಪಿಶುನಂ ತದಾಸೀತ್ ॥ ೨೦ ॥

ಬಾಲ್ಯಾವಸ್ಥೆಯಲ್ಲಿಯೇ ಶ್ರೀಶಿವಸ್ವಾಮಿಗಳು ಮನೋಹರಗಳಾದ ಬಾಲಕರ ಆಟಗಳಲ್ಲಿಯೂ ಸಹ ತಮ್ಮ ಸಮಾನವಯಸ್ಸಿನ ಬಾಲಕರಿಗೆ ಆ ಆಟಗಳ ರಹಸ್ಯವನ್ನು ವಿವರಿಸುತ್ತಿದ್ದುದು, ಅವರು ಮುಂದೆ ಜಗದ್ಗುರು ವ್ಯಾಖ್ಯಾನಪೀಠವನ್ನು ಅಲಂಕರಿಸುವರೆಂಬುದಕ್ಕೆ ಸೂಚಕವಾಗಿತ್ತು.

ಕ್ರೋಧನೇ ವತ್ಸರೇ ಜ್ಯೇಷ್ಠೇ ಜ್ಯೇಷ್ಠೇನೈವ ಸಿತಚ್ಛದೇ।
ಸಾವಿತ್ರ್ಯಾ ಸರ್ವಭೂತಾನಾಂ ಸ ಸಾವಿತ್ರ್ಯಾಭಿಭೂಷಿತಃ ॥ ೨೧ ॥

ಜ್ಯೇಷ್ಠಭ್ರಾತೃಗಳಾದ ಶ್ರೀಲಕ್ಷ್ಮೀನರಸಿಂಹಶಾಸ್ತ್ರಿಗಳವರಿಂದ ಕ್ರೋಧನ ಸಂವತ್ಸರದ ಜ್ಯೇಷ್ಠಮಾಸದ ಶುಕ್ಲಪಕ್ಷದಲ್ಲಿ,ಶ್ರೀಶಿವಸ್ವಾಮಿಗಳಿಗೆ, ಸಕಲ ಜಗತ್ಕಾರಣಳಾದ ಶ್ರೀ ಗಾಯತ್ರೀದೇವಿಯ ಮಂತ್ರೋಪದೇಶಸಂಸ್ಕಾರ ಮಹೋತ್ಸವವು ಬೆಳಗಿತು.

ತುಂಗಾತೀರೇ ಸಕಲಯಮಿನಾಮಾಶ್ರಮೇ ಶೃಂಗಶೈಲೇ
ಪೂರ್ವಾಚಾರ್ಯೈಃ ಕ್ರಮನಿಯಮಿತಂ ಶಾರದಾಭದ್ರಪೀಠಂ।
ಅಧ್ಯಾಸೀನೋಽಶರಣಶರಣಃ ಸರ್ವತಂತ್ರಸ್ವತಂತ್ರೋ
ವಿದ್ಯಾಧೀಶೋ ವಿಮಲಚರಿತೋ ವಿಶ್ವಭೂತಾನುಕಂಪೀ ॥೨೨॥

ವಾಂಛಾಪೂರ್ತೌ ನಿಜಪದಜುಷಾಂ ಲಜ್ಜಯನ್ಕರ್ಣಮುಖ್ಯಾನ್
ಆಚಾರ್ಯಾಣಾಮಮಿತತಪಸಾಂ ಸಾರ್ವಭೌಮೋ ನೃಸಿಂಹಃ।
ಶ್ರಾವಂ ಶ್ರಾವಂ ಮಧುರಮಧುರಂ ಮಾಣವೀಯಂ ಚರಿತ್ರಂ
ಹ್ಯಾನಂದಾಬ್ಧೌ ನಿಪತಿತತನುರ್ನೈವ ಪಾರಂ ಪ್ರಪೇದೇ ॥ ೨೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಮಯದಲ್ಲಿ, ವೈದಿಕಧರ್ಮರಕ್ಷಣೆಗಾಗಿ ಶ್ರೀಪರಶಿವಪರಾವತಾರರಾಗಿ ಬಂದು ಶ್ರೀಮಚ್ಛಂಕರಭಗವತ್ಪಾದಾಚಾರ್ಯರವರಿಂದ ತುಂಗಾತೀರದ ಶ್ರೀಶೃಂಗಗಿರಿಯಲ್ಲಿ ಸ್ಥಾಪಿತವಾಗಿರುವ ಶ್ರೀಶಾರದಾಜಗದ್ಗುರುಪೀಠದ ಅವಿಚ್ಛಿನ್ನಪರಂಪರೆಯಲ್ಲಿ ಬಂದು, ಸರ್ವಶಾಸ್ತ್ರಪಾರಂಗತರೂ, ಬ್ರಹ್ಮವಿದ್ಯಾಧಿಪತಿಗಳೂ, ಸದಾಚಾರನಿಷ್ಠರೂ, ಸರ್ವಭೂತದಯಾಪರವಶರೂ, ಅಗತಿಕರಿಗೆ ಗತಿದಾಯಕರೂ ಆದ ಶ್ರೀನೃಸಿಂಹಭಾರತೀಮಹಾಸ್ವಾಮಿಗಳವರು, ಶರಣಾಗತರಾದವರ ಸಕಲೇಷ್ಟಾರ್ಥವನ್ನೂ ಪೂರ್ಣಮಾಡುವಿಕೆಯಲ್ಲಿ ದಾನಶೂರರೆಂದು ಪ್ರಖ್ಯಾತರಾದ ಕರ್ಣಾದಿಗಳನ್ನೂ ಲಜ್ಜೆಗೊಳಿಸುತ್ತ, ಪರಮಹಂಸಪರಿವ್ರಾಜಕಾಚಾರ್ಯಸಾರ್ವಭೌಮರಾಗಿ ವಿರಾಜಿಸುತ್ತಿದ್ದು, ಈ ಶ್ರೀಶಿವಸ್ವಾಮಿಬಾಲಕರ ದಿವ್ಯವಾದ ಚರಿತ್ರೆಯನ್ನು ಕೇಳುತ್ತ ಕೇಳುತ್ತ ಪರಮಾನಂದಪರವಶರಾದರು.

ತಂ ಮಾಣವಂ ಶುಭಗುಣೈರುಪಶೋಭಮಾನಂ
ರಾಕಾಶಶಾಂಕರಮಣೀಯವಿಲಾಸವಕ್ತ್ರಂ ।
ರಾಜಾನುಕೂಲ್ಯಬಲತೋ ಮುದಿತೋ ಮನೀಷೀ
ಮೇನೇ ವಿಭುಂ ಭುವನದೇಶಿಕಯೌವರಾಜ್ಯೇ ॥ ೨೪ ॥

ಶುಭಗುಣಚರಿತೆಗಳಿಂದಲೂ ಶರತ್ಕಾಲದ ಪೂರ್ಣಚಂದ್ರನಿಗೆ ಸಮಾನಮುಖದಿಂದಲೂ ಶೋಭಿಸುತ್ತಿದ್ದ ಶ್ರೀಶಿವಸ್ವಾಮಿಕುಮಾರರನ್ನು ಶ್ರೀನೃಸಿಂಹಭಾರತೀಗುರುವರ್ಯರು, ಮಹೀಶೂರರಾಜರಾದ ಶ್ರೀಕೃಷ್ಣರಾಜಪ್ರಭುಗಳ ಸಹಾಯದಿಂದ, ಜಗದ್ಗುರುಸಾಮ್ರಾಜ್ಯಕ್ಕೆ ಯುವರಾಜಪಟ್ಟಕ್ಕೆ ಸಮರ್ಥರನ್ನಾಗಿ ನಿಶ್ಚಯಿಸಿದರು.

ಶ್ರೀಮುಮ್ಮಡಿಕೃಷ್ಣರಾಜಪ್ರಭುಗಳು ಜ್ಯೋತಿಃಶಾಸ್ತ್ರದಲ್ಲಿ ಪ್ರವೀಣರಾಗಿದ್ದು, ಶ್ರೀಶಿವಸ್ವಾಮಿಗಳ ಜಾತಕವನ್ನು ಪರಿಶೀಲಿಸಿ,—'ಇವರು ನಮಗೂ ನಿಮಗೂ ಮಾತ್ರವಲ್ಲ, ಜಗತ್ತಿಗೆಲ್ಲ ಗುರುಗಳಾಗುತ್ತಾರೆ'—ಎಂದು ಶ್ರೀರಾಮಶಾಸ್ತ್ರಿಗಳಿಗೆ ಇವರ ನಾಮಕರಣಮಹೋತ್ಸವದಲ್ಲಿಯೇ ಭವಿಷ್ಯವನ್ನು ಸೂಚಿಸಿದರು. ಶ್ರೀನೃಸಿಂಹಭಾರತೀಗುರುಗಳವರು ಮೈಸೂರುರಾಜಧಾನಿಗೆ ವಿಜಯಬೆಳೆಸಿದಾಗ, ಶ್ರೀಲಕ್ಷ್ಮೀನರಸಿಂಹಶಾಸ್ತ್ರಿಗಳ ಸಮ್ಮತಿಯನ್ನು ಪಡೆದು,

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀಶಿವಸ್ವಾಮಿಗಳನ್ನು ಶ್ರೀಜಗದ್ಗುರುಪೀಠಕ್ಕೆ ಉತ್ತರಾಧಿಕಾರಿಶಿಷ್ಯರನ್ನಾಗಿ ಮಾಡಲು ಪ್ರಭುಗಳು ಸಹಾಯಮಾಡಿದರು.

ಗುರುರಾಡ್ಗುರುಭಾವಯೌವರಾಜ್ಯೇ
ಗುಣಿಧೌರೇಯಮಿಮಂ ನಿಧಿತ್ಸಯಾಥ।
ಸಕಲಾಶ್ರಮಸಾರಭೂತಮೇತಂ
ಸ ಸಮಗ್ರಾಹಯದಾಶ್ರಮಂ ತುರೀಯಂ ॥ ೨೫ ॥

ಇದರಂತೆ, ಗುಣಿಶ್ರೇಷ್ಠರಾದ ಶ್ರೀಶಿವಸ್ವಾಮಿಗಳನ್ನು ಮಹತ್ತರವಾದ ಗುರುಯುವರಾಜಪದವಿಯಲ್ಲಿ ನಿಯೋಜಿಸುವ ಇಚ್ಛೆಯಿಂದ, ಶ್ರೀನೃಸಿಂಹ ಭಾರತೀಗುರುಸಾರ್ವಭೌಮರು, ಶ್ರೀಶಿವಸ್ವಾಮಿಗಳಿಗೆ, ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳಲ್ಲಿ ಶ್ರೇಷ್ಠವಾಗಿ ಸಾರಭೂತವಾಗಿರುವ ತುರೀಯಾಶ್ರಮ ರೂಪವಾದ ಪರಮಹಂಸಪಾರಿವ್ರಾಜ್ಯಾಶ್ರಮವನ್ನು ಅನುಗ್ರಹಿಸಿದರು.

ವಿಮಲೇನ ಗುರೋರ್ಗುರೋಃ ಪ್ರಸಾದಾ-
ದಪಿ ಸತ್ತ್ವೇನ ಹೃದಿಸ್ಥಿತೇನ ಯದ್ವತ್ ।
ಗಲಹಸ್ತಿತಮಾಂತರಂ ರಜಸ್ತ-
ನ್ನನು ಕಾಷಾಯಮಿಷೇಣ ಕಾಶತೇಽಸ್ಮ ॥ ೨೬ ॥

ಪರಮಹಂಸಸನ್ಯಾಸದೀಕ್ಷೆಯನ್ನು ಅನುಗ್ರಹಿಸಿ ಶ್ರೀನೃಸಿಂಹಭಾರತೀ ಗುರುವರ್ಯರು ಶ್ರೀಶಿವಸ್ವಾಮಿಗಳಿಗೆ ಕಾಷಾಯವಸ್ತ್ರವನ್ನು ಧಾರಣಮಾಡಿಸಿದರು. ಅತ್ಯಂತಪರಿಶುದ್ಧವಾದ ಶ್ರೀಗುರುಸಾರ್ವಭೌಮರ ಮಹತ್ವದ ಅನುಗ್ರಹದ ಮಹಿಮೆಯಿಂದ, ಶ್ರೀಶಿವಸ್ವಾಮಿಗಳ ಅಂತಃಕರಣದಲ್ಲಿ ಸೂಕ್ಷ್ಮವಾಗಿ ಅಡಗಿದ್ದ ರಜೋಗುಣಗಳೆಲ್ಲ, ಕತ್ತಿಗೆಕೈಹಾಕಿನೂಕಿದಂತೆ; ಈ ಕಷಾಯ ವಸ್ತ್ರದ ರೂಪದಿಂದ ಹೊರಕ್ಕೆ ತಳ್ಳಲ್ಪಟ್ಟಿತೋ—ಎಂಬಂತೆ ತೋರುತ್ತಿತ್ತು.

ಮತಿಮಾನ್ ಗುರುಸಾರ್ವಭೌಮಭಾವಂ
ನಿಪುಣಂ ಸಂಪ್ರತಿ ವಕ್ಷ್ಯತೀತಿ ಮತ್ವಾ ।
ಗುರುಣಾ ಕರುಣಾಪರೇಣ ದತ್ತಂ
ಪರಿಜಗ್ರಾಹ ಕರೇಣ ದಂಡರಾಜಂ ॥ ೨೭ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುಸಾರ್ವಭೌಮಪದವಿಯ ಭಾರವನ್ನು ತಮಗೆ ಶ್ರೀಗುರುವರ್ಯರು ವಹಿಸುತ್ತಾರೆಂದು ತಿಳಿದ ಬುದ್ಧಿಶಾಲಿಗಳಾದ ಶ್ರೀಶಿವಸ್ವಾಮಿಗಳು, ತಮ್ಮ ಗುರುತರವಾದ ಕಾರ್ಯಭಾರವನ್ನು ನಿರ್ವಹಿಸುವುದಕ್ಕಾಗಿಯೋ ಎಂಬಂತೆ, ಶ್ರೀಗುರುವರ್ಯರು ಕೊಟ್ಟ ಶ್ರೇಷ್ಠವಾದ ದಂಡವನ್ನು ಪರಿಗ್ರಹಿಸಿದರು.

ಭಜತಾಮಿಮಮಾಶ್ರಮಂ ತುರೀಯಂ
ಕರಲಗ್ನಃ ಕಿಲ ಮುಕ್ತಿರಾಜ್ಯಲಾಭಃ ।
ಇತಿ ಸದ್ಗುರುದತ್ತವೈಜಯಂತೀ
ಯತಿಹಸ್ತೇ ವಿರರಾಜ ದಂಡಭಾವಾತ್ ॥ ೨೮ ॥

ತುರೀಯವಾದ ಈ ಪರಮಹಂಸಾಶ್ರಮವನ್ನು ಸ್ವೀಕರಿಸಿದವರಿಗೆ ಮುಕ್ತಿಸಾಮ್ರಾಜ್ಯವು ಹಸ್ತಗತವೇ ಆಗುವುದು—ಎಂಬಂತೆ, ಶ್ರೀಗುರುಸಾರ್ವಭೌಮರು ಅನುಗ್ರಹಿಸಿದ ವೈಜಯಂತಿಯು ಶ್ರೀಶಿವಸ್ವಾಮಿಗಳ ಕೈಯಲ್ಲಿ ದಂಡರೂಪದಿಂದ ಶೋಭಿಸಿತು.

ಕುಮಾರ್ಗೇ ಗಚ್ಛಂತಂ ಕುಟಿಲಗತಿಮೇತಂ ಪ್ರಸಭತೋ
ನಯಂತಂ ವ್ಯಾಮೋಹಂ ವಿಷಯವಿಷವೇಗಾದಪಿ ಮುನೀನ್ ।
ಮನೋವ್ಯಾಲಂ ಲೋಲಂ ದಮಯ ಯತಿವರ್ಯೇತಿ ಗುರುಭಿಃ
ತದಾ ದತ್ತಂ ದಂಡಂ ಕರಸರಸಿಜಾತೇಽಕಲಯತ ॥ ೨೯ ॥

ಅಶಾಸ್ತ್ರೀಯವಾದ ದುರ್ಮಾರ್ಗದಲ್ಲಿಯೇ ನಡೆಯುವ, ವಕ್ರಸ್ವಭಾವದ, ತತ್ತ್ವಜ್ಞರಾದ ಮುನಿಗಳನ್ನೂ ಸಹ ವಿಷಮಯವಾದ ವಿಷಯಗಳ ವ್ಯಾಮೋಹದ ಕಡೆಗೇ ಎಳೆಯುವ; ಚಪಲಸ್ವಭಾವದ, ಈ ಮನಸ್ಸೆಂಬ ವ್ಯಾಲ(ದುಷ್ಟಗಜ, ಸರ್ಪ)ವನ್ನು, ಬಲಾತ್ಕಾರವಾಗಿ ನಿಗ್ರಹಿಸಿ ವಶಮಾಡಿಕೋ ಎಂದು ಬೋಧಿಸುತ್ತ ಶ್ರೀಗುರುವರ್ಯರು ಅನುಗ್ರಹಿಸಿದ ದಂಡವು ಬಾಲ ಯತಿವರ್ಯರ ಹಸ್ತಕಮಲದಲ್ಲಿ ಬೆಳಗಿತು.

ಮಹಾವಾಕ್ಯಾರ್ಥಾನಾಂ ಮಹಿತಮುಪದೇಶಂ ಗುರುಮುಖಾತ್
ಸ ತು ಶ್ರುತ್ವಾ ಮತ್ವಾ ತದನು ಚ ನಿದಿಧ್ಯಾಸನರತಃ ।

Sri Vidyabharathi Book Centre, Sringeri

CC-0. In Public Domain. Digitized by eGangotri

ನವಾಂ ಕಾಂತಿಂ ಬಿಂದನ್ನವನವವಿಲಾಸ್ಯೈರವಿಕಲಂ
ದಿಶಾ ಶೌನಾಸೀರೀ ದಿನಕರಲಲಾಮೇವ ರುರುಚೇ || ೩೦ ||

ಶ್ರೀಗುರುವರ್ಯರ ಸಾಕ್ಷಾನ್ಮುಖಕಮಲದಿಂದ ವೇದಾಂತಮಹಾವಾಕ್ಯಗಳ ತತ್ತ್ವಾರ್ಥವನ್ನು ಯಥಾವತ್ತಾಗಿ ಶ್ರವಣಮಾಡಿ, ಅದನ್ನು ಮನನ ಮಾಡಿ, ಅನಂತರ ನಿದಿಧ್ಯಾಸಮಾಡಿ, ಅದರ ಸಾಕ್ಷಾತ್ಕಾರವನ್ನು ಪಡೆದು, ಬ್ರಹ್ಮಾತ್ಮಾನುಭವದ ನಿತ್ಯನಿರತಿಶಯಾನಂದಾನುಭವದಿಂದ ದೇದೀಪ್ಯಮಾನವಾಗಿರುವ ಬಾಲಯತಿವರ್ಯರ ಮುಖಕಮಲವು, ಉದಯಿಸುತ್ತಿರುವ ಬಾಲಸೂರ್ಯನಿಂದ ಪೂರ್ವದಿಕ್ಕು ಹೇಗೋ ಹಾಗೆ ಕಂಗೊಳಿಸಿತು.

ಶ್ರೀಶಿವಸ್ವಾಮಿಗಳಿಗೆ ಸನ್ನ್ಯಾಸದೀಕ್ಷೆಯನ್ನು ಅನುಗ್ರಹಿಸಿದ ಆ ದಿವಸದ ರಾತ್ರಿಯಲ್ಲಿಯೇ, ಬಾಲಯತೀಶ್ವರರು,—"ಶಿವೋಽಹಂ, ಶಿವೋಽಹಂ, ಶಿವೋಽಹಂ—ಎಂದು ಮೂರು ಬಾರಿ ಸ್ವಪ್ನದಲ್ಲಿ ಸ್ವಾನುಭವವನ್ನು ವ್ಯಕ್ತಪಡಿಸಿದರು.

ಜನನೀ ಜನಕಃ ಸ್ತ್ರಿಯಃ ಪುಮಾಂಸೋ
ನಿಜವಂಶೇ ಚಿರಕಾಲಜನ್ಮಭಾಜಃ |
ನಿಖಿಲಾ ನರಸಿಂಹತಾಂ ಪ್ರಯಾತಾ
ಇತಿ ನಾಮಾಪಿ ನೃಸಿಂಹಭಾರತೀತಿ || ೩೧ ||

'ನಾಬ್ರಹ್ಮವಿತ್ಕುಲೇ ಭವತಿ'—ಎಂಬ ಶ್ರುತಿಯಂತೆ, ಆತ್ಮಜ್ಞಾನಸಂಪನ್ನರಾದವರ ವಂಶದವರೆಲ್ಲರೂ ಸದ್ಗತಿಯನ್ನು ಪಡೆಯುವರು. ಇದರಂತೆ ಶ್ರೀಶಿವಸ್ವಾಮಿಗಳು ಪರಮಹಂಸಸನ್ನ್ಯಾಸಿಗಳಾಗಿ ಬ್ರಹ್ಮಾತ್ಮತಾನುಭವಶಾಲಿಗಳಾಗಲು, ಇವರ ವಂಶದ ಸ್ತ್ರೀಪುರುಷಾದಿಗಳೆಲ್ಲರೂ ನರಶ್ರೇಷ್ಠತೆಯನ್ನು ಪಡೆದರೆಂಬುದನ್ನು ತಿಳಿಸುವಂತೆ, ಈ ಬಾಲಯತಿವರ್ಯರಿಗೆ ಶ್ರೀನೃಸಿಂಹಭಾರತೀ—ಎಂದೇ ಶ್ರೀಗುರುವರ್ಯರು ಪಟ್ಟನಾಮದಿಂದ ನಾಮಕರಣಮಾಡಿದರು.

ಸತ್ತ್ವಾಚ್ಚ ಚಿತ್ತ್ವಾದಪಿ ಮೋದಭಾವಾ-
ತ್ಸ್ವತಃ ಶಿವತ್ವಾದಭಿನವ್ಯಭಾವಾತ್ |

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಸಚ್ಚಿದಾನಂದಶಿವಾಭಿನವ್ಯ-
ನೃಸಿಂಹಭಾರತ್ಯಭಿಧಾಪ್ಯಲಾಸೀತ್ ॥ ॥ ೩೧ ॥

"ಬ್ರಹ್ಮವಿದ್ಬ್ರಹ್ಮೈವ ಭವತಿ।"—"ಬ್ರಹ್ಮವನ್ನು ತಾನೆಂದು ಅನುಭವ ಪಡೆದವನು ಬ್ರಹ್ಮವೇ ಆಗುವನು"—ಎಂಬ ಶ್ರುತಿಯಂತೆ, ಇವರು ಸಚ್ಚಿದಾನಂದಸ್ವರೂಪದ ಬ್ರಹ್ಮದ ಅನುಭವವನ್ನು ಪಡೆದದ್ದರಿಂದಲೂ, ಸ್ವತಃ ಮಂಗಳಸ್ವರೂಪರಾದ್ದರಿಂದಲೂ, ಇದು ಹೊಸಸ್ವರೂಪದ ಲಾಭವಾಗಿ ಇದ್ದುದರಿಂದಲೂ, ಈ ಎಲ್ಲ ಅರ್ಥವನ್ನೂ ಸಂಗ್ರಹಿಸಿ, **ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀಮಹಾಸ್ವಾಮಿಗಳೆಂದೇ** ಪಟ್ಟನಾಮವು ಇವರಿಗೆ ಅನ್ವರ್ಥವಾಗಿ ಶೋಭಿಸಿತು.

ಕಲಿನಾ ಕಲುಷಾನಲೇನ ತಪ್ತಾ
ಕಲಯಾ ಸ್ಪ್ರಷ್ಟುಮಪಿ ಕ್ಷಮಾ ಕ್ಷಮೇತಿ ।
ಗುರುಣಾದೃತಪಾದುಕೇ ತದಾನೀಂ
ಪ್ರತಿಜಗ್ರಾಹ ವಿಶುದ್ಧಯೈವ ಭಕ್ತ್ಯಾ ॥ ೩೨ ॥

ಬಹುದೋಷಪೂರ್ಣವಾದ ಕಲಿಯೆಂಬ ಬೆಂಕಿಯಿಂದ ತಪ್ತವಾಗಿರುವ ಈ ಭೂಮಿಯು ಸ್ಪರ್ಶಕ್ಕೂ ಅಯೋಗ್ಯವಾಗಿದೆಯೆಂಬ ಭಾವದಿಂದಲೋ ಎಂಬಂತೆ ಗುರುವರ್ಯರು ಕೊಟ್ಟ ಪಾದುಕೆಗಳನ್ನು ಶಿಷ್ಯಸ್ವಾಮಿಗಳು ವಿಶುದ್ಧ ಭಕ್ತಿಯಿಂದ ಪರಿಗ್ರಹಿಸಿದರು.

ಸಮುಪಾಸ್ತ ಸತಾಂ ತತೋ ಗುರೂಣಾಂ
ಚರಣೌ ತೌ ಶರಣಂ ನಿಧಾಯ ಭಕ್ತ್ಯಾ ।
ಭುವಿ ಯದ್ಗುರುಭಕ್ತಿರನ್ಯಭಂಗ್ಯೈ
ಸ್ಪೃಹಯಂತ್ಯಸ್ಪೃಹಯಾಳವೋऽಪಿ ಕಾಮಂ ॥ ೩೩ ॥

ಈ ಪ್ರಕಾರವಾಗಿ ಶಾಸ್ತ್ರವಿಧಿಯನ್ನನುಸರಿಸಿ ಪರಮಹಂಸಪಾರಿವ್ರಾಜ್ಯಾಶ್ರಮವನ್ನು ಶ್ರೀಸದ್ಗುರುಗಳವರ ಸಾಕ್ಷಾತ್ಕರಕಮಲದಿಂದ ಪಡೆದು, ಶ್ರೀಬಾಲಯತಿಶೇಖರರು ಅನಂತರ ತಮ್ಮ ಶ್ರೀಸದ್ಗುರುಗಳವರ ಚರಣನಳಿನ ಯುಗಳಗಳ ಅರ್ಚನೆಯನ್ನು ಮಾಡಿದರು. ಬ್ರಹ್ಮಾತ್ಮತತ್ತ್ವಾನುಭವದಿಂದ

Sri Vidyabharathi Book Centre, Sringeri

CC-0. In Public Domain. Digitized by eGangotri

ಕೃತಕೃತ್ಯರಾಗಿ, ಬೇರೇನನ್ನೂ ಅಪೇಕ್ಷಿಸದವರೂ ಸಹ, ಈ ಅನುಭವವನ್ನು ಅನುಗ್ರಹಿಸಿರುವ ಶ್ರೀಸದ್ಗುರುವರ್ಯರ ಚರಣಸೇವೆಯನ್ನು ನಿರಂತರವೂ ಅಪೇಕ್ಷಿಸುತ್ತಾರಲ್ಲವೆ!

ಪರಿಕ್ಲಿಷ್ಟಾಃ ಪೂರ್ವಂ ಭೃಶಮನನುರೂಪಾಶ್ರಯವಶಾತ್
ವಿಚಿನ್ವಾನಾಶ್ಚಾನ್ಯಂ ಚಿರಮಖಿಲವಿದ್ಯಾ ಯುವಗುರುಂ ।
ರಜೋಹೀನೈ ರಮ್ಯಪ್ರಕೃತಿಸುಮನೋಭಿಃ ಸುರಭಿಲಂ
ಹ್ಯುಪೈತ್ಯಾಸ್ಮಿನ್ ಸಕ್ತಾ ಧಿಷಣಧಿಷಣೇ ಸಂದದೃಶಿರೇ ॥ ೩೫ ॥

"ಇದುವರೆಗೂ ನಮಗೆ ತಕ್ಕ ಆಶ್ರಯವು ದೊರೆಯದೆ ತುಂಬ ಕ್ಲೇಶವನ್ನು ಅನುಭವಿಸಿದೆವು; ಇನ್ನು ಮುಂದೆ ನಮ್ಮ ಅರ್ಥವನ್ನು ಯಥಾವತ್ತಾಗಿ ಪ್ರತಿಪಾದಿಸುವಂಥ ಯುವಕಗುರುವನ್ನು ಹುಡುಕಬೇಕು", ಎಂದು–"ಪುರಾಣ ನ್ಯಾಯಮೀಮಾಂಸಾಧರ್ಮಶಾಸ್ತ್ರಾಂಗಮಿಶ್ರಿತಾಃ । ವೇದಾಶ್ಚತ್ವಾರ ಇತ್ಯೇತಾ ವಿದ್ಯಾ ಹ್ಯೇತಾಶ್ಚತುರ್ದಶ ॥"—ಎಂಬ ಹದಿನಾಲ್ಕು ವಿದ್ಯೆಗಳೂ, ಸರ್ವದೋಷರಹಿತರೂ, ಮನೋಹರಸ್ವಭಾವದವರೂ ಆಗಿ, ಬೃಹಸ್ಪತಿಸಮ ಬುದ್ಧಿಪ್ರತಿಭಾಶೋಭಿತರಾಗಿರುವ ಈ ಯುವಕಗುರುಶ್ರೇಷ್ಠರನ್ನು ಹೊಂದಿ ಇವರಲ್ಲಿಯೇ ಸ್ಥಿರವಾಗಿ ನೆಲೆಸಿದವು.

ಅವರೋಪಯಿತುಂ ನಿಜಂ ತು ಭಾರಂ
ಗುರುಕೋಟೀರಮಣಿಃ ಸಮೋದಮೇನಂ ।
ಯುವರಾಜಗುರುಂ ಕದಾಚಿದೂಚೇ
ವಚನಂ ಮಂಜುಲಮಂಜುಲಂ ಮನೀಷೀ ॥ ೩೬ ॥

ಶ್ರೀಸದ್ಗುರುಶಿಖಾಮಣಿಗಳಾಗಿರುವ ಶ್ರೀನೃಸಿಂಹಭಾರತೀಮಹಾಸ್ವಾಮಿಗಳವರು ವಾರ್ಧಿಕ್ಯದ ನಿಮಿತ್ತದಿಂದ ತಮ್ಮ ಗುರುರಾಜ್ಯಭಾರವನ್ನು ಸಮರ್ಥರಾಗಿರುವ ಶಿಷ್ಯೋತ್ತಮರಿಗೆ ವಹಿಸಿಕೊಡುವ ಉದ್ದೇಶದಿಂದ, ಶಿಷ್ಯವರ್ಯರನ್ನು ಕುರಿತು ಮೃದುಮನೋಹರವಾಗಿ ಹೀಗೆ ಹೇಳಿದರು.

ಪರಿಪಾಲಯಿತುಂ ನ ಪಾರಯಾಮೋ
ಜರಯಾ ಹಂತ ನಿತಾಂತತಾಂತಿಭಾಜಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಇಯಂತೀ ತವ ಪಾಲನೀಯಮಸೀಮಾ
ನೃಪಮೂಲಂ ಪಾಲಯ ಸಾನುಕಂಪಮೇತಾಂ ॥ ೩೭ ॥

"ಜಗದೇಕಾಧಿಪತಿಯೂ ಸರ್ವವಿದ್ಯಾಧಿಪತಿಯೂ ಆಗಿರುವ ಶ್ರೀಪರಮೇಶ್ವರನು ಚರಾಚರಾತ್ಮಕವಾದ ಜಗತ್ತನ್ನು, ಪ್ರಾಣಿಗಳ ಧರ್ಮಾಧರ್ಮಕರ್ಮಗಳಿಗನುಸಾರವಾಗಿ ಸೃಷ್ಟಿಸಿ, ಇದರ ಯೋಗಕ್ಷೇಮಕ್ಕೆ ಆವಶ್ಯವಾಗಿರುವ ವರ್ಣಾಶ್ರಮಧರ್ಮಗಳ ನಿಯಮವನ್ನು ತಿಳಿಸುವ ವೇದಶಾಸ್ತ್ರಗಳನ್ನು, ಹಿರಣ್ಯಗರ್ಭಬ್ರಹ್ಮನ ಮೂಲಕ ಲೋಕದಲ್ಲಿ ಪ್ರಚಾರಮಾಡಿರುತ್ತಾನೆ. ಕಾಲಕ್ರಮದಲ್ಲಿ ಜನಗಳಿಗೆ ವಿಷಯಾಸಕ್ತಿಯು ಪ್ರಬಲಿಸಿ, ಧರ್ಮನಿಯಮಗಳಲ್ಲಿ ಶ್ರದ್ಧೆಯು ಸಹಜವಾಗಿ ಶಿಥಿಲವಾಗಿ, ಲೋಕವು ಅನರ್ಥಗಳಿಗೆ ಈಡಾಗುವುದು. ಆಗ ಶ್ರೀಪರಮೇಶ್ವರನು ಕರ್ಮಭೂಮಿಯಾಗಿರುವ ಈ ಭರತಖಂಡದಲ್ಲಿ ಅವತರಿಸಿ ಬಂದು ಶಾಸ್ತ್ರೀಯಧರ್ಮೋದ್ಧಾರವನ್ನು ಮಾಡುವನು. ದುಷ್ಟನಿಗ್ರಹಪೂರ್ವಕವಾದ ಧರ್ಮರಕ್ಷಣೆಯನ್ನು ಶ್ರೀವಿಷ್ಣುವೇ ಮಾಡುತ್ತಾನೆ. ಆದರೆ, ಈ ಕಲಿಕಾಲದಲ್ಲಿ ನಾಸ್ತಿಕಮತಗಳ ಪ್ರಾಬಲ್ಯದಿಂದ ಶಾಸ್ತ್ರಶ್ರದ್ಧೆಯೇ ನಿರ್ಮೂಲವಾಗಿದ್ದಾಗ, ಶ್ರೀಪರಮೇಶ್ವರನೇ ಶ್ರೀಮಚ್ಛಂಕರಭಗವತ್ಪೂಜ್ಯಪಾದಾಚಾರ್ಯರವರ ರೂಪದಿಂದ ಅವತರಿಸಿಬಂದು, ಅನಿತರಸಾಧಾರಣಗಳಾದ ಸಾಹಸವಿಶೇಷಗಳಿಂದ, ತಾವೂ ಪರಮಹಂಸಪಾರಿವ್ರಾಜ್ಯವನ್ನು ಪರಿಗ್ರಹಿಸಿ, ಪ್ರಸ್ಥಾನತ್ರಯಭಾಷ್ಯರಚನಾದಿಗಳಿಂದ ಅವೈದಿಕಮತಗಳನ್ನೆಲ್ಲ ನಿರಾಕರಿಸಿ, ವೈದಿಕಸನಾತನವರ್ಣಾಶ್ರಮಧರ್ಮಾನುಷ್ಠಾನದ ಆವಶ್ಯಕತೆಯನ್ನು ಅಬಾಧಿತವಾಗಿ ಪ್ರತಿಪಾದಿಸಿಕೊಟ್ಟು, ಧರ್ಮರಕ್ಷಣೆಯನ್ನು ದೃಢಪಡಿಸಿದರು. ಮತ್ತು, ಇದು ಲೋಕದಲ್ಲಿ ಸ್ಥಿರವಾಗಿರುವಂತೆ ಭರತಖಂಡದ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಠಗಳನ್ನು ಸ್ಥಾಪಿಸಿ, ಗುರುಪರಂಪರೆಯನ್ನು ಪ್ರವರ್ತಿಸಿದ್ದಾರೆ;

"ಇವುಗಳಲ್ಲಿ ಈ ಶ್ರೀಶೃಂಗಗಿರಿಮಠವು ಪ್ರಥಮವೂ ಪ್ರಧಾನವೂ ಆದುದು. ಬ್ರಹ್ಮವಿದ್ಯಾಭಿಮಾನಿನಿಯಾಗಿರುವ ಶ್ರೀಶಾರದಾದೇವಿಯನ್ನು ಒಲಿಸಿಕೊಂಡು, ಇಲ್ಲಿಯೇ ಸ್ಥಾಪಿಸಿದ್ದಾರೆ. ಪೂರ್ವೋತ್ತರಮೀಮಾಂಸಾದ್ವಯದಲ್ಲಿಯೂ ಸುನಿಷ್ಣಾತರಾದ ಶ್ರೀಸುರೇಶ್ವರರನ್ನು ಈ ಪೀಠದಲ್ಲಿ ಪ್ರಥಮಾಚಾರ್ಯರನ್ನಾಗಿ ನಿಯಮಿಸಿದರು. ಈ ಪರಂಪರೆಯಲ್ಲಿನ ಆಚಾರ್ಯರು

Sri Vidyabharathi Book Centre, Sringeri

 CC-0. In Public Domain. Digitized by eGangotri

ಗಳೆಲ್ಲರೂ ಅನಾದಿಸಂಪ್ರದಾಯಸಂಪ್ರಾಪ್ತವಾಗಿರುವ ಶಾಸ್ತ್ರತತ್ತ್ವವನ್ನು ಅಚ್ಚಳಿಯದಂತೆ ಕಾಪಾಡಿಕೊಂಡುಬರುತ್ತ, ಲೋಕಕ್ಕೆ ಶಾಸ್ತ್ರೀಯಧರ್ಮ ವನ್ನು ಉಪದೇಶಾದಿಗಳಿಂದ ಪ್ರಚಾರಮಾಡುತ್ತಲೇ ಇದ್ದಾರೆ;

"ಕುಟುಂಬದವರ ಯೋಗಕ್ಷೇಮವನ್ನು ನಡೆಸಿಕೊಂಡು ಬರುವುದೇ ಮನೆಯ ಯಜಮಾನನ ಹೊಣೆ; ಪ್ರಜೆಗಳ ಇಹಪರಗಳ ಶ್ರೇಯೋಭ್ಯುದಯ ಗಳನ್ನು ಕಾಪಾಡಿಕೊಂಡುಬರುವುದೇ ರಾಜನ ರಾಜ್ಯಭಾರ; ಇದರಂತೆ ಜನತೆಗೆ ಇಹಪರಗಳ ಶ್ರೇಯಸ್ಸು ಸಿದ್ಧಿಸುವಂತೆ ಜನರು ಸ್ವಧರ್ಮನಿರತರಾಗಿರುವಂತೆ ಮಾಡುವುದೇ ಗುರುಪೀಠಾಧಿಷ್ಠಿತರಾಗಿರುವ ಗುರುಗಳ ಗುರುತರವಾದ ಭಾರವು;

"ನಾವು ಇದುವರಿವಿಗೂ ಯಥಾಶಕ್ತಿಯಾಗಿ ಶ್ರೀಶಾರದಾಚಂದ್ರ ಮೌಳಿರತ್ನಗರ್ಭಗಣಪತಿ–ಮುಂತಾದ ದೇವತೆಗಳ, ಶ್ರೀಶಂಕರಭಗವತ್ಪಾದ ರವರ ಅನುಗ್ರಹದ ಬಲದಿಂದ, ವೈದಿಕಧರ್ಮರಕ್ಷಣೆ ಮತ್ತು ಪ್ರಚಾರಗಳ ಕಾರ್ಯವನ್ನು ನಿರ್ವಹಿಸಿದ್ದಾಗಿದೆ. ಈಗ ವಾರ್ಧಿಕ್ಯದ ದೆಸೆಯಿಂದ ಇನ್ನು ಮುಂದೆ ನಮಗೆ ಈ ಭಾರವನ್ನು ನಿರ್ವಹಿಸುವ ಸಾಮರ್ಥ್ಯವು ಕ್ಷೀಣವಾಗಿದೆ. ಈ ಕಾರ್ಯವು ಅವಿಚ್ಛಿನ್ನವಾಗಿ ನೆರವೇರುವುದಕ್ಕಾಗಿಯೇ ಶಿಷ್ಯಸ್ವೀಕಾರ ವನ್ನು ಮಾಡಿದ್ದಾಗಿದೆ. ಇನ್ನು ಮುಂದೆ ನಾವು ಈ ಕಾರ್ಯದಿಂದ ನಿವೃತ್ತ ರಾಗಿ, ವಿಶ್ರಾಂತಿಯನ್ನು ಅನುಭವಿಸಬಯಸುತ್ತೇವೆ;

"ಆದ ಕಾರಣ ಇನ್ನುಮುಂದೆ, ಶಿಷ್ಯವರ್ಗದ ಮೇಲೆ ದಯೆಯನ್ನು ಇಟ್ಟು, ಅವರನ್ನು ಸದ್ಬೋಧೆಯಿಂದ ರಕ್ಷಿಸುವ ಕರ್ತವ್ಯಭಾರವು ನಿಮ್ಮ ದಾಗಿದೆ"—ಎಂದು ತಿಳಿಸಿದರು.

ಪಶ್ಚಾದ್ದಿದರ್ಶಯಿಷವೋ ನಿಜರಾಜ್ಯಸೀಮಾ-
 ಮಾನೀಯ ಪೂರ್ವಗುರವಸ್ತು ಗುರುಂ ಯುವಾನಂ ।
ಚಂದ್ರಾವತಂಸಸಹಿತಾಃ ಸಹಜಾವಬೋಧಾಃ
 ಪ್ರಸ್ಥಾಯ ರಮ್ಯಪರಿವಾರಪರೀತಪಾರ್ಶ್ವಾಃ ॥ ೩೮ ॥

ಪೂತಾನಿ ಪಾದಸರಸೀರುಹಪಾಂಸುಸಂಗಾತ್
 ಕೃತ್ವಾ ಸ್ಥಲಾನಿ ವಿವಿಧಾನಿ ಚ ತಾನಿ ತಾನಿ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಷ್ಯವ್ರಜಂ ಚ ಸಕಲಂ ಪರಿದರ್ಶಯಂತೋ
ನಿರ್ವ್ಯಾಜಪೂರ್ಣಕೃಪಯಾ ಚರಿತಾರ್ಥಯಂತಃ ॥೩೯॥

ಬೋಧಪ್ರರೋಹನಿಕರಾ ಬಹುಲೋಪದೇಶ-
ಪಾಥಃಪ್ರಚಾರಪರಿಪಾಟಿಕಯಾನುವೇಲಂ ।
ಪಾಲ್ಯಾ ವಿಧೇಯನಿವಹೇಷ್ವಿತಿ ಬೋಧಯಂತೋ
ಭೂಯೋಽಪಿ ಶೃಂಗಧರಣೀಧರಶೃಂಗಮಾಪುಃ ॥೪೦॥

ಶ್ರೀನರಸಿಂಹಭಾರತೀಮಹಾಸ್ವಾಮಿಗಳವರು ಉಗ್ರತಪಃಸಿದ್ಧರಾಗಿದ್ದು 'ಉಗ್ರನರಸಿಂಹಭಾರತಿಗಳು'— ಎಂದು ಪ್ರಸಿದ್ಧಿಪಡೆದಿದ್ದರು ತಪೋಜ್ಞಾನ ವೃದ್ಧರಾಗಿದ್ದ ಇವರನ್ನು 'ವೃದ್ಧನರಸಿಂಹಭಾರತಿ'-ಗಳೆಂದೂ ಬಲ್ಲವರು ವ್ಯವಹರಿಸುತ್ತಾರೆ, ಇವರು ವಿಪುಲವಾಗಿ ದೇಶದಲ್ಲಿ ಸಂಚರಿಸಿ, ಧರ್ಮಬೋಧೆ ಯನ್ನು ಮಾಡುತ್ತ, ದೇಶದ ಎಲ್ಲರಾಜರುಗಳನ್ನೂ ಶಿಷ್ಯರನ್ನಾಗಿಸಿದ್ದರು. ಹೈದರಾಬಾದುನಿಜಾಮರೂ, ಮಹಾರಾಷ್ಟ್ರದ ಪೇಶ್ವೆಯವರೂ, ಇಂದೂರು ಹೋಳ್ಕರರೂ, ಹಾಗೆಯೇ ಬ್ರಿಟಿಷ್—ಅಧಿಕಾರಿಗಳೂ ಸಹ, ಇವರ ಜ್ಞಾನ ವೈರಾಗ್ಯತಪಃಸಿದ್ಧಿಗಳಿಗೆ ಮಾರುಹೋಗಿ ಶಿಷ್ಯತ್ವವನ್ನು ಅಂಗೀಕರಿಸಿದ್ದರು. ಇವರ ಅದ್ಭುತಚರಿತ್ರೆಯನ್ನು ಬೇರೆಕಡೆಯಲ್ಲಿ ತಿಳಿಯತಕ್ಕದ್ದು ಇಲ್ಲಿ ಅವಕಾಶ ವಿಲ್ಲವಾಗಿದೆ.

ಹೀಗೆ ತಮ್ಮ ಗುರುತರವಾದ ಜಗದ್ಗುರುತ್ವದ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಿ, ಈಗ ತಮ್ಮ ಪರಮಸಿದ್ಧಿಯನ್ನು ಆಕಾಂಕ್ಷಿಸಿ, ಆ ಕಾರ್ಯದ ನಿರ್ವಾಹಕ್ಕಾಗಿ ಯೋಗ್ಯಶಿಷ್ಯರನ್ನು ಸಿದ್ಧಗೊಳಿಸಿ, ಇವರಿಗೆ ತಕ್ಕ ಶಿಕ್ಷಣವನ್ನು ನೀಡುವುದಕ್ಕಾಗಿ, ಬಾಲಶಿಷ್ಯರಿಗೆ ತಮ್ಮ ಧರ್ಮರಾಜ್ಯದ ಮೇರೆಯ ಪರಿಚಯವನ್ನು ಮಾಡಿಸುವ ಉದ್ದೇಶದಿಂದ, ಶ್ರೀಚಂದ್ರ ಮೌಳೀಶ್ವರ—ಮುಂತಾದ ಆರಾಧ್ಯದೇವತೆಗಳೊಡನೆ, ಯುವಶಿಷ್ಯರನ್ನು ಜತೆಯಲ್ಲಿ ಕರೆದುಕೊಂಡು, ದೇಶಸಂಚಾರಕ್ಕಾಗಿ, ಮಿತಪರಿವಾರಸಹಿತವಾಗಿ ಪ್ರವಾಸಗೊಂಡರು.

ತಮ್ಮ ಪರಮಪವಿತ್ರವಾದ ಪಾದಕಮಲಗಳ ಧೂಳುಗಳಿಂದ ಆಯಾ ದೇಶಗಳನ್ನು ಪಾವನಗೊಳಿಸುತ್ತ; ಅಲ್ಲಲ್ಲಿನ ಶಿಷ್ಯಸಮೂಹಗಳನ್ನು ತಮ್ಮ

Sri Vidyabharathi Book Centre, Sringeri

CC-0. In Public Domain. Digitized by eGangotri

ಅಮೋಘದಿವ್ಯದರ್ಶನೋಪದೇಶವಚನಾದಿಗಳಿಂದ ಧನ್ಯರನ್ನಾಗಿಸುತ್ತ, ಯುವಶಿಷ್ಯರಿಗೆ ಆಯಾದೇಶ ಮತ್ತು, ಶಿಷ್ಯವರ್ಗಗಳ ಪರಿಚಯವನ್ನು ಮಾಡಿ ಕೊಡುತ್ತ, "ಇವರೆಲ್ಲರನ್ನೂ ಸದುಪದೇಶಗಳಿಂದ ಧರ್ಮನಿರತರನ್ನಾಗಿ ಮಾಡುತ್ತ ರಕ್ಷಿಸುವ ಭಾರವು ನಿಮ್ಮದಾಗಿದೆ"—ಎಂದು ತಿಳಿಸುತ್ತ, ಪ್ರವಾಸ ವನ್ನು ಮುಕ್ತಾಯಗೊಳಿಸಿ, ಮತ್ತೆ ಶೃಂಗಗಿರಿಗೆ ಹಿಂತಿರುಗಿ ಬಂದರು. ಈ ಪ್ರಕಾರವಾಗಿ ಶಿಷ್ಯರುಗಳೊಂದಿಗೆ ಎರಡು ಬಾರಿ ದೇಶಸಂಚಾರವನ್ನು ಮಾಡಿದರು.

ನಿಖಿಲಂ ನಿಜವೈಭವಂ ಕದಾಚಿ-
ನ್ನಿಜಶಿಷ್ಯೇ ವಿನಿವೇಶ್ಯ ಸಂಪ್ರದಾಯಂ ।
ನಿಜಯೋಗಬಲೇನ ದೇಶಿಕೇಂದ್ರೋ
ನಿಜಧಾಮಾವಸತಿಂ ಸಮಾಲಲಂಬೇ ॥ ॥ ೪೧ ॥

ಈ ರೀತಿಯಲ್ಲಿ ತಮ್ಮ ಸರ್ವವೈಭವವನ್ನೂ, ಕರ್ತವ್ಯಭಾರವನ್ನೂ, ಗುರುಸ್ಥಾನದ ಸತ್ಸಂಪ್ರದಾಯವನ್ನೂ ಶಿಷ್ಯವರ್ಯರಿಗೆ ವಹಿಸಿಕೊಟ್ಟು, ವೃದ್ಧ ದೇಶಿಕೇಂದ್ರರು ತಮ್ಮ ಯೋಗಸಿದ್ಧಿಯ ಬಲದಿಂದ, ತಮ್ಮ ಸಹಜವಾದ ವಿದೇಹಕೈವಲ್ಯಸಾಮ್ರಾಜ್ಯವನ್ನು ಪಡೆದು ಶೋಭಿಸಿದರು.

ಗುರವೇ ಕರಣೀಯಕಾರ್ಯಜಾತಂ
ಗುರುಭಕ್ತ್ಯೈವ ಸಮಾಚಚಾರ ಸೋऽಯಂ ।
ನಿಖಿಲಂ ನಿಜಲೋಕಸಂಗ್ರಹಾರ್ಥಂ
ನ ಚ ಕರ್ತಾ ನ ಚ ಕರ್ಮ ತತ್ತ್ವತೋऽಸ್ತಿ ॥ ೪೨ ॥

ಈ ಪ್ರಕಾರವಾಗಿ ತಮ್ಮ ಗುರುವರ್ಯರು ಪರಮಸಿದ್ಧಿಸಾಮ್ರಾಜ್ಯ ವನ್ನು ಪಡೆಯಲಾಗಿ, ಶಿಷ್ಯವರ್ಯರು, ಗುರುವರ್ಯರಲ್ಲಿದ್ದ ತಮ್ಮ ಗುರುತರ ವಾದ ಭಕ್ತಿಪೂರ್ವಕವಾಗಿ, ಅನಂತರ ಕರ್ತವ್ಯವಾಗಿದ್ದ ಸಮಸ್ತಶಾಸ್ತ್ರೀಯ ಕರ್ತವ್ಯಗಳನ್ನೂ ಯಥಾವತ್ತಾಗಿ ನೆರವೇರಿಸಿದರು.

"ದೇಹಪ್ರಾಣೇಂದ್ರಿಯಮನೋಬುದ್ಧಿಸಾಕ್ಷೀ ಚಿದವ್ಯಯಃ ।
ಅಕರ್ತಾಹಮಭೋಕ್ತಾಹಮಸಂಗೋऽಹಮಹಂ ಶಿವಃ ॥

4

Sri Vidyabharathi Book Centre, Sringeri

CC-O. In Public Domain. Digitized by eGangotri

"ದೇಹ ಪ್ರಾಣ, ಇಂದ್ರಿಯ ಮನಸ್ಸು, ಬುದ್ಧಿ—ಇವುಗಳಿಗೂ ಇವುಗಳ ಸಕಲವ್ಯವಹಾರಗಳಿಗೂ ಸಾಕ್ಷಿಯಾಗಿರುವ ಆತ್ಮನು ನಿತ್ಯನಿರ್ವಿಕಾರಚಿನ್ಮಾತ್ರ ಸ್ವರೂಪನಾಗಿ, ಅಸಂಗಸ್ವಭಾವದವನೂ, ಕರ್ತೃತ್ವಭೋಕ್ತೃತ್ವರೂಪಸರ್ವ ಸಂಸಾರರಹಿತನಾಗಿ ಪರಮಾನಂದಾದ್ವಿತೀಯಸ್ವರೂಪನೂ, ಆಗಿರುವನು" ಎಂಬ ಅದ್ವಿತೀಯಾಖಂಡಸಚ್ಚಿದಾನಂದತತ್ತ್ವವು ಅನುಭವಸಿದ್ಧವಾಗಿರುವ ಮಹಾತ್ಮರಿಗೆ ಕರ್ತೃತ್ವವಾಗಲಿ ಕರ್ಮವಾಗಲಿ ಎನಿದೆ ?

ಆದರೂ, ವ್ಯವಹಾರದಲ್ಲಿ ಇರುವಪರ್ಯಂತವೂ—"ಲೋಕಸಂಗ್ರಹ ಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ"–ಎಂಬ ಶ್ರೀಭಗವದುಪದೇಶದಂತೆ, ಶಾಸ್ತ್ರಾನುಸರಣೆಯು ಆದರ್ಶರೂಪವಾಗಿ ಮಹಾತ್ಮರ ಆಚರಣೆಯಾಗಿರುತ್ತದೆ.

"ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ವಿದ್ವಾಂಸ್ತಥಾಸಕ್ತಶ್ಚಿಕೀರ್ಷುರ್ಲೋಕಸಂಗ್ರಹಂ ॥"

"ತತ್ತ್ವದ ಪರಿಜ್ಞಾನವಿಲ್ಲದವರು ಶಾಸ್ತ್ರವಿಧಿಯನ್ನು ಅವಶ್ಯ ಅನುಸರಿಸಲೇಬೇಕು; ತತ್ತ್ವದ ಪರಿಜ್ಞಾನಸಿದ್ಧರೂ ಹಾಗೆಯೇ ಅನುಸರಿಸಬೇಕು; ಕರ್ತೃತ್ವಭಾವನೆ–ಫಲಾಸಕ್ತಿಗಳಿಲ್ಲದಿರುವುದು ಮಾತ್ರವೇ ತತ್ತ್ವಜ್ಞರ ವಿಶೇಷವು"–ಎಂದು ಶ್ರೀಗೀತೆಯು ಬೋಧಿಸುತ್ತದೆ. ಇದರಂತೆ ಶ್ರೀಗುರುವರ್ಯರು ಸರ್ವವ್ಯವಹಾರವನ್ನೂ ಯಥೋಚಿತವಾಗಿ ನಿರ್ವಹಿಸಿದರು.

ಸಮನಂತರಮೇವ ಸಾಧುಶೀಲೈಃ
ಸಮನುಪ್ರಾರ್ಥಿತ ಏವ ಶಿಷ್ಯಲೋಕೈಃ ।
ಸಮಯೇ ಶುಶುಭೇಽಧಿಕಂ
ಶುಭಂಯೂವಧಿರುಹ್ಯಾಸನಮಾಶ್ರಿತಂ ಪುರಾಣ್ಯೈಃ ॥೪೩॥

ಅನಂತರ ಸದ್ಧರ್ಮಸದಾಚಾರಮಂಡಿತರಾದ ಶಿಷ್ಯವೃಂದದವರಿಂದ ಪ್ರಾರ್ಥಿತರಾಗಿ,ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಗುರುವರ್ಯರು ಸಂಪ್ರದಾಯಪರಂಪರೆಯಿಂದ ಬಂದ, ಪೂರ್ವಾಚಾರ್ಯರುಗಳು ಅಲಂಕರಿಸಿದ ಜಗದ್ಗುರುಶ್ರೀಶಾರದಾವ್ಯಾಖ್ಯಾನಸಿಂಹಾಸನವನ್ನು ಶುಭಮುಹೂರ್ತದಲ್ಲಿ ಆರೋಹಿಸಿ, ಅಧಿಕವಾಗಿ ವಿರಾಜಿಸಿದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಆರೂಢೇ ಚ ತಥಾ ಗುರಾವಭಿನವೇ ವ್ಯಾಖ್ಯಾನಸಿಂಹಾಸನಂ
ಪಾತಾಲಂ ಗತವಾಂಸ್ತ್ರಪಾಭರವಶಃ ಪಾದೋದರಾಣಾಂ ಪತಿಃ।
ಯಂತಾರಂ ಯಮಿನಾಂ ಗತೋ ಬಲಭಿದಂ ಭೀತ್ವಾ ಚ ವಾಚ-
ಸ್ಪತೌ ಅನ್ಯೇಷಾಂ ವಿದುಷಾಂ ವಿವೇಚನವಿಧೌ ಕಾ ವಾ ಕಥಾ
ಭೂತಲೇ ॥ ೪೪ ॥

ನೂತನಗುರುಗಳು ಭವ್ಯವಾದ ವ್ಯಾಖ್ಯಾನಸಿಂಹಾಸನವನ್ನು ಮಂಡಿಸ ಲಾಗಿ, ಸಮಸ್ತಶಾಸ್ತ್ರಪಾಂಡಿತ್ಯದ ಪರಾಕಾಷ್ಠೆಯಲ್ಲಿ ಬೆಳಗುತ್ತಿರುವ ಗುರು ವರ್ಯರನ್ನು ಕಂಡು, ಸಹಸ್ರಮುಖಗಳ ಎರಡುಸಹಸ್ರನಾಲಿಗೆಗಳಿಂದ ವ್ಯಾಖ್ಯಾನಮಾಡುವ ಚಾತುರ್ಯಶಾಲಿಯಾದ ಆದಿಶೇಷನು ಸಹ ನಾಚಿಕೆ ಯಿಂದ ಎದುರಿಗಿರಲಾರದೆ ಪಾತಾಳದಲ್ಲಿ ಅಡಗಿಕೊಂಡನು; ಸಕಲವಿದ್ಯಾ ಪಾರಂಗತರಾದ ದೇವಗುರುಗಳಾದ ಬೃಹಸ್ಪತಿಗಳೂ ಭಯಪಟ್ಟು, ಸನ್ಯಾಸಿಗಳ ನಿಯಾಮಕನಾದ ಇಂದ್ರನ ಮರೆಹೊಕ್ಕರು; ಹೀಗಿರುವಲ್ಲಿ ಲೋಕದಲ್ಲಿ ಇತರ ವಿದ್ವಾಂಸರುಗಳ ಕಥೆಯೇನು ?

ಇಹಪರಸಂಸಾರದಲ್ಲಿ ತೀವ್ರವಿರಕ್ತಿಶಾಲಿಗಳಾಗಿ ಪರಮಹಂಸ ಪಾರಿವ್ರಾಜ್ಯವನ್ನು ಅವಲಂಬಿಸಿರುವ ಸನ್ಯಾಸಿಗಳು, ಪರಮಪುರುಷಾರ್ಥವಾದ ಮೋಕ್ಷದ ಸಿದ್ಧಿಗೆ ಸಾಧನವಾಗಿರುವ ಆತ್ಮತತ್ತ್ವಜ್ಞಾನವನ್ನು ತಿಳಿಸುವ ಉಪನಿಷತ್ತುಗಳನ್ನು–'ಉಪನಿಷದಮಾವರ್ತಯೇತ್'–ನಿರಂತರವೂ ಅಭ್ಯಾಸ ಮಾಡುತ್ತಿರಬೇಕೆಂದು ಶ್ರುತಿಯು ವಿಧಿಸುತ್ತದೆ. ಇಂಥ ಸನ್ಯಾಸಾಶ್ರಮವನ್ನು ಸ್ವೀಕರಿಸಿ, ವೇಷಮಾತ್ರದಿಂದ ತುಷ್ಟರಾಗಿ, ಭಿಕ್ಷಾದಿಜೀವನದಲ್ಲಿ ಆಸಕ್ತರಾಗಿ, ಉಪನಿಷದಧ್ಯಯನಪರಾಙ್ಮುಖರಾದ ಸನ್ಯಾಸಿಗಳನ್ನು —"ಅರುನ್ಮುಖಾ ಯತೀನ್ ಸಾಲಾವೃಕೇಭ್ಯಃ ಪ್ರಾಯಚ್ಛಂ"—"ಇಂದ್ರನು ಸೀಳುನಾಯಿಗಳ ಬಾಯಿಗೆ ಕೊಡುವನು"—ಎಂಬ ಶ್ರುತಿಯಂತೆ, ಇಂದ್ರನು ದುಷ್ಟಸನ್ಯಾಸಿ ಗಳಿಗೆ ನಿಯಾಮಕನಾಗಿರುವನು. 'ಇಂದ್ರನು ಸನ್ಯಾಸಿಗಳಿಗೆ ನಿಯಾಮಕನಾಗಿ ರುವನು'—ಎಂಬುದನ್ನು ಪರಿಭಾವಿಸಿ ಬೃಹಸ್ಪತಿಗಳು, ಸನ್ಯಾಸಿಶ್ರೇಷ್ಠರಾಗಿ ರುವ ಹೊಸಜಗದ್ಗುರುಗಳನ್ನು ಕಂಡು ಭಯಗ್ರಸ್ತರಾಗಿ, ಇಂದ್ರನನ್ನು ಮರೆ ಹೊಕ್ಕರೆಂದು ಭಾವವು. ಆದರೆ, 'ದೇವಾ ಅಪಿ ನಾ ಭೂತ್ವಾ ಈಶತೇ'-ಎಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರುತಿಯಂತೆ, ತತ್ತ್ವಾನುಭವಸಿದ್ಧರಾಗಿರುವ ಜ್ಞಾನಿಗಳ ಮೇಲೆ ಕೈಮಾಡಲು ದೇವತೆಗಳೂ ಸಮರ್ಥರಲ್ಲ.

ಭದ್ರಾಸನಂ ಸಮಧಿರುಹ್ಯ ಗುರುಪ್ರಸಾದಾ-
ದ್ಭದ್ರಂ ಪ್ರಶಾಸತಿ ಸುಖೇನ ವಿಧೇಯರಾಜ್ಯಂ ।
ಶ್ರದ್ಧಾಂ ವವರ್ಷ ಪರಮಾಸ್ತಿಕತಾಪಯೋದಃ
ಕರ್ಮದ್ರುಮಾ ರುರುಚಿರೇ ನವಪಲ್ಲವಾಢ್ಯಾಃ ॥ ೪೫ ॥

ಮಂಗಳಕರವಾದ ವ್ಯಾಖ್ಯಾನಪೀಠವನ್ನಲಂಕರಿಸಿ ಶ್ರೀಗುರುವರ್ಯರು ಗುರ್ವನುಗ್ರಹದ ಬಲದಿಂದ ಅನಾಯಾಸವಾಗಿ ಶಿಷ್ಯವರ್ಗವನ್ನು ರಕ್ಷಿಸುತ್ತಿರುವಲ್ಲಿ ಶಾಸ್ತ್ರ, ಧರ್ಮ, ಪರಲೋಕ, ಜನ್ಮಾಂತರ, ದೇವತೆಗಳು, ಈಶ್ವರ— ಮುಂತಾದ ವಿಷಯಗಳಲ್ಲಿ ಆಸ್ತಿಕತೆಯೆಂಬ ಮೇಘವು ಉದಯಿಸಿ, ಇವುಗಳಲ್ಲಿ ಜನತೆಗೆ ಶ್ರದ್ಧೆಯೆಂಬ ಮಳೆಯನ್ನು ಸುವೃಷ್ಟಿಯಾಗಿ ಕರೆಯಲು, ಯಜ್ಞಯಾಗಾದಿ ಸಮಸ್ತಶ್ರೌತಸ್ಮಾರ್ತಕರ್ಮಗಳೆಂಬ ಮರಗಳು ಚಿಗುರಿಬೆಳೆದು ಸಮೃದ್ಧವಾಗಿ ಫಲಿಸಿದುವು.

ಶಾಸ್ತ್ರೀಯಧರ್ಮಶ್ರದ್ಧೆಯು ಕಲಿಮಹಿಮೆಯಿಂದ ಕ್ಷೀಣವಾಗಿದ್ದ ಕಾಲದಲ್ಲಿ ಶ್ರೀಭಗವತ್ಪಾದರವರು ಅವತರಿಸಿಬಂದು, ಅನಿತರಸಾಧಾರಣಗಳಾದ ಪ್ರಯತ್ನವಿಶೇಷಗಳಿಂದ ಧರ್ಮೋದ್ಧಾರವನ್ನು ಮಾಡಿದರು. ಪಾಮರ ಪಾಶ್ಚಾತ್ಯಶಿಕ್ಷಣದ ಪ್ರಾಬಲ್ಯಕ್ಕೆ ಅಧೀನವಾಗಿದ್ದು ಧರ್ಮಶ್ರದ್ಧೆಯನ್ನು ಕಳೆದುಕೊಂಡಿದ್ದ ಈ ಕಾಲದಲ್ಲಿ ಶ್ರೀಭಗವತ್ಪಾದರ ಉಪದೇಶಗಳೇ ಅವಶ್ಯವಾಗಿದ್ದುವು. ಆದಕಾರಣ ಶ್ರೀಭಗವತ್ಪಾದರ ಉಪದೇಶಗಳನ್ನು ತಾವೂ ಆಚರಿಸುತ್ತ, ಇತರರಿಗೂ ಬೋಧಿಸುತ್ತ, ಧರ್ಮೋದ್ಧಾರಕ್ಕಾಗಿ ಯತ್ನಶೀಲರಾದರು.

ಲಬ್ಧ್ವಾಧಿಕಾರಮಖಿಲಂ ಗುರುಸಾರ್ವಭೌಮಾ-
ತ್ಪಾರಂಪರೀಗತಮಸಾವನುವರ್ತಮಾನಃ ।
ಶಿಷ್ಯಾನ್ ಶಶಾಸ ಮೃದುಲಂ ಪರಮಾನುಕಂಪಾ-
ಗಂಗಾತರಂಗಪರಿಶೀಲಿತಶೀತಲಾಂಗಃ ॥ ೪೬ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ತುರ್ಣಮೇವ ಕಿಲ ಲೋಕಸಂಗ್ರಹಂ
ಸ್ವಸ್ವರೂಪನಿರತೋಽಪ್ಯಹರ್ನಿಶಂ ।
ಆಚಚಾರ ಗುರುರಾತ್ತಭಕ್ತಿಕಃ
ಚಂದ್ರಮೌಳಿಪರಿಪೂಜನಾದಿಕಂ ॥ ೪೭ ॥

ವೃದ್ಧನರಸಿಂಹಭಾರತೀಗುರುವರ್ಯರು ಪರಮಯೋಗಸಿದ್ಧರೂ ಆತ್ಮತತ್ತ್ವಾನುಭವಸಿದ್ಧಿಯಿಂದ ಜೀವನ್ಮುಕ್ತರೂ ಆಗಿದ್ದ ಶ್ರೀಸದಾಶಿವಬ್ರಹ್ಮೇಂದ್ರರ ಚರಿತ್ರೆಯನ್ನು ಆದರ್ಶಪ್ರಾಯವಾಗಿ ಮತ್ತೆಮತ್ತೆ ದೃಷ್ಟಾಂತವಾಗಿ ವರ್ಣಿಸುತ್ತಿದ್ದರು. ಇದನ್ನು ಮನನಮಾಡಿ ಮಾಡಿ ಭ್ರಮರಕೀಟನ್ಯಾಯದಂತೆ, ಶ್ರೀಗುರುವರ್ಯರೂ ಅವರಂತೆಯೇ ಜ್ಞಾನಸಿದ್ಧರೇ ಆಗಿ, ನಿರಂತರವೂ ಸ್ವಸ್ವರೂಪನಿಷ್ಠರೇ ಆಗಿದ್ದರು. ಆದರೂ, ಗುರ್ವಾಜ್ಞಾಪರವಶತೆಯಿಂದಲೂ, ಶ್ರೀಭಗವದಾಜ್ಞೆಯಂತೆಯೂ, ತಾವು ಸ್ವೀಕರಿಸಿರುವ ಗುರುಪೀಠದ ಕರ್ತವ್ಯತೆಯ ನಿರ್ವಾಹಕ್ಕಾಗಿಯೂ, ಶ್ರೀಚಂದ್ರಮೌಳೀಶ್ವರಾದಿದೇವತಾರಾಧನೆಯೇ ಮೊದಲಾದ ಶಾಸ್ತ್ರೀಯ ಮತ್ತು ಲೌಕಿಕಗಳಾದ ಸರ್ವವ್ಯವಹಾರಗಳನ್ನೂ, ಲೋಕಸಂಗ್ರಹದ ಉದ್ದೇಶದಿಂದ, ಯಥಾವತ್ತಾಗಿ ನೆರವೇರಿಸುತ್ತಿದ್ದರು.

ಶ್ರೀಸದ್ಗುರುಚಕ್ರವರ್ತಿಗಳಿಂದ ಸದ್ಧರ್ಮರಾಜ್ಯದ ಪೂರ್ಣಾಧಿಕಾರ ಪಡೆದು ಶ್ರೀಗುರುವರ್ಯರು ಪರಂಪರಾಗತವಾದ ಧರ್ಮಮಾರ್ಗವನ್ನು ಅನುಸರಿಸುತ್ತ, ಸಚ್ಛ್ರದ್ಧಾವಿಹೀನವಾಗಿರುವ ಲೋಕದಲ್ಲಿ ಪರಮದಯಾಪೂರ್ಣಾಂತರಂಗವುಳ್ಳವರಾಗಿ, ಮೃದುಮಧುರವಾಗಿ ಸದ್ಬೋಧೆಯನ್ನು ಉಂಟುಮಾಡಲುಪ್ರಯತ್ನಿಸುತ್ತಿದ್ದರು.

ಆನಂದರೂಪಜನನಾದಯುಮನ್ನದಾನಾ–
ದಾತ್ಮಾಂತಿಕೋಪನಯನಾದಭಯಪ್ರದಾನಾತ್ ।
ತತೋಽಪ್ಯುಪದೇಶವಶತಶ್ಚ ಬಭೂವ ಲೋಕೇ
ಸಂತೋಷಪೋಷಜನಕೋ ಜನಕೋ ಜನಾನಾಂ ॥೪೮॥

ಸಂತೋಷವನ್ನುಂಟುಮಾಡುವಿಕೆ, ಅನ್ನದಾನ, ಎಲ್ಲರನ್ನೂ ಪ್ರೀತಿಯಿಂದ ತಮ್ಮ ಸಮೀಪಕ್ಕೆ ಬರುಮಾಡಿಕೊಳ್ಳುವಿಕೆ, ಅಭಯವನ್ನು ನೀಡು

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಕೆ, ತತ್ತ್ವವನ್ನು ಉಪದೇಶಮಾಡುವಿಕೆ—ಇವೇ ಮುಂತಾದ ಹಲವಾರು ಕ್ರಮಗಳಿಂದ ಜನರನ್ನು ಒಲಿಸಿಕೊಂಡು, ಅವರನ್ನು ಶಾಸ್ತ್ರೀಯಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಾ, ಜನರಿಗೆಲ್ಲ ನಿಜವಾದ ತಂದೆಗಳೇ ಆದರು.

ಅಶುದ್ಧೀನಾಂ ಶುದ್ಧೀ ರುಚಿರರುಚಿಭಾಜಾಂ ಜನಿಜುಷಾಂ
ಅನಾಥಾನಾಂ ನಾಥೋಽಪ್ಯಯಮುಪಬಲಾನಾಮತಿಬಲಂ ।
ಜನೇರ್ಭೀತ್ಯಾ ಜ್ಞಾನಾದಪಿ ಜನನಭೀತಿಂ ಗತವತಾಂ
ರುಜಃ ಸಂತ್ರಸ್ತಾನಾಮಪಿ ರುಚಿರಜೀವಾತುರಭವತ್ ॥ ೪೯ ॥

ಅಶುದ್ಧರನ್ನು ಶುದ್ಧರನ್ನಾಗಿಯೂ; ಸತ್ಕರ್ಮದಲ್ಲಿ ಆಸಕ್ತಿಯಿಲ್ಲದವರನ್ನು ಅದರಲ್ಲಿ ಆಸಕ್ತಿಯುಳ್ಳವರನ್ನಾಗಿಯೂ; ಅನಾಥರಾದವರಿಗೆ ನಾಥರಾಗಿಯೂ (ಆಶ್ರಯ-ರಕ್ಷಣೆ—ಯಿಲ್ಲದವರಿಗೆ ನಾಥರು—ಆಶ್ರಯದಾತರು, ರಕ್ಷಕರಾಗಿಯೂ); ಸಹಾಯಬಲವಿಲ್ಲದ ದುರ್ಬಲರಿಗೆ ಬಲದಾತರೂ; ನಾನಾವಿಧರೋಗಗಳಿಂದ ನರಳುವವರಿಗೆ ಸಿದ್ಧಜೀವನೌಷಧವಾಗಿಯೂ; ಜನನಮರಣರೂಪ ಸಂಸಾರದಿಂದ ಭಯಗ್ರಸ್ತರಾದವರಿಗೆ ತತ್ತ್ವೋಪದೇಶದಿಂದ ಸಂಸಾರಭೀತಿಯನ್ನು ಪರಿಹರಿಸುವವರೂ ಆಗಿ, ಶ್ರೀಗುರುಸಾರ್ವಭೌಮರು ಲೋಕೋತ್ತರ ಚರಿತ್ರೆಯಿಂದ ಪರಿಶೋಭಿಸಿದರು.

ತುಂಗಾತೀರೋಲ್ಲಾಸಿಶೃಂಗಾದ್ರಿಶೃಂಗಾ-
ದಾಚಾರ್ಯಾಜ್ಞಾಂ ಪಾತುಕಾಮೋ ಯತೀಶಃ ।
ದ್ರಷ್ಟುಂ ಸರ್ವಂ ಶಿಷ್ಯವರ್ಗಂ ಕದಾಚಿ-
ಚ್ಚಕ್ರೇ ರಮ್ಯಾಂ ಜೈತ್ರಯಾತ್ರಾಂ ದ್ವಿತೀಯಾಂ ॥ ೫೦ ॥

"ಶಿವೇ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನ; ನ ದ್ವಿಷ್ಯೇತ ಕದಾಚನ; ಗುರೋರಾಜ್ಞಾ ಹ್ಯನುಲ್ಲಂಘ್ಯಾ; ನ ಗುರೋರಧಿಕಂ"— ಮುಂತಾದ ವಚನಗಳಂತೆ, ಗುರ್ವಾಜ್ಞೆಯನ್ನು ಸರ್ವವಿಧದಿಂದಲೂ ಪಾಲಿಸುವುದು ಅವಶ್ಯವು—ಎಂಬುದನ್ನು ಅನುಸರಿಸಿ, ತಮ್ಮ ಧರ್ಮರಾಜ್ಯದ ಎಲ್ಲೆಯವರೆಗಿರುವ ಶಿಷ್ಯವೃಂದವನ್ನೆಲ್ಲ ಸದುಪದೇಶಗಳಿಂದ ಅನುಗ್ರಹಿಸುವ ಉದ್ದೇಶ

Sri Vidyabharathi Book Centre, Sringeri

CC-0. In Public Domain. Digitized by eGangotri

ದಿಂದ ಯತೀಶ್ವರರು ಎರಡನೆಯ ವಿಜಯಯಾತ್ರೆಯನ್ನು ಕೈಗೊಂಡು ಶ್ರೀಶೃಂಗಗಿರಿಯಿಂದ ಪ್ರವಾಸಗೊಂಡರು.

ನಿರಾಶಾನಾಂ ಮೌಲಿರ್ನಿಜಜನಮನೋರಂಜನಪರಃ
ಪುರಾ ವಿದ್ಯಾರಣ್ಯೈಃ ಪುರುಷವರಧೌರೇಯಗುರುಭಿಃ ।
ಸಮಾಜ್ಞಪ್ತಂ ಕ್ಲೃಪ್ತಂ ಕನಕಬಿಶಿಕಾರೋಹಣವಿಧಿಂ
ಸಮಂಗೀಕೃತ್ಯಾಸೌ ಸಕಲಗುರುರಾಜಃ ಸಮಚರತ್ ॥ ೩೧ ॥

ತಾವು ಸ್ವತಃ ನಿರತಿಶಯವೈರಾಗ್ಯಚಕ್ರವರ್ತಿಗಳೇ ಆಗಿದ್ದರೂ; ಶಿಷ್ಯವರ್ಗವನ್ನು ಅಧರ್ಮಮಾರ್ಗದಿಂದ ರಕ್ಷಿಸುವುದಕ್ಕಾಗಿ, ಅವರನ್ನು ಆವರ್ಜನೆ ಮಾಡುವ ಉದ್ದೇಶದಿಂದ, ವಿದ್ವದಗ್ರೇಸರರಾದ ಶ್ರೀವಿದ್ಯಾರಣ್ಯಮುನಿಗಳೇ ಮೊದಲಾದವರಿಂದ ಆಜ್ಞಪ್ತವಾಗಿ ಕ್ಲೃಪ್ತವಾಗಿ, ಸತ್ಸಂಪ್ರದಾಯದಿಂದ ಈ ಗುರುಪೀಠದಲ್ಲಿ ಬಂದಿರುವ ಕ್ರಮವನ್ನು ಅನುಸರಿಸಿ, ಚಿನ್ನದ ಪಲ್ಲಕ್ಕಿಯನ್ನು ಹತ್ತಿ ಸಂಚರಿಸುವ—ಮುಂತಾದ ರೀತಿಗಳನ್ನು ಅಂಗೀಕರಿಸಿದರು.

"ಧರ್ಮೋ ರಕ್ಷತಿ ರಕ್ಷಿತಃ; ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ; ಧರ್ಮಾತ್ಸುಖಂ ಚ ಜ್ಞಾನಂ ಚ; ಧರ್ಮಸ್ತ ಮನುಗಚ್ಛತಿ; ನ ಜಾತು ಕಾಮಾನ್ನ ಭಯಾನ್ನಲೋಭಾದ್ಧರ್ಮಂ ತ್ಯಜೇಜ್ಜೀವಿತಸ್ಯಾಪಿ ಹೇತೋಃ ।"— ಎಂದು ಮುಂತಾದ ಹಲವಾರು ಪ್ರಮಾಣವಚನ ಸಮೂಹಗಳಿಂದ, ಪ್ರಾಣಿವರ್ಗದ ಇಹಪರಗಳ ಶ್ರೇಯೋಭ್ಯುದಯಗಳಿಗೆಲ್ಲ ಶಾಸ್ತ್ರೀಯಧರ್ಮವೇ ಪರಮಕಾರಣವಾದುದು. ಬ್ರಾಹ್ಮಣರಿಗೂ ಕ್ಷತ್ರಿಯರಿಗೂ, ಲೋಕದಲ್ಲಿ ಈ ಧರ್ಮವು ಅಚ್ಚಳಿಯದಂತೆ ತಾವೂ ಆಚರಿಸಿ ನಡೆಯಿಸುವುದೇ ಮುಖ್ಯಕರ್ತವ್ಯವು. "ಲೋಕದ ದೃಷ್ಟಿಯಿಂದ ಅತ್ಯಂತ ಅಯೋಗ್ಯವೆಂದುಕಂಡುಬರುವ ಕಾರ್ಯವೂ, ಧರ್ಮರಕ್ಷಣೆಗಾಗಿ ಆದರೆ,ಅದು ಧರ್ಮವೇ ಆಗುವುದು; ಹಾಗೆಯೇ ಲೋಕದೃಷ್ಟಿಯಿಂದ ಅತ್ಯಂತ ಯೋಗ್ಯವೆಂದು ಕಂಡುಬರುವ ಕಾರ್ಯವೂ ಧರ್ಮಹಾನಿಗೆ ಕಾರಣವಾದರೆ, ಅದು ಅಧರ್ಮವೆ ಸರಿ'—ಎಂಬುದು ಶಾಸ್ತ್ರನ್ಯಾಯವು.

ಶ್ರೀರಾಮಚಂದ್ರನ ಜಗದ್ರಕ್ಷಣೆಯ ಮೊದಲನೆಯ ಕಾರ್ಯವು ತಾಟಕಿಯ ಸ್ತ್ರೀಹತ್ಯೆಯು ! ಧರ್ಮಕಂಟಕಿಯಾಗಿದ್ದ ಈಕೆಯ ವಧೆಯು

Sri Vidyabharathi Book Centre, Sringeri

CC-O. In Public Domain. Digitized by eGangotri
ಧರ್ಮರಕ್ಷಣೆಗೆ ಅವಶ್ಯವೆಂದು ವಿಶ್ವಾಮಿತ್ರರು ಎಚ್ಚರಿಸಿದ ಮೇಲೆ, ಸ್ತ್ರೀ ಹತ್ಯೆಗೆ ನಾಚಿ ಹಿಂತೆಗೆಯುತ್ತಿದ್ದವನು, ಅನಂತರ ಆಕೆಯನ್ನು ಸಂಹರಿಸಿದನು. ಈಪ್ರಕಾರವಾಗಿಯೇ ಧರ್ಮರಕ್ಷಣೆಯ ಪ್ರಾಧಾನ್ಯವನ್ನು ತಿಳಿಯತಕ್ಕದ್ದು. ಯಾವರೀತಿಯಿಂದಲಾದರೂ ಜನರು ಸತ್ಕರ್ಮನಿರತರಾಗಲೆಂಬ ಅಭಿಪ್ರಾಯ ದಿಂದಲೇ ಶಾಸ್ತ್ರಾದಿಗಳಲ್ಲಿ ನಾನಾವಿಧಗಳಾದ ದೇವತಾವ್ರತೋತ್ಸವಾದಿಗಳು ವಿಹಿತಗಳಾಗಿರುತ್ತವೆ—ಈ ನೆಪದಿಂದಲಾದರೂ ಜನರು ದೇವತಾಸಂದರ್ಶನಾ ದಿಗಳಿಂದ ಪಾಪಗಳನ್ನು ಕಳೆದುಕೊಂಡು ಶ್ರೇಯೋಭಾಗಿಗಳಾದಾರು-ಎಂದು

ಸನ್ಯಾಸಿಗಳು ಚಾತುರ್ಮಾಸ್ಯನಿಯಮದಲ್ಲಲ್ಲದೆ ಇತರ ಕಾಲದಲ್ಲಿ ಒಂದು ಸ್ಥಳದಲ್ಲಿ ಎರಡುರಾತ್ರಿ ವಾಸಮಾಡಬಾರದೆಂದು ಶಾಸ್ತ್ರವಿಧಿಯಿರುವು ದಾದರೂ, ಲೋಕಕ್ಷೇಮಕ್ಕಾಗಿ ಧರ್ಮವನ್ನು ಬೋಧಿಸಬೇಕಾಗಿರುವ ಸನ್ನಿ ವೇಶವನ್ನು ಅರಿತು, ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಠಗಳನ್ನು ಸ್ಥಾಪಿಸಿ, ಅಲ್ಲಿ ಆಚಾರ್ಯರುಗಳು ನೆಲಸಿ ಜನತೆಗೆ ಶಾಸ್ತ್ರೀಯವರ್ಣಾಶ್ರಮಧರ್ಮಾನು ಷ್ಠಾನದ ಅವಶ್ಯಕತೆಯನ್ನೂ ಶ್ರೇಯಸ್ಕರತ್ವವನ್ನೂ, ಇಲ್ಲವಾದರೆ ಅನರ್ಥ ಕರತ್ವವನ್ನೂ ಬೋಧಿಸುವಂತೆ ಏರ್ಪಡಿಸಿದರು.

ಶ್ರೀಶೃಂಗಗಿರಿವ್ಯಾಖ್ಯಾನಪೀಠದಲ್ಲಿ ಹನ್ನೊಂದು ಹನ್ನೊಂದನೆಯ ಪರ್ಯಾಯದಲ್ಲಿ ಶ್ರೀಭಗವತ್ಪಾದರವರೇ ಅಂಶದಿಂದ ಅವತರಿಸಿಬರುವ ರೆಂಬುದು ಸಂಪ್ರದಾಯಸಿದ್ಧವಿದೆ. ಇದರಂತೆಯೇ ಹನ್ನೊಂದನೆಯ ಪೀಠಾಧಿ ಪತಿಗಳಾದ ಶ್ರೀವಿದ್ಯಾರಣ್ಯಮುನಿವರ್ಯರು ಅನಿತರಸಾಹಸಗಳಿಂದ ವಿಜಯ (ವಿದ್ಯಾ) ನಗರ ಸಂಸ್ಥಾನವನ್ನು ಸ್ಥಾಪಿಸಿ, 'ಕರ್ಣಾಟಕಸಿಂಹಾಸನಪ್ರತಿ ಷ್ಠಾಪನಾಚಾರ್ಯ'—ರೆಂಬ ಹೆಮ್ಮೆಯ ಬಿರುದನ್ನು ಈ ಸಂಸ್ಥಾನಕ್ಕೆ ತರಿಸಿ ಕೊಟ್ಟು; ವಿಜಯನಗರರಾಜರುಗಳ ಪ್ರಾರ್ಥನೆಯಂತೆ ರಾಜಬಿರುದಾವಳಿ ಗಳನ್ನು, ಅವರ ಪ್ರೀತ್ಯರ್ಥವಾಗಿ ಅಂಗೀಕರಿಸಿದರು. ಅಲ್ಲಿಯವರೆಗೂ, ಶ್ರೀಶೃಂಗಗಿರಿಪೀಠಾಧಿಪತಿಗಳು, ಶೃಂಗಗಿರಿಗ್ರಾಮದ ಶ್ರೋತ್ರೀಯರ ಮನೆ ಗಳಲ್ಲಿ ಮಾಧುಕರಿಯ ವೃತ್ತಿಯಿಂದ ಇದ್ದರೆಂದು ತಿಳಿದುಬರುತ್ತದೆ.

ಈರೀತಿಯಾದ ಉತ್ಸವಾದಿಗಳ ಕಾರಣದಿಂದಲಾದರೂ ಜನರು ತಮ್ಮ ಸಂದರ್ಶನಾದಿಗಳಿಂದ ಪೂತರಾಗಿ ಶ್ರೇಯೋವಂತರಾಗಲೆಂಬ ಅಭಿ ಪ್ರಾಯದಿಂದಲೇ ಚಿನ್ನದ ಪಲ್ಲಕ್ಕಿಯ ಮೆರವಣಿಗೆ, ನವರಾತ್ರ್ಯುತ್ಸವಕಾಲ

Sri Vidyabharathi Book Centre, Sringeri

CC-0. In Public Domain. Digitized by eGangotri

ಗಳಲ್ಲಿ ಛತ್ರಚಾಮರಕಿರೀಟಾದಿಗಳಿಂದ ಅಲಂಕೃತರಾಗಿ ಸಿಂಹಾಸನಾರೂಢರಾಗುವಿಕೆ—ಮುಂತಾದ ವ್ಯವಹಾರಗಳನ್ನು ಈ ಪೀಠಾಧಿಪತಿಗಳು ಅಂಗೀಕರಿಸುತ್ತಾರೆಯೇ ಹೊರತು, ಇವುಗಳಿಂದ ಮೆರೆಯುವ ದುರಾಶೆಯಿಂದಲ್ಲ. ಈ ಅಲಂಕಾರಗಳಿಂದ ಬಹಳ ಹೊತ್ತು ಇರುವುದು ಎಷ್ಟು ಕ್ಲೇಶಕರವೆಂಬುದು, ಅವರಿಗೇ ಸ್ವಾನುಭವವೇದ್ಯವು. "ಜನಗಳ ಪ್ರೀತಿಗಾಗಿ ನಾವು ಇದನ್ನು ಅಂಗೀಕರಿಸಿರುತ್ತೇವೆ; ಇದು ಜನರಿಗೆ ಸಮ್ಮತವಲ್ಲವಾದರೆ, ಇದನ್ನು ಸಂತೋಷದಿಂದ ಪರಿತ್ಯಜಿಸಲು ನಾವು ಸರ್ವದಾಸಿದ್ಧರು; ನಮಗೆ ಬೇಕಾದುದು ದಂಡಕಮಂಡಲು ಮಾತ್ರ"—ಎಂದು ಶ್ರೀಗುರುಗಳವರು ವ್ಯಕ್ತಪಡಿಸಿರುವುದನ್ನು ಗಮನಿಸತಕ್ಕದ್ದಾಗಿದೆ.

ಲೋಕಕ್ಕೆ ಧರ್ಮಬೋಧನೆಯನ್ನು ಮಾಡುವುದು ಗುರುಸ್ಥಾನಾಧಿಷ್ಠಿತರಾಗಿರುವವರಿಗೆ ಮುಖ್ಯಕಾರ್ಯವಾಗಿದೆಯಲ್ಲದೆ, ಗುರುವರ್ಯರ ಆಜ್ಞೆಯೂ ಆಗಿತ್ತಾದ್ದರಿಂದ ಯತೀಂದ್ರರು ಇದನ್ನು ಅನುಸರಿಸಿ ಅಂಗೀಕರಿಸಿದ್ದರೆಂದು ತಿಳಿಯತಕ್ಕದ್ದು.

ಗತ್ವಾ ಗತ್ವಾ ತಾನಿ ತಾನಿ ಸ್ಥಳಾನಿ
  ದರ್ಶಂ ದರ್ಶಂ ಶಿಷ್ಯವರ್ಗಂ ವಿಶಿಷ್ಯ ।
ಸಮ್ಯಕ್ತೇಷಾಮಾತ್ಮನೀನಂ ವಿಬೋಧ್ಯ
  ಭೂಯಃ ಸೋಽಯಂ ಶೃಂಗಶೈಲಂ ಪ್ರಪೇದೇ ॥೫೨॥

ಈ ಎರಡನೆಯ ದೇಶಸಂಚಾರದಲ್ಲಿಯೂ ಆಯಾಸ್ಥಳಗಳಲ್ಲಿ ಎಲ್ಲ ಶಿಷ್ಯರನ್ನೂ ಪ್ರತ್ಯೇಕಪ್ರತ್ಯೇಕವಾಗಿ ಸಂಧಿಸಿ, ಆತ್ಮಶ್ರೇಯಃಸನ್ನೂ, ಧರ್ಮದ ಅನುಸರಣೆಯ ಅವಶ್ಯಕತೆಯನ್ನೂ ವಿಶದವಾಗಿ ಬೋಧಿಸಿ, ಮತ್ತೆ ಶ್ರೀಶೃಂಗಗಿರಿಗೆ ಹಿಂತಿರುಗಿಬಂದರು.

ಸ್ನಾಯಂ ಸ್ನಾಯಂ ಪ್ರಾತರಾರಾಧ್ಯ ಶಂಭುಂ
  ಶ್ರುತ್ಯಂತಾರ್ಥಂ ವಿಶ್ರುತಾನಾಂ ಯತೀನಾಂ ।
ವ್ಯಾವೃಣ್ವಾನಃ ಪ್ರತ್ಯಹಂ ಪ್ರಾಪ್ತಮೋದಃ
  ಕಂಚಿತ್ಕಾಲಂ ಯಾಪಯಾಮಾಸ ಸೋಽಯಂ ॥ ೫೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವರ್ಯರು ಪ್ರತಿದಿವಸವೂ ಪ್ರಾತಃಕಾಲದಲ್ಲಿ ಸ್ನಾನಾಹ್ನಿಕಗಳನ್ನು ಪೂರೈಸಿಕೊಂಡು, ಶ್ರೀಚಂದ್ರಮೌಳೀಶ್ವರರತ್ನಗರ್ಭಗಣಪತಿಶ್ರೀಶಾರದಾದಿ ದೇವತಾರಾಧನೆಯನ್ನು ಮಾಡಿ, ಅನಂತರ ಯತಿಗಳಿಗೂ, ಅವರ ಮೂಲಕ ಇತರಶಾಸ್ತ್ರಜ್ಞರಿಗೂ ವೇದಾಂತಶಾಸ್ತ್ರವನ್ನು ಪ್ರವಚನಮಾಡುತ್ತ ಶೃಂಗಗಿರಿಯಲ್ಲಿ ಆನಂದದಿಂದ ಕೆಲವು ಕಾಲವನ್ನು ಕಳೆದರು.

ಪ್ರತ್ಯೂಷೇ ಚ ಪ್ರಯತಚರಿತಾ ಪ್ರತ್ಯಹಂ ಭದ್ರಪೀಠ-
ಮಧ್ಯಾಸೀನಾ ನಿಖಿಲಯಮಿನಾಂ ಯೋಗಿನಾಂ ಚಾಪರೇಷಾಂ।
ಶ್ರುತ್ಯಂತಾರ್ಥಂ ಕರಬದರವದ್ದರ್ಶಯಂತೀ ಮತೇನೇ
ಕೇಷಾಂ ನೈಷಾ ಪರಮಸುಷಮಾ ದಕ್ಷಿಣಾಮೂರ್ತಿಬುದ್ಧಿಂ
|| ೫೪ ||

ಪರಿಶುದ್ಧಾಚಾರನಿಷ್ಠರಾದ ಯತೀಶರು ಪ್ರತಿದಿನವೂ ಪ್ರಾತಃಕಾಲದಲ್ಲಿ ಭದ್ರಪೀಠವನ್ನಲಂಕರಿಸಿ ಎಲ್ಲ ಸನ್ಯಾಸಿಗಳಿಗೂ, ಯೋಗಿಗಳಿಗೂ, ಇತರ ಶ್ರದ್ಧಾವಂತರಿಗೂ ಸಕಲವೇದಾಂತರಹಸ್ಯತತ್ತ್ವವನ್ನು —ಅಂಗೈಯಲ್ಲಿಟ್ಟ ಬದರೀಫಲವನ್ನು ತಿಳಿಸಿಕೊಡುವಂತೆ—ಪ್ರತ್ಯಕ್ಷಾನುಭವಗಮ್ಯವಾಗುವಂತೆ ವ್ಯಾಖ್ಯಾನಮಾಡುವುದನ್ನು ನೋಡಿದರೆ, ಯಾರಿಗೆ ತಾನೆ ಇವರಲ್ಲಿ ಶ್ರೀದಕ್ಷಿಣಾಮೂರ್ತಿಪರಶಿವನ ಸ್ವರೂಪವು ಪ್ರತ್ಯಕ್ಷವಾಗುತ್ತಿರಲಿಲ್ಲ !

ಗುರುರಾಟ್ಕರುಣಾಪರೀತಚೇತಾಃ
ಸಮತೀತೇ ಸಮಯೇ ಕ್ವಚಿತ್ಸಚೇತಾಃ ।
ಸಮಧತ್ತ ಮತಿಂ ವಿಧೇಯದೃಷ್ಟ್ಯಾ
ನ ಮಹಾಂತೋ ಜಹತಿ ಪ್ರಪನ್ನವರ್ಗಂ || ೫೫ ||

ಶ್ರೀಗುರುವರ್ಯರು, ಕೆಲವು ಸಮಯವು ಈ ರೀತಿಯಲ್ಲಿ ಕಳೆಯುತ್ತಿರುವಲ್ಲಿ, ಶಿಷ್ಯವರ್ಗದಲ್ಲಿಧರ್ಮಶ್ರದ್ಧೆಯು ದಿನದಿನಕ್ಕೂ ಕ್ಷೀಣೋನ್ಮುಖವೇ ಆಗುತ್ತಿರುವುದನ್ನು ಪರಿಭಾವಿಸಿ, ತಮ್ಮ ಕರ್ತವ್ಯಭಾರವನ್ನೂ ಪರಿಶೀಲಿಸಿ, ಜನಗಳಲ್ಲಿ ಕರುಣಾತಿರೇಕವನ್ನು ತಾಳಿ, ಮತ್ತೆ ಮೂರನೆಯ ವಿಜಯಯಾತ್ರೆಯನ್ನು ಕೈಗೊಂಡರು. “ಹಿತಂ ತು ಪುನಃ ಪುನರ್ವಕ್ತವ್ಯಮಿತಿ ನಿಯಮಃ”—

Sri Vidyabharathi Book Centre, Sringeri

CC-0. In Public Domain. Digitized by eGangotri

"ಜನರು ಗಮನಿಸದಿದ್ದರೂ, ಬಲ್ಲವರು ಅವರಿಗೆ ಹಿತವನ್ನೇ ಮತ್ತೆ ಮತ್ತೆ ಹೇಳುತ್ತಲೇ ಇರತಕ್ಕದ್ದು"—ಎಂಬುದು ಪ್ರಾಜ್ಞರ ಮತವು.

ಆಲೋಚ್ಯ ಯಾತ್ರಾಂ ಜಗತೋಽನುಕೂಲಾಂ
ಚಕ್ರೇ ತೃತೀಯಾಮಪಿ ದೇಶಿಕೇಂದ್ರಃ ।
ಯೇ ಯೇ ತದಾ ದೃಷ್ಟಿಪಥಂ ಪ್ರಪನ್ನಾಃ
ಸರ್ವೇಽಪಿ ತೇ ಧನ್ಯತಮಾ ಬಭೂವುಃ ॥ ೫೬ ॥

ದೇಶಿಕೇಂದ್ರರ ಪರಮಾನುಗ್ರಹದ ಬಲದಿಂದ, ಈ ಯಾತ್ರೆಯ ಸಂದರ್ಭದಲ್ಲಿ ಶ್ರೀಗುರುವರ್ಯರ ದೃಷ್ಟಿಗೆ ಪಾತ್ರರಾದವರೆಲ್ಲರೂ ಧನ್ಯತಮರೇ ಆದರು. ಶ್ರೀಗುರುವರ್ಯರು ಹೀಗೆ ವಿಜಯಯಾತ್ರೆಯನ್ನು ಯಶಸ್ವಿಗೊಳಿಸಿ ಶೃಂಗಗಿರಿಗೆ ಪುನರಾಗಮಿಸಿದರು.

ಶ್ರೀರಂಗದ ಟಿ. ಕೆ. ಬಾಲಸುಬ್ರಹ್ಮಣ್ಯರವರು, ಶ್ರೀಕಂಠೇಶ್ವರಐಯ್ಯರವರು—ಮುಂತಾದ ಪೂರ್ಣನಾಸ್ತಿಕ್ಯದಲ್ಲಿ ಮುಳುಗಿದ್ದ ಹಲವರು ಪರಮಾಸ್ತಿಕರಾಗಿ ಬೆಳಗಿದ ವಿಷಯಗಳನ್ನು ಶ್ರೀಗಳವರ ವಿಸ್ತಾರವಾದ ಚರಿತ್ರೆಯಿಂದ ತಿಳಿಯಬಹುದು.

ಸಮೇಯೇ ಸಮಯೇ ಸಮೇಧಮಾನೇ
ಸಮಯಾಚಾರಪಥೇ ವಿಲೀಯಮಾನೇ ।
ಸಮಯಪ್ರತಿಪಾಲನಾಸಹಿಷ್ಣುಃ
ಪ್ರಭುವಿಷ್ಣುಃ ಪುನರಾಚಕಾಂಕ್ಷ ಯಾತ್ರಾಂ ॥ ೫೭ ॥

ಅಸದಳವಾದ ಕಲಿಯ ಪ್ರಾಬಲ್ಯದಿಂದ, ಶ್ರೇಯಸ್ಕರವಾಗಿರುವ ವೈದಿಕ ಸನಾತನವರ್ಣಾಶ್ರಮಧರ್ಮಕ್ಕೆ ಭಯಂಕರವಾಗುವ ಪರಿಸ್ಥಿತಿಗಳೇ ಬಲವತ್ತರಗಳಾಗುತ್ತಿದ್ದುದನ್ನು ಕಂಡು, ಕಾಲವಿಳಂಬವನ್ನು ಸಹಿಸಲಾರದೆ, ದಯಾಸಮುದ್ರರಾದ ದೇಶಿಕೇಶ್ವರರು ಮತ್ತೆ ದೇಶಯಾತ್ರೆಯನ್ನು ನಿಶ್ಚಯಿಸಿದರು.

ನಿಃಸೀಮೈರ್ನಿಜವೈಭವೈರ್ನಿರುಪಮೇ ದೀಪ್ರೇ ನೃಸಿಂಹೇ ಗುರೌ
ನಿರ್ಯಾತೇ ನಿರವದ್ಯಶೃಂಗಗಿರಿತೋ ದಿಷ್ಟ್ಯಾ ಹಿರಣ್ಯದ್ವಿಷಿ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಹ್ಲಾದಃ ಪರಿಪೋಷಣೋವ ಗತವಾನ್ ಪ್ರಖ್ಯಾತತತ್ತ್ವಜ್ಞೈಃ
ತಾಪಃ ಕ್ವಾಪಿ ಪಲಾಯಿತೋ ಸುಮನಸಾಮಾಶಾವಕಾ-
ಶಾಂತರೇ ‖ ೩೮‖

ಅಪರಿಮಿತಗಳೂ ಅಸದೃಶಗಳೂ ಆದ, ತಮ್ಮ ಸರ್ವಭೋಗದ್ವೇಷಿಗಳಾಗಿ ಪವರನುಷ್ಠೈರಾಗ್ಯಪೂರ್ಣವಾದ ಮಹಿಮೆಗಳಿಂದ ಪ್ರಕಾಶಿಸುವ ಶ್ರೀನೃಸಿಂಹಗುರುವರ್ಯರು—(ಹಿರಣ್ಯಕಶಿಪುವಿನ ದ್ವೇಷಿಯಾದ ಶ್ರೀನೃಸಿಂಹಸ್ವಾಮಿಯು)—ಪವಿತ್ರವಾದ ಶ್ರೀಶೃಂಗಗಿರಿಯಿಂದ—(ಆಯಸ್ತಂಭದಿಂದ) —ಜನತೆಯ ಸೌಭಾಗ್ಯದ ನಿಮಿತ್ತವಾಗಿ ಹೊರಡಲು—(ಆವಿರ್ಭವಿಸಲು) —ಆಯಾ ಗುಣಗಳಿಂದ ಜನತೆಯು ಪ್ರಹ್ಲಾದವು (ಪ್ರಹ್ಲಾದಭಕ್ತನು) ಪೂರ್ಣವೃದ್ಧಿಯನ್ನು ಪಡೆಯಿತು; ಧರ್ಮಪರರಾದ ಸತ್ಪುರುಷರ ತಾಪವೆಲ್ಲವೂ ಎಲ್ಲಿಯೋ ದಿಗಂತದಲ್ಲಿ ಅಡಗಿತು.

ಶ್ರೀಗುರುವರ್ಯರು ಈ ತುರೀಯಯಾತ್ರೆಯಲ್ಲಿ ತಮ್ಮ ಸರ್ವಮಹಿಮೆಯನ್ನೂ ಪ್ರಯೋಜಿಸಿ ಜನಗಳಿಗೆ ಶಾಸ್ತ್ರೀಯಧರ್ಮದಲ್ಲಿ ದೃಢವಾದ ಶ್ರದ್ಧೆಯನ್ನು ಉಂಟುಮಾಡಲು ಅತಿಶಯಪ್ರಯತ್ನವನ್ನು ವಹಿಸಿದರು. ಇದನ್ನು ಕವಿಗಳು ವಿವರಿಸುತ್ತಿದ್ದಾರೆ.

ಸರ್ವೇಷಾಂ ಸಮುದೃಶ್ಯಿತಾಂ ವಿರಚಯನ್ ರೂಪಂ ನಿಜಂ
ಧ್ಯಾಯತಾಂ
ಸರ್ವಜ್ಞಾನ್ ಸಮುಪಾಶ್ರಿತಾನಪಿ ಮುದಾ ವಾಚಾಂ
ಪ್ರಚಾರೈಸ್ತಥಾ।
ಅತ್ಯಂತಂ ಶಿಶಿರೈಃ ಕಟಾಕ್ಷನಿಕರೈಃ ಕಾಮಂ ಸಮುನ್ಮೂಲಯನ್
ಆಶ್ಚರ್ಯೈಕನಿಕೇತನೋ ಗುರುಕಲಾನಾಥಾವತಂಸೋಽವನೌ
‖ ೩೯ ‖

ಶ್ರೀನೃಸಿಂಹಭಾರತೀಯತೀಂದ್ರರು ಪರಮಾರ್ಥವಾಗಿ ಶ್ರೀಪರಮೇಶ್ವರರೇ ಹೌದು. ಶ್ರೀಪರಮೇಶ್ವರನು ಚಂದ್ರಕಲಾಲಂಕೃತನಾಗಿರುವನು; ಶ್ರೀನೃಸಿಂಹಯತೀಂದ್ರರು ಸಕಲವಿದ್ಯೆಗಳೆಂಬ ನಿರವದ್ಯಚಂದ್ರನಿಂದ ಅಲಂಕೃತರು. ಶ್ರೀಪರಶಿವನು ತಾನು ತ್ರಿನೇತ್ರನಾಗಿ ವಿಷಮದೃಷ್ಟಿಯುವನಾಗಿದ್ದರೂ,

Sri Vidyabharathi Book Centre, Sringeri

CC-0. In Public Domain. Digitized by eGangotri

ತನ್ನನ್ನು ಧ್ಯಾನಿಸುವವರಿಗೆ ಸಮದೃಷ್ಟಿಯನ್ನೇ ಅನುಗ್ರಹಿಸುವನು; ಶ್ರೀನೃಸಿಂಹದೇಶಿಕೇಂದ್ರರು ತಾವು ಯಾಗಲ್ಲಿಯೂ ಭೇದದೃಷ್ಟಿಯಿಲ್ಲದವರಾಗಿದ್ದು, ಎಲ್ಲರಲ್ಲಿಯೂ ಸಮದೃಷ್ಟಿಯಿಂದ ಎಲ್ಲರನ್ನೂ ಅನುಗ್ರಹಿಸುತ್ತಿದ್ದರು; ಮತ್ತು—'ನಿರ್ದೋಷಂ ಹಿ ಸಮಂ ಬ್ರಹ್ಮ'—ಎಂಬ ಗೀತಾವಚನದಂತೆ, ತಮ್ಮ ವಾಸ್ತವಸ್ವರೂಪನ್ನು ಧ್ಯಾನಮಾಡುವವರಿಗೆ ಸಮದೃಷ್ಟಿ, ಎಂದರೆ ಬ್ರಹ್ಮದೃಷ್ಟಿ—ಬ್ರಹ್ಮಜ್ಞಾನ—ಯನ್ನು ಅನುಗ್ರಹಿಸುವರು. ಶ್ರೀಪರಮೇಶ್ವರನು ಶ್ರೀದಕ್ಷಿಣಾಮೂರ್ತಿಗುರುರೂಪವನ್ನು ಧರಿಸಿ ಶಿಷ್ಯರನ್ನೆಲ್ಲ ಸರ್ವಜ್ಞರನ್ನಾಗಿ ಮಾಡುವನು; ಶ್ರೀಗುರುವರ್ಯರೂ ಸಹ ತಮ್ಮ ಅಮೋಘಗಳಾದ ತತ್ತ್ವೋಪದೇಶದ, ವಚನಗಳಿಂದ ತಮ್ಮನ್ನು ಆಶ್ರಯಿಸಿದವರನ್ನು ಸರ್ವಜ್ಞರನ್ನಾಗಿ—ಸರ್ವಶಾಸ್ತ್ರಪ್ರವೀಣರನ್ನಾಗಿ,—'ಯಃ ಸರ್ವಜ್ಞಃ ಸರ್ವವಿತ್'—ಎಂಬ ಶ್ರುತಿಯಂತೆ ಸರ್ವಜ್ಞನಾದ ಶ್ರೀಪರಮೇಶ್ವರರನ್ನಾಗಿ—ಮಾಡುವರು. ಶ್ರೀಪರಮೇಶ್ವರನು ಶ್ರೇಯೋವಿಘಾತಿಯಾದ ಕಾಮನನ್ನು, ಪರಮಕ್ರೋಧಪೂರ್ವಕವಾದ ತೀಕ್ಷ್ಣಫಾಲನೇತ್ರಾಗ್ನಿಯಿಂದ ಭಸ್ಮಮಾಡಿದನು; ನಮ್ಮ ಶ್ರೀಗುರುಸಾರ್ವಭೌಮರು ಅತೀವಸೌಮ್ಯಸ್ವಭಾವದ ದಯಾಶೀತಲದೃಷ್ಟಿಯಿಂದಲೇ ಜನಗಳಲ್ಲಿ ದುಷ್ಟಕಾಮಗಳನ್ನು ನಿರ್ಮೂಲಗೊಳಿಸುವರು. ಈ ಪ್ರಕಾರವಾಗಿ ಶ್ರೀಗುರುವರ್ಯರು ಎಲ್ಲ ವಿಧಗಳಿಂದಲೂ ಲೋಕೋತ್ತರಮಹಿಮಾಶಾಲಿಗಳಾಗಿ, ಆಶ್ಚರ್ಯಕರಗಳಾದ ಚರಿತೆಗೆ ತೌರೂರಾಗಿ ಬೆಳಗಿದರು.

ಏಕಂ ದಂಡಮುಪಾಶ್ರಿತೋಽಪಿ ಸತತಂ ದಂಡತ್ರಯಾಲಂಕೃತಃ
ಸರ್ವತ್ರೈವ ವಿಶಾರದೋಽಪಿ ವಶಿತಶ್ರೀಶಾರದಾನ್ವೈಭವಃ ।
ಕಾಮಂ ಕಾಮವಿವರ್ಜಿತೋಽಪಿಭಗವಾನ್ ಸಂಪೂರ್ಣಕಾಮಸ್ತದಾ
ಸಂಖ್ಯಾವದ್ಗುಣಮಂಡಿತೋಽಪಿ ರುರುಚೇ ಸಂಖ್ಯಾವಿಹೀನೈ-
ರ್ಗುಣೈಃ ॥ ೨೦ ॥

ಶ್ರೀಗುರುಗಳ ಆಶ್ಚರ್ಯಚರಿತೆಯನ್ನು ವರ್ಣಿಸುತ್ತಾರೆ—

ಶ್ರೀಗುರುವರ್ಯರು ಸನ್ಯಾಸಾಶ್ರಮದ ನಿಯಮಗಳಿಗನುಸಾರವಾಗಿ ಶ್ರೀಗುರುದತ್ತವಾದ ಒಂದು ದಂಡವನ್ನು ಧರಿಸಿರುವವರಾದರೂ, ಮೂರು ದಂಡಗಳಿಂದ ಅಲಂಕೃತರಾಗಿದ್ದರು. ಸನ್ಯಾಸಿಗಳು ಬಾಹ್ಯದಲ್ಲಿ ಏಕದಂಡಧಾರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಾಗಿದ್ದು, ಅಂತರ್ಯದಲ್ಲಿ ಕಾಯದಂಡ, ವಾಗ್ದಂಡ, ಮನೋದಂಡಗಳೆಂಬ ತ್ರಿದಂಡಗಳನ್ನು ಧರಿಸಿರಬೇಕೆಂದು ಸನ್ಯಾಸವಿಧಿ–ಎಂದರೆ, ವಾಙ್ಮನಃಕಾಯಗಳೆಂಬ ತ್ರಿಕರಣಗಳನ್ನೂ ಜಯಿಸಿ, ತತ್ತ್ವೈಕನಿಷ್ಠೆಯಿಂದ ಇರತಕ್ಕದ್ದು–ಎಂದು. ಆದ್ದರಿಂದ ಏಕದಂಡಿಗಳೂ ತ್ರಿದಂಡಿಗಳೂ ಆಗಿದ್ದರು ಎಂಬಲ್ಲಿ ವಿರೋಧವೇನೂ ಇಲ್ಲ.

ಹಾಗೆಯೇ, ಸಕಲವಿದ್ಯೆಗಳಲ್ಲಿಯೂ ನಿಷ್ಣಾತರಾಗಿ ಸರ್ವವಿದ್ಯಾವಿಶಾರದರಾಗಿದ್ದರೂ, ಶ್ರೀಶಾರದಾದೇವಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಿದ್ದರು. ಇಲ್ಲಿ 'ವಿಶಾರದರು' ಎಂದರೆ ಶಾರದಾರಹಿತರಾಗಿದ್ದರೂ,–'ವಶೀಕೃತಶಾರದರು' ಎಂಬ ವಿರೋಧಾಭಾಸವು ಕಂಡುಬರುತ್ತದೆ.

ಸಂಪೂರ್ಣವಾಗಿ ಕಾಮರಹಿತರೇ ಆಗಿದ್ದರೂ, ಸಂಪೂರ್ಣಕಾಮರಾಗಿದ್ದರು. ಇಲ್ಲಿಯೂ ಆಪಾತತಃ ವಿರೋಧವು ಕಂಡುಬರುವುದು; ಸಂಪೂರ್ಣಕಾಮರೆಂದರೆ ನಿತ್ಯತೃಪ್ತರೆಂದು ಅಭಿಪ್ರಾಯವಾದ್ದರಿಂದ ವಿರೋಧವೇನೂ ಇರುವುದಿಲ್ಲ.

ಸಂಖ್ಯೆಗೆ ಸಿಗುವಂಥ ಗುಣಗಳುಳ್ಳವರಾಗಿದ್ದರೂ ಅಸಂಖ್ಯಾತಗುಣಗಳಿಂದ ಶೋಭಿಸುವರು. ಇಲ್ಲಿ—ಸಂಖ್ಯೆಗೆ ಸಿಗುವಂಥ—ಎಂದರೆ ಎಣಿಸಲು ಸಾಧ್ಯವಾಗುವಂಥ ಅಲ್ಪಗುಣಗಳುಳ್ಳವರಾಗಿದ್ದರೂ, ಅಸಂಖ್ಯಾತ—ಎಂದರೆ ಎಣಸಲಶಕ್ಯಗಳಾದ ಗುಣಗಳುಳ್ಳವರು—ಎಂದು ವಿರೋಧವು; ಸಂಖ್ಯಾವಂತರು–ಎಂದರೆ ವಿದ್ವಾಂಸರು–ಎಂದು ಅರ್ಥವಾದ್ದರಿಂದ ಈ ವಿರೋಧವಿಲ್ಲ.

ತಡಿತ್ಪುಂಜೋ ನಾಯಂ ಸ ಹಿ ನಯನಸಂಕೋಚನಕರೋ
ನ ಚಾದಿತ್ಯಶ್ಚಾಯಂ ತನುಮತನುತಾಪಂ ಸ ತನುತೇ ।
ನ ವಾ ಶೀತಾಂಶುಃ ಸ್ಯಾತ್ಸ ಹಿ ವಹತಿ ದೋಷಾಕರಪದಂ
ಇತಿ ಪ್ರಾದುರ್ಭೂತಾ ಬಹುವಿಧವಿಕಲ್ಪಾಃ ಸುಮನಸಾಂ ॥೬೧॥

ಲೋಕೋತ್ತರದಿವ್ಯತೇಜಃಸಿನಿಂದ ಬೆಳಗುತ್ತ ಬರುತ್ತಿರುವ ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಮಹಾಸ್ವಾಮಿಗಳನ್ನು ನೋಡಿಬೆರಗಾಗಿ ಪಂಡಿತರುಗಳು—"ಇದೇನು ಮಿಂಚುಗಳ ರಾಶಿಯೋ ? ಅಲ್ಲ ಅಲ್ಲ; ಕಣ್ಣನ್ನು ಕೋರೈಸುವುದಲ್ಲವೆ ಮಿಂಚು? ಇದು ನೋಟಕ್ಕೆ ಸೌಮ್ಯವೂ ರಮ್ಯವೂ

Sri Vidyabharathi Book Centre, Sringeri

CC-0. In Public Domain. Digitized by eGangotri

ಆಗಿರುತ್ತದೆ. ಹಾಗಾದರೆ, ಇದು ಸೂರ್ಯನೆ? ಅದೂ ಆಗದು, ಸೂರ್ಯನು ದೇಹಕ್ಕೆ ಅತಿಯಾಗಿ ತಾಪವನ್ನು ಉಂಟುಮಾಡುವನು, ಇದು ಮಾತ್ರ ಆಹ್ಲಾದಕರವಾಗಿರುವುದು. ಹಾಗಾದರೆ ಚಂದ್ರನಿರಬಹುದೆ? ಆಗುವು ದಿಲ್ಲ; ಚಂದ್ರನು ದೋಷಾಕರ, ಎಂದರೆ ರಾತ್ರಿಯಲ್ಲಿ ಮಾತ್ರವೇ ಶೋಭಿಸು ವನು ಮತ್ತು ಕಳಂಕಿಯು; ಇದು ನಿತ್ಯವೂ ಬೆಳಗುತ್ತ, ಸರ್ವದೋಷಶೂನ್ಯ ವಾಗಿದೆಯಲ್ಲವೆ?—ಎಂದು ಮುಂತಾಗಿ ಅನೇಕವಿಧವಾಗಿ ವಿಚಾರಮಗ್ನ ರಾಗುತ್ತಿದ್ದರು.

ಗುರೂಣಾಂ ಸಮ್ರಾಜಂ ಗುರುಮಹಿಮಸರ್ವಸ್ವಜಲಧಿಂ
ವಿರಕ್ತಾ ವೈರಾಗ್ಯಂ ವಿಧಿವಿಹಿತಮರ್ಥಂ ವಿಧಿವಿದಃ ।
ವಿನಿರ್ಮುಕ್ತಂ ಮುಕ್ತಾ ವಿಗತವಿವಿಧೋಪಾಧಿನಿಕರೈಃ
ಸದಾಚಾರಂ ಸಂತಃ ಸಕಲಫಲಸಂಪಾದನಚಣಂ ॥ ೬೨ ॥

ಸುನಿಷ್ಣಾತಾ ಮಂತ್ರೇಷ್ವಪಿ ಪರಮಮಂತ್ರಂ ತ್ರಿಜಗತಃ
ಪಿಶಾಚಾಃ ಸಂತ್ರಾಸಾದತಿನಿಪುಣಮುಚ್ಚಾಟನವಿಧಿಂ ।
ಮಹಾಂತಂ ಯೋಗೀಶಂ ಮನನನಿಪುಣಾ ಯೋಗಕುಶಲಾಃ
ವ್ಯಜಾನನ್ ಮಂದಾಶ್ಚ ಪ್ರಕೃತಿರಮಣೀಯಂ ಯತಿವರಂ॥೬೩॥

ನಿರತಿಶಯಮಹಿಮೆಯ ಸಾಗರರಾಗಿದ್ದ ಶ್ರೀಗುರುಸಾರ್ವಭೌಮರನ್ನು ಕಂಡು ವಿರಕ್ತರು, ಸಾಕ್ಷಾತ್ ವೈರಾಗ್ಯದ ಮೂರ್ತಿಯೆಂದೂ; ಶಾಸ್ತ್ರವಿಧಿ ಯನ್ನು ಬಲ್ಲವರು, ಸಾಕ್ಷಾಚ್ಛಾಸ್ತ್ರವಿಹಿತವಾಗಿರುವ ಧರ್ಮದ ವಿಗ್ರಹವೆಂದೂ; ಜೀವನ್ಮುಕ್ತರಾದ ಜ್ಞಾನಿಗಳು, ಸರ್ವೋಪಾಧಿರಹಿತವಾದ ಸಾಕ್ಷಾನ್ನಿರ್ಗುಣ ಪರಬ್ರಹ್ಮವೇ ಎಂದೂ; ಶಿಷ್ಯರು, ಸಕಲಸಂಪತ್ತನ್ನೂ ಕರುಣಿಸುವ ಸಾಕ್ಷಾತ್ಸದಾಚಾರವೆಂದೂ;

ಮಂತ್ರನಿಪುಣರು, ಪರಮಮಂತ್ರವೇ ಎಂದೂ; ಭೂತಪ್ರೇತಪಿಶಾ; ಚಾದಿಗಳು, ಭಯದಿಂದ, ತಮ್ಮನ್ನು ಉಚ್ಚಾಟನೆಮಾಡುವ ಸಿದ್ಧವಿಧಿಯೆಂದೂ ಯೋಗಕುಶಲರೂ ಮನನನಿಪುಣರೂ ಆಗಿರುವ ಯೋಗಿಗಳು, ಯೋಗೀಶ ರೆಂದೂ; ಲೋಕಸಾಮಾನ್ಯರು ಸಹಜಸುಂದರರಾದ ಯತಿವರ್ಯರೆಂದೂ ತಿಳಿಯುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ತದಾಸೇಚನಕಂ ತೇಜಸ್ತೃಷ್ಣಯಾ ಪರಿಪಶ್ಯತಾಂ ।
ಅವಶಾದೇವ ವಕ್ತ್ರೇಭ್ಯಃ ಪದ್ಯಾನೀಮಾನಿ ಜಜ್ಞಿರೇ ॥೬೪॥

ದರ್ಶನಮಾತ್ರದಿಂದಲೇ ಪರಮಾನಂದತೃಪ್ತಿಯನ್ನು ಉಂಟುಮಾಡುತ್ತಿದ್ದ ಶ್ರೀಗುರುವರ್ಯರ ಭವ್ಯತೇಜೋಮೂರ್ತಿಯನ್ನು ಅತ್ಯಂತಾಸಕ್ತಿಯಿಂದ ನೋಡುವ ಜನಗಳ ಬಾಯಿಂದ ಈ ಪದ್ಯಗಳು ತಾವಾಗಿಯೇ ತಡೆಯಿಲ್ಲದೆ ಹೊರಟವು.

ಧ್ಯಾಯಂ ಧ್ಯಾಯಂ ಚರಣಯುಗಲಂ ಚಂದ್ರಮೌಳೇಃ ಸಮೋದಂ
ಸ್ತಾವಂ ಸ್ತಾವಂ ಮಧುರಮಧುರೈಃ ಪದ್ಯಜಾಲೈಃ ಸತಾಲಂ ।
ವ್ಯಾಧುನ್ವಾನಾ ಶಿಶಿರಶಿಶಿರಾಪಾಂಗಪಾತೈಶ್ಚ ತಾಪಂ
ಕಾಚಿತ್ಕಾಂತಿಃ ಕನಕರುಚಿರಾ ಕಾಂಕ್ಷಿತಂ ನೋ ತನೋತು ॥೬೫॥

"ಶ್ರೀಚಂದ್ರಮೌಳೀಶ್ವರನ ಪಾದಪದ್ಮಗಳನ್ನು ಪರಮಾನಂದದಿಂದ ಮತ್ತೆ ಮತ್ತೆ ಧ್ಯಾನಿಸುತ್ತ; ಅವನ ಮಹಿಮೆಯನ್ನು ಹಲವಾರುವಿಧ ಪದ್ಯಗಳಿಂದ ಚಪ್ಪಾಳೆಹೊಡೆಯುತ್ತ ಸ್ತುತಿಸುತ್ತ; ಹಿತಮಧುರಗಳಾದ ನೋಟಗಳಿಂದ ಶರಣಾಗತರ ತಾಪವನ್ನು ದೂರಮಾಡುತ್ತಾ; ದೃಗ್ಗೋಚರವಾಗಿರುವ ಹೊಂಬಣ್ಣದ ಈ ದಿವ್ಯಕಾಂತಿಯು ನಮ್ಮ ಇಷ್ಟಾರ್ಥಗಳನ್ನು ಅನುಗ್ರಹಿಸಲಿ;

"ಕಾಷಾಯಾಕ್ತಂ ವಸನಯುಗಲಂ ಸಾದರಂ ಸಂವಸಾನಾ
ಕಾಂಚಿದ್ಧಸ್ತೇ ರುಚಿರರುಚಿರಾಮಕ್ಷಮಾಲಾಂ ದಧಾನಾ ।
ಕಾರುಣ್ಯಾರ್ದ್ರಾ ಕಲಿತಕುಶಲಾ ಕಲ್ಮಷಘ್ನೀ ನತಾನಾಂ
ಕಾಚಿತ್ಕಾಂತಿಃ ಕನಕರುಚಿರಾ ಕಾಂಕ್ಷಿತಂ ನೋ ತನೋತು
॥ ೬೬ ॥

ಸುಂದರವಾದ ಕಾಷಾಯವಸ್ತ್ರವನ್ನು ಧರಿಸಿ; ಸುವರ್ಣದ ಜಪಮಾಲೆಯನ್ನು ಕೈಯಲ್ಲಿ ಹಿಡಿದು; ಶರಣಾಗತರಾದ ಭಕ್ತರ ಎಲ್ಲದುರಿತದೋಷಗಳನ್ನೂ ಕಳೆದು ಮಂಗಳವನ್ನು ಕರುಣಿಸುವ, ದಯಾರ್ದ್ರವಾದ ಈ ಕಾಂಚನಮಯಮೂರ್ತಿಯು ನಮ್ಮ ಇಷ್ಟಾರ್ಥಗಳನ್ನು ಪೂರೈಸಲಿ.

Sri Vidyabharathi Book Centre, Sringeri

 CC-0. In Public Domain. Digitized by eGangotri

"ಅಧ್ಯಾಸೀನಾ ಕನಕಶಿಬಿಕಾಮುತ್ಸವೇsಸೌ ಕಿರೀಟ-
ಮಾಬಿಭ್ರಾಣಾ ಮಹಿತಮಹಿತಾನಕ್ಷತಾನ್ನಿಕ್ಷಿಪಂತೀ ।
ಸ್ಮೇರಸ್ಮೇರಾನ್ಮಧುರಮಧುರಾನಾಕಿರಂತೀ ಕಟಾಕ್ಷಾನ್
ಕಾಚಿತ್ಕಾಂತಿಃ ಕನಕರುಚಿರಾ ಕಾಂಕ್ಷಿತಂ ಮೇ ತನೋತು
॥ ೬೭ ॥

"ಮೆರವಣಿಗೆಯ ಉತ್ಸವದಲ್ಲಿ ಚಿನ್ನದಪಲ್ಲಕ್ಕಿಯನ್ನು ಅಲಂಕರಿಸಿ, ಶಿರಸ್ಸಿನಲ್ಲಿ ರತ್ನಖಚಿತವಾದ ಕಿರೀಟವನ್ನು ಧರಿಸಿಕೊಂಡು, ಭಕ್ತಜನಸಮೂಹದಮೇಲೆ ಪಾವನಕರಗಳಾದ ಮಂತ್ರಾಕ್ಷತೆಗಳನ್ನು ಬೀರುತ್ತ, ಮಂದಹಾಸ ಪುರಃಸರವಾಗಿ ಮಧುರವಾದ ಕಟಾಕ್ಷಗಳಿಂದ ನೋಡುತ್ತ ಬೆಳಗುತ್ತಿರುವ, ಬಂಗಾರದಸೊಬಗಿನ ದಿವ್ಯಗುರುಮೂರ್ತಿಯು ನಮ್ಮ ಅಪೇಕ್ಷಿತಫಲಗಳನ್ನು ಕರುಣಿಸಲಿ.

"ಅಧ್ಯಾಸೀನಾ ಸಕಲಶುಭದಂ ರಾಜತಂ ಭದ್ರಪೀಠಂ
ಆಶಾಸಾನಾ ನಿಖಿಲಜಗತೀಕ್ಷೇಮಸಂಪಾತಜಾತಂ ।
ವ್ಯಾಚಕ್ಷಾಣಾ ಮಧುರವಚನೈ ರಮ್ಯಮದ್ವೈತತತ್ತ್ವಂ
ಕಾಚಿತ್ಕಾಂತಿಃ ಕನಕರುಚಿರಾ ಕಾಂಕ್ಷಿತಂ ಮೇ
ತನೋತು ॥ ೬೮ ॥

"ಮಂಗಳರಜತಸಿಂಹಾಸನದಲ್ಲಿ ಮಂಡಿಸಿ, ಸಕಲಜತ್ತಿಗೂ ಕ್ಷೇಮವನ್ನು ಹಾರೈಸುತ್ತ, ಮನೋಹರವಾಗಿ ಅದ್ವೈತತತ್ತ್ವವನ್ನು ವ್ಯಾಖ್ಯಾನಮಾಡುತ್ತ ಶ್ರೀದಕ್ಷಿಣಾಮೂರ್ತಿಸ್ವರೂಪರಾಗಿ ಬೆಳಗುವ, ಕಾಂಚನಶೋಭೆಯ ದಿವ್ಯ ಗುರುವು ನಮ್ಮ ಇಷ್ಟಾರ್ಥಗಳನ್ನು ಸಲ್ಲಿಸಲಿ"—ಎಂದು.

ಸ್ಮಿತಜ್ಯೋತ್ಸ್ನಾಪೂರಂ ಶಿಶಿರಶಿಶಿರಂ ಶಿಷ್ಯನಿಕರೇ
ನರಾಣಾಂ ಹೀರಾಣಾಮಿವ ತರಳಭಾವಂ ಪ್ರವಿಕಿರನ್ ।
ಜಪನ್ನುಂಚಚ್ಚುಂಚ್ಚುಚ್ಚುಲದಧರಮಶ್ರಾಂತಮಧುರೋ
ನ ಕೇಷಾಂ ತೋಷಾಯಾಜನಿ ಜಗತಿ ಸೋsಯಂ
ಗುರುಮಣಿಃ ॥ ೬೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

"ಬೆಳದಿಂಗಳಿನಂತೆ ತಂಪಾಗಿ, ಮರಕತಮಣಿಯ ಕಿರಣದಂತೆ ಹಿತವಾಗಿರುವ ದೃಷ್ಟಿಯನ್ನು ಭಕ್ತಶಿಷ್ಯಸಮೂಹದ ಮೇಲೆ ಹರಡುತ್ತ; ನಿರಂತರವೂ ರಮ್ಯವಾಗಿ ಮಂದಮಂದಚಲಿಸುತ್ತಿರುವ ಕೆಳದುಟಿಯಿಂದ ಪಾವನಕರವಾದ ಮಂತ್ರವನ್ನು ಜಪಮಾಡುತ್ತಿರುವ ಈ ಪರಮಗುರುಮೂರ್ತಿಯ ದರ್ಶನವು ಲೋಕದಲ್ಲಿ ಯಾರಿಗೆತಾನೆ ಸಂತೋಷಕರವಾಗುವುದಿಲ್ಲ ?

"ಜಪನ್ ರುದ್ರಾಧ್ಯಾಯಂ ಜನನಮೃತಿಭೀತಿಪ್ರಶಮನಂ
ಮುದಾ ಶಂಭುಂ ಸಿಂಚನ್ ವಿಮಲತಮಗಂಗಾದಿಸಲಿಲೈಃ ।
ಸುಮೈರರ್ಚಾಂ ಕುರ್ವನ್ ಸುರಭಿತದಶಾಶೈರನುದಿನಂ
ನ ಕೇಷಾಂ ತೋಷಾಯಾಜನಿ ಜಗತಿ ಸೋಽಯಂಗುರುಮಣಿಃ
॥ ೭೦ ॥

""ಜನನಮರಣಪರಂಪರಾರೂಪವಾದ ಸಂಸಾರಘೋರಭಯವನ್ನು ಪ್ರಶಮನಮಾಡುವ ಪರಮಪವಿತ್ರವಾದ ಶ್ರೀರುದ್ರಾಧ್ಯಾಯವನ್ನು ಆನಂದದಿಂದ ಪಠಿಸುತ್ತ, ಪವಿತ್ರಗಳಾದ ಗಂಗಾಜಲಗಳಿಂದ ಶ್ರೀ ಪರಮೇಶ್ವರನನ್ನು ಅಭಿಷೇಕಮಾಡಿ; ಹತ್ತುದಿಕ್ಕುಗಳನ್ನೂ ಘಮಘಮಿಸುವಂತೆ ಮಾಡುವ ಪರಮಸುಗಂಧಪೂರ್ಣಪುಷ್ಪಗಳಿಂದ ಪೂಜಿಸುತ್ತಿರುವ ಶ್ರೀದೇಶಿಕೇಂದ್ರರು ಲೋಕದಲ್ಲಿ ಯಾರಿಗೆ ಆನಂದಕರರಾಗುವುದಿಲ್ಲ ?

"ಕ್ಷೋಣೀಭಾಗೇಽಚಪಲಚಪಲಾ ಕಾಂಚನಾಭಾ ಚರಂತೀ
ಸಂತಪ್ತಾನಾಂ ಸ್ಮರಣಲವತಸ್ತಾಪಜಾತಂ ಹರಂತೀ ।
ಸಂವಿತ್ಸಸ್ಯಪ್ರಚಯನಿಪುಣಾಽಮಂದಕಾರುಣ್ಯವರ್ಷೈಃ
ಸೀಮಾತೀತಾ ಮಮ ತು ಮನಸಃ ಕಾಪಿ ಕಾದಂಬಿನೀಯಂ
॥ ೭೧ ॥

"ಲೋಕದಲ್ಲಿ ನೀರುತುಂಬಿದ ಕಪ್ಪುವರ್ಣದ ಮೇಘವು, ಆಕಾಶದಲ್ಲಿ ಗಾಳಿಯ ಹೊಡೆತಕ್ಕೆ ಸಿಲುಕಿ ಚಪಲವಾಗಿ ಚಲಿಸುತ್ತ ಮಳೆಗರೆಯುತ್ತ, ಬಿಸಿಲಿನ ತಾಪದಿಂದ ತಪ್ತರಾದವರಿಗೆ, ತಂಪನ್ನು ಉಂಟುಮಾಡುತ್ತ, ಸಸ್ಯಸಮೃದ್ಧಿಯಿಂದ ಜನಗಳಿಗೆ ತೃಪ್ತಿಯನ್ನು ಉಂಟುಮಾಡುತ್ತದೆ. ಶ್ರೀಗುರು

Sri Vidyabharathi Book Centre, Sringeri

CC-0. In Public Domain. Digitized by eGangotri

ಸಾರ್ವಭೌಮರೂಪವಾದ ಈ ಮೇಘವಾದರೋ, ಸುವರ್ಣವರ್ಣದ್ದಾಗಿ, ಭೂಮಿಭಾಗದಲ್ಲಿ ಸಂಚರಿಸುತ್ತ, ಸ್ವತಂತ್ರವಾಗಿ, ಚಾಪಲ್ಯವಿಲ್ಲದುದಾಗಿ, ಸ್ಮರಣಮಾತ್ರದಿಂದಲೇ ಸಂಸಾರತಪ್ತರಾದವರ ಸಕಲತಾಪವನ್ನೂ ಪರಿಹರಿಸುತ್ತ, ದಯೆಯೆಂಬ ವೃಷ್ಟಿಯನ್ನು ಅತಿಶಯವಾಗಿ ಸುರಿಸುತ್ತ, ತತ್ತ್ವಜ್ಞಾನದ ಬೆಳೆಯನ್ನು ಸಮೃದ್ಧಿಯಾಗಿ ಬೆಳೆಸಿ, ಅಪರಿಮಿತವಾದ ತೃಪ್ತಿಯನ್ನು ನಿರಂತರವೂ ನೀಡುತ್ತಿದೆ."

ಕವಯೋ ಯತಯೋ ಮನೀಷಿಣೋ ವಾ
ಕವಿರಾಜಂ ಯತಿರಾಜಸಾರ್ವಭೌಮಂ ।
ಸಮುಪಾಸತ ಸರ್ವಲೋಕಬಂಧುಂ
ಸ್ತವನೈರ್ವಂದನಸೇವನೈಸ್ತದಾನೀಂ ॥ ೭೨ ॥

ಕವಿರಾಜರೂ ಯತಿಸಾರ್ವಭೌಮರೂ ಆಗಿರುವ ಶ್ರೀಗುರುವರ್ಯರನ್ನು ಎಲ್ಲ ಕವಿಗಳೂ, ಯತಿಗಳೂ, ವಿದ್ವಾಂಸರೂ ಸಹ, ಸ್ತುತಿನಮಸ್ಕಾರಸೇವೆಗಳಿಂದ ಅತಿಶಯವಾಗಿ ಉಪಾಸನೆಮಾಡಿದರು.

ಅಹಮಾದರತಶ್ಚ ಪದ್ಯಜಾಲೈ-
ರಮುಮಸ್ತಾವಿಷಮದ್ಭುತಂ ಯತೀಶಂ ।
ಮಧುರೇ ಕರಸಂಗತೇ ರಸಾಲೇ
ನನು ಕಸ್ಯಾಪಿ ಹಿ ನೋ ಭವೇದುಪೇಕ್ಷಾ ॥ ೭೩ ॥

ಅದ್ಭುತಮಹಿಮೆಗಳಿಂದ ತೊಳಗುತ್ತಿದ್ದ ಈ ಯತೀಶ್ವರರನ್ನು ನಾನೂ ಪದ್ಯಗಳಿಂದ ಮನಮುಟ್ಟಿ ಸ್ತುತಿಸಿದೆನು. ಮಧುರವಾದ ಮಾವಿನಹಣ್ಣು ಕೈಗೆಸಿಕ್ಕಿರುವಾಗ, ಅದನ್ನು ಆಸ್ವಾದಿಸದೆ ಇರಲು ಯಾರಿಂದ ಸಾಧ್ಯ ?

ಇಡೀ ಕಾವ್ಯವೇ ಈ ಕವಿಗಳ ವಾಣಿಯ ವೈಭವವೇ ಆಗಿದೆ. ಆದರೂ, ಕೆಲವು ಮಾತುಗಳನ್ನು ಇತರರು ವರ್ಣಿಸಿದ್ದೆಂದೂ, ಮತ್ತೆ ಕೆಲವನ್ನು ಸಾಮಾನ್ಯವಾದ ವರ್ಣನೆಯೆಂದೂ, ಇನ್ನು ಕೆಲವನ್ನು ತಮ್ಮ ಸ್ವಂತವಾದ ಸ್ತುತಿಯೆಂದೂ ವರ್ಣಿಸುವುದು ಒಂದು ಕವಿತಾಚಮತ್ಕಾರವು.

Sri Vidyabharathi Book Centre, Sringeri

CC-O. In Public Domain. Digitized by eGangotri

"ವಿಭಿನ್ನಮದಮರ್ಮಣೇ ವಿಹಿತನಿತ್ಯಸದ್ಧರ್ಮಣೇ
ಜಗತ್ತ್ರಿತಯಶರ್ಮಣೇ ಜಗದಬೋಧಹೃತ್ಕರ್ಮಣೇ ।
ಪ್ರಸನ್ನಕರಿಚರ್ಮಣೇ ಪ್ರಬಲಬೋಧಕೃನ್ನರ್ಮಣೇ
ನಮೋಽಸ್ತು ನತವರ್ಮಣೇ ನೃಹರಿಸದ್ಗುರುಬ್ರಹ್ಮಣೇ ॥ ೭೪ ॥

"ಅಹಂಕಾರದ ಮರ್ಮವನ್ನು ಭೇದಿಸುವ; ಶಾಸ್ತ್ರೀಯವರ್ಣಾಶ್ರಮ ರೂಪವಾದ ಶ್ರೇಯಸ್ಕರವಾಗಿರುವ ಸದ್ಧರ್ಮವನ್ನು ವಿಧಿವತ್ತಾಗಿ ಅನುಷ್ಠಿಸುವ; ಮೂರುಲೋಕಗಳಿಗೂ ಧರ್ಮ ಮತ್ತು ತತ್ತ್ವದ ಉಪದೇಶಗಳಿಂದ ಸುಖವನ್ನು ಉಂಟುಮಾಡುವ; ಲೋಕದ ಅಜ್ಞಾನವನ್ನು ಕಳೆಯುವ; ನಿರ್ಮಲವಾದ ಗಜಚರ್ಮವನ್ನು ಧರಿಸುವ; ಸಂಸಾರವನ್ನು ಪೂರ್ಣವಾಗಿ ನಾಶಮಾಡುವ ಪ್ರಬಲತತ್ತ್ವಜ್ಞಾನವನ್ನು ಉಪದೇಶಿಸುವ; ಭಕ್ತಿಯಿಂದ ನಮಸ್ಕರಿಸುವವರಿಗೆ ಕವಚದಂತೆ ರಕ್ಷಕರಾಗಿರುವ ಶ್ರೀಮನ್ನೃಹರಿಗುರುಪರಬ್ರಹ್ಮರಿಗೆ ತ್ರಿಕರಣಪೂರ್ವಕವಾದ ವಂದನೆಗಳು.

"ಕಲಾನಿಧಿಶಿರೋಮಣೇಃ ಸಮುಚಿತೈವ ಸರ್ವಜ್ಞತಾ
ಹಿರಣ್ಯಪರಮದ್ವಿಷಸ್ತವ ನೃಸಿಂಹಭಾವಸ್ತಥಾ ।
ತಥೈವ ಪರಹಂಸತಾ ಭವತಿ ಭಾತಿ ಭಾಸಾಂ ನಿಧೌ
ಕವಿತ್ವಮಿದಮದ್ಭುತಂ ಸುಮನಸಾಂ ಗುರೋಸ್ತೇ ಕಥಂ ॥೭೫॥

"ಸಕಲವಿದ್ಯಾಧಿಪತಿಗಳಾಗಿರುವ ತಮಗೆ, ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ ಶ್ರೀಪರಮೇಶ್ವರನಂತೆ, ಸರ್ವಜ್ಞತ್ವವು ಸಹಜವೇ ಆಗಿದೆ; ಧನಾದಿಸರ್ವಸಂಪತ್ತುಗಳನ್ನೂ ದ್ವೇಷಿಸಿ ತಿರಸ್ಕರಿಸಿರುವ ತಮಗೆ, ಹಿರಣ್ಯಕಶಿಪುವನ್ನು ದ್ವೇಷಿಸಿ ಸಂಹರಿಸಿರುವ ಶ್ರೀನೃಸಿಂಹಸ್ವಾಮಿಯಂತೆ, ನೃಸಿಂಹಭಾವವೂ ಸಮಂಜಸವೇ ಸರಿ; ನಿತ್ಯಸ್ವಪ್ರಕಾಶನಿರ್ವಿಶೇಷಪರಬ್ರಹ್ಮತೇಜಃಸ್ವರೂಪರಾದ ತಮಗೆ, ಅಂಥ ಸೂರ್ಯದೇವನಂತೆ, ಪರಮಹಂಸತ್ವವೂ ಸಂಗತವೇ ಆಗಿದೆ; ಹೀಗಿರುವಲ್ಲಿ, ವಿದ್ವಾಂಸರುಗಳಿಗೆಲ್ಲ ಗುರುಗಳಾಗಿರುವ ತಮಗೆ, ದೇವತೆಗಳಿಗೆಲ್ಲ ಗುರುವಾಗಿರುವ ಬೃಹಸ್ಪತಿತ್ವವೇ ಸಮುಚಿತವಾಗಿರುವಲ್ಲಿ ಕವಿತ್ವವು—ದೈತ್ಯಗುರು ಶುಕ್ರಾಚಾರ್ಯತ್ವವು—ಹೇಗೆಂಬುದು ಅದ್ಭುತವಾಗಿದೆ ! ಬೃಹಸ್ಪತಿಗಳೂ ಶುಕ್ರಾಚಾರ್ಯರೂ ಆಗಿರುವರೆಂದು ಭಾವವು. 'ಸರ್ವಾತ್ಮಭಾವೋ

Sri Vidyabharathi Book Centre, Sringeri

 CC-0. In Public Domain. Digitized by eGangotri

ಮೋಕ್ಷಃ'—ಎಂಬಂತೆ, ನಿತ್ಯಮುಕ್ತಸ್ವರೂಪರಾಗಿರುವ ಗುರುವರ್ಯರು ಸರ್ವಾತ್ಮಕರೆಂಬಲ್ಲಿ ಆಶ್ಚರ್ಯವೇನು ? ಉತ್ತಮ ಕವಿಗಳೂ ಆಗಿದ್ದಾರೆ.

"ಆಚಾರ್ಯೇ ಭಗವತಿ ಶಾಸತಿ ಸ್ವಶಿಷ್ಯಾನ್
ಕೌಟಿಲ್ಯಂ ಕುಟಿಲಕುಟೀಲಿಕಾಸು ದೃಷ್ಟಂ ।
ಕಾಠಿಣ್ಯಂ ಕಠಿಣಶಿಲಾಯುಸೇಽಸುಭೂತಂ
ಚಾಪಲ್ಯಂ ಚಪಲಪಲಾಶಪಲ್ಲವೇಷು ॥ ೭೬ ॥

"ಶ್ರೀಭಗವತ್ಪರಮೇಶ್ವರಸ್ವರೂಪರಾದ ಆಚಾರ್ಯವರ್ಯರು ಭಕ್ತ ಶಿಷ್ಯವರ್ಗವನ್ನು ನಿಯಮಿಸುತ್ತಿರಲಾಗಿ, ವಕ್ರಸ್ವಭಾವವು ವಕ್ರಗಳಾದ ಸರ್ಪಗಳಲ್ಲಿಯೂ; ಕಠಿಣಸ್ವಭಾವವು ಕಲ್ಲುಗಳಲ್ಲಿಯೂ ಕಬ್ಬಿಣಗಳಲ್ಲಿಯೂ; ಚಪಲತೆಯು ಮುತ್ತುಗದ ಎಲೆಗಳಲ್ಲಿಯೂ ಕಾಣಬರುತ್ತಿದ್ದುವೇ ಹೊರತು, ಈ ಶಿಷ್ಯರಲ್ಲಿಲ್ಲ.

"ನಿಧಾನಂ ಶಾಖಾನಾಂ ನಿರುಪಮಗುಣಾನಾಂ ಸುಮನಸಾಂ
ನಿವಾಸಂ ಸಾಧೂನಾಮಮೃತಫಲದಾನೈಕನಿಪುಣಂ ।
ನಿತಾಂತಂ ತಾಂತಾನಾಂ ನಿರವಧಿಕಸಂತಾಪಹರಣಂ
ನಿರಾಬಾಧಂ ಸೇವೇ ನೃಹರಿಗುರುಕಲ್ಪದ್ರುಮವರಂ ॥ ೭೭ ॥

"ಸರ್ವರ ಸಕಲೇಷ್ಟದಾನನಿಪುಣವಾದ ಸ್ವರ್ಗಲೋಕದ ಕಲ್ಪವೃಕ್ಷವು, ಅನೇಕಶಾಖೆಗಳಿಂದ ರಮ್ಯವಾಗಿದ್ದು; ಅಸಮಾನಗಳಾದ ಸಾತ್ವಿಕಗುಣಗಳನ್ನುಳ್ಳ ದೇವತೆಗಳಿಗೆ ಆಶ್ರಯವಾಗಿದ್ದು, ಸಾತ್ವಿಕರಿಗೆ ಅಮೃತಸಮಾನಗಳಾದ ಫಲಗಳನ್ನು ನೀಡುತ್ತ; ದುಃಖಸಂತಪ್ತರಾದವರ ತಾಪವನ್ನೆಲ್ಲ ಪರಿಹರಿಸುವಂಥದ್ದಾಗಿದೆ.

ಸಕಲವೇದಶಾಖಾವಿದ್ಯೆಗಳಿಗೂ ಆಧಾರವಾಗಿ; ಶಾಂತಿದಾಂತ್ಯಾದಿ ಸದ್ಗುಣಮಂಡಿತರಾಗಿರುವ ವಿದ್ವಾಂಸರಿಗೆ ಆಶ್ರಯವಾಗಿ; ಧಾರ್ಮಿಕಸತ್ಪುರುಷರಿಗೆ ಅಮೃತಸ್ವರೂಪವಾದ ಮೋಕ್ಷಫಲವನ್ನು ದೊರಕಿಸಿಕೊಡುವುದರಲ್ಲಿ ನಿಪುಣವಾಗಿ; ಸಂಸಾರತಾಪತ್ರಯಸಂತಪ್ತರಾದವರ ಸಕಲತಾಪಗಳನ್ನೂ ಪರಿಹರಿಸುವ; ಶ್ರೇಷ್ಠವಾದ ಈ ಶ್ರೀನೃಹರಿಗುರುವರ್ಯರೆಂಬ ಕಲ್ಪವೃಕ್ಷವನ್ನು ನಿರಂತರವೂ ಸೇವಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಕಲಾನಾಥೇ ನಿತ್ಯಂ ಕಲಿತಯತಿರೂಪೇ ಕ್ಷಿತಿತಲೇ
ವಿನಾ ದೋಷಾಶ್ಲೇಷಂ ವಿಲಸತಿ ವಿಲಾಸೈರಭಿನವೈಃ ।
ವಿಚಿತ್ರಂ ವೃತ್ತಂ ತತ್ಪರಿಚಯಜುಷಾಮಪ್ಯವಿಕಲಂ
ಸದಾ ಸೂರ್ಯಾಲೋಕೋ ಭವತಿ ಚ ತದಾಲೋಕಬಲತಃ ॥
॥ ೭೮ ॥

"ಕಲೆಗಳ ಅಧಿಪತಿಯಾಗಿರುವ ಚಂದ್ರನು—ಪರಮೇಶ್ವರನು; ಪರಮ ಹಂಸಯತಿರೂಪದಿಂದ; ಭೂತಲದಲ್ಲಿ; ಸರ್ವದೋಷರಹಿತನಾಗಿ; ವಿಹರಿಸುತ್ತಿರುವಲ್ಲಿ; ಅವರ ಪರಿಚಯವುಳ್ಳವರಿಗೆಲ್ಲ ವಿಚಿತ್ರವಾದ ಫಲವು ಉಂಟಾಯಿತು; ಏನೆಂದರೆ,–ಶ್ರೀಗುರುಯತೀಶ್ವರರ ದರ್ಶನಮಾತ್ರದಿಂದ ಯಾವಾಗಲೂ ಸೂರ್ಯಪ್ರಕಾಶವೇ ಆಗುತ್ತಿತ್ತು ! ದಿವ್ಯತತ್ತ್ವಜ್ಞಾನವೇ ಸಿದ್ಧಿಸಿ, ಸ್ವಪ್ರಕಾಶಾತ್ಮಾನುಭವವೇ ಆಗುತ್ತಿತ್ತು !—ಎಂದು ಭಾವವು.

"ಧನಾಧ್ಯಕ್ಷಃ ಸಾಕ್ಷಾದಪಿ ನವನಿಧೀನಾಮಧಿಪತಿಃ
ಸ ಸಖ್ಯೇ ಕೌಪೀನಂ ಗಗನವಸನಾಯಾಪಿ ನ ದದೌ ।
ಭವಾನ್ ದತ್ತೇಽಭೀಷ್ಟಂ ನಯನಪಥಭಾಜಾಮವಿರತಂ
ಕೃಪಾ ತೇ ಕಲ್ಯಾಣೀ ಕಮಿವ ಹಿ ನ ಸೂತೇ ಸುಕೃತಿನಾಂ
॥ ೭೯ ॥

"ಸಾಕ್ಷಾತ್ತಾಗಿ ನವನಿಧಿಗಳಿಗೂ ತಾನು ಅಧಿಪತಿಯಾಗಿದ್ದರೂ, ಕುಬೇರನು, ದಿಗಂಬರನಾಗಿ ತನ್ನ ಸ್ನೇಹಿತನಾಗಿರುವ (ಕುಬೇರಸ್ತ್ರ್ಯಂಬಕಸಖಃ) ಪರಶಿವನಿಗೆ ಮಾನರಕ್ಷಣೆಗಾಗಿ ಒಂದು ತುಂಡು ಕೌಪೀನವಸ್ತ್ರವನ್ನು ಸಹ ಕೊಟ್ಟಿಲ್ಲ ಶ್ರೀಗುರುಸಾರ್ವಭೌಮರೆ, ಸರ್ವತ್ಯಾಗಮಾಡಿರುವವರಾದರೂ ತಾವು, ತಮ್ಮ ದೃಷ್ಟಿಗೆ ಗೋಚರವಾಗುವವರೆಲ್ಲರ ಸರ್ವಾಭೀಷ್ಟಗಳನ್ನೂ ಪೂರ್ಣಮಾಡುತ್ತಿರುವಿರಿ; ಕಲ್ಯಾಣಕರವಾಗಿರುವ ತಮ್ಮ ಕೃಪಾಕಟಾಕ್ಷವು ಧರ್ಮನಿರತರಾದವರಿಗೆ ಏನನ್ನು ತಾನೇ ಸಾಧಿಸಿಕೊಡುವುದಿಲ್ಲ !

ಪರಮೇಶ್ವರನು ಪರಮಾರ್ಥವಾಗಿ ಸರ್ವೋಪಾಧಿರಹಿತನಾಗಿ ಅನಾವೃತಪರಿಪೂರ್ಣಸ್ವಪ್ರಕಾಶಸ್ವರೂಪನೆಂಬುದನ್ನೂ, ನಿತ್ಯತೃಪ್ತಸ್ವರೂಪನೆಂಬುದನ್ನೂ ಅವನು ದಿಗಂಬರನೆಂಬುದು ತಿಳಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಪರಃ ಸಾಹಸ್ರಂ ಯತ್ಪರಿಲಘಯತೇ ವಾಸರಕೃತಾಂ
ಪಲಾಯಂತೇ ಯಸ್ಮಾಜ್ಜ್ವಲನಮುಖತೇಜಾಂಸ್ಯಪಿ ಭಯಾತ್।
ತದಂತಸ್ಥಂ ಧ್ವಾಂತಂ ಝಟಿತಿ ಬಹುದೂರಂ ಗಮಯತೋ
ಗುರೂಣಾಂ ಪಾದಾಬ್ಜೇ ಹೃದಯಮಲಲೀಲಾಂ ಕಲಯತಾಂ
|| ೮೦ ||

"ಗ್ರೀಷ್ಮರ್ತುವಿನ ಸಹಸ್ರಸೂರ್ಯರನ್ನೂ ತಿರಸ್ಕರಿಸುವ; ಅಗ್ನಿ, ಮಿಂಚು—ಮುಂತಾದ ಎಲ್ಲ ತೇಜಸ್ಸುಗಳೂ ಒಟ್ಟು ಸೇರಿದರೂ ಯಾವುದನ್ನು ಕಂಡು ಭಯದಿಂದ ದಿಕ್ಪಾಪಾಲಾಗಿ ಓಡಿಹೋಗುವುವೋ; ಅಂಥ ಅಂತಃಕರಣದ ಅಜ್ಞಾನಾಂಧಕಾರವೂ ಸಹ, ಶ್ರೀಗುರುದೇವರ ಪಾದಕಮಲಗಳಲ್ಲಿ, ಕಮಲದಲ್ಲಿ ದುಂಬಿಯು ಹೇಗೋ ಹಾಗೆ, ಯಾರು ತಮ್ಮ ಮನಸ್ಸನ್ನು ನಿತ್ಯಾಸಕ್ತವಾಗಿ ವಿಹರಿಸುವಂತೆ ಮಾಡಿಕೊಳ್ಳುತ್ತಾರೋ, ಅವರಿಗೆ ಮತ್ತೆ ಬರದಂತೆ ಕೂಡಲೇ ಆದು ಬಹುದೂರವಾಗುತ್ತದೆ.

"ದುರಾಶಾನಾಮಾಶಾಂ ವಿದಲದಪಿ ವೀಕ್ಷಾಬಲಲವಾತ್
ನಿರಾಶಾನಾಮಾಶಾಂ ನಿಜಪರಿಚಿತೌ ಯಜ್ಜನಯತೇ।
ವಿಚಿತ್ರೈಶ್ಚಾರಿತ್ರೈಸ್ತದಿಹ ಪರಮಾಶ್ಚರ್ಯಜನಕಂ
ಕದಾ ಸಂಸೇವಿಷ್ಯೇ ಕಲಿತಯತಿರೂಪಂ ಕುಲಧನಂ || ೮೧ ||

"ದರ್ಶನಕಟಾಕ್ಷಲೇಶಮಾತ್ರದಿಂದಲೇ ದುರಾಶೆಯುಳ್ಳವರ ಆಶೆಗಳನ್ನು ನಾಶಮಾಡುತ್ತ; ಸರ್ವಾಶಾರಹಿತರಾದ ನಿಷ್ಕಾಮಿಗಳಿಗೆ ಸ್ವಾತ್ಮತತ್ತ್ವದ ಅನುಭವವನ್ನೇ ಸಿದ್ಧಿಸಿಕೊಡುತ್ತ; ವಿಚಿತ್ರಗಳಾದ ಚರಿತ್ರೆಗಳಿಂದ ಪರಮಾಶ್ಚರ್ಯಕರವಾಗಿರುತ್ತ, ನಮ್ಮ ಕುಲಧನವಾಗಿರುವ ಶ್ರೀಗುರುಯತಿದೇವರನ್ನು ಯಾವಾಗ ನಾನು ಪೂರ್ಣವಾಗಿ ಸೇವಿಸಿ ಧನ್ಯನಾದೇನು ? ಇಂಥ ಭಾಗ್ಯವನ್ನು ಶ್ರೀಗುರುದೇವರು ಅನುಗ್ರಹಿಸಲಿ !

"ಅಯೇ ಪಾಯಂ ಪಾಯಂ ಹೃದಯ ನಿರಪಾಯಂ ಗುರುವಚಃ
ಪಯಃ ಪಾತುಂ ಮಾತುಃ ಪ್ರಭವತಿ ಜನೋ ನೈವ ಭುವನೇ।

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರಾಶೈರಾಶಾಸ್ಯೇ ನಿರವಧಿಸುಖಾವಾಸನಿಲಯೇ
ನಿಧೇಹಿ ಸ್ಥೇಮಾನಂ ನಿಖಿಲಜಗತಾಂ ದೇಶಿಕವರೇ ॥ ೮೨ ॥

"ಎಲೆ ಮನಸ್ಸೆ, ಶ್ರೀದೇಶಿಕೇಂದ್ರರ ತತ್ತ್ವೋಪದೇಶಾಮೃತವನ್ನು ನಿರ್ಗಲವಾಗಿ ಪಾನಮಾಡಿದವರು, ಲೋಕದಲ್ಲಿ ಮತ್ತೆ ತಾಯಿಯ ಸ್ತನ್ಯ ಪಾನಮಾಡಬೇಕಾದಂಥ ಜನ್ಮವನ್ನು ಪಡೆಯದೆ, ನಿತ್ಯಮುಕ್ತಾದ್ವಿತೀಯ ಪರಬ್ರಹ್ಮಸ್ವರೂಪರೇ ಆಗಿ ಧನ್ಯರಾಗುವರು; ಆದಕಾರಣ, ಹೇ ಮನಸ್ಸೆ, ನಿರತಿಶಯಾಖಂಡಪರಮಾನಂದಘನಸ್ವರೂಪವಾಗಿದ್ದು, ಆದ್ದರಿಂದ ಎಲ್ಲ ಆಸೆಗಳನ್ನು ತೊರೆದವರೂ ಅಪೇಕ್ಷಿಸುವ, ಜಗದೇಕಶ್ರೀದೇಶಿಕಸಾರ್ವಭೌಮ ರಲ್ಲಿಯೇ ಸ್ಥಿರತೆಯನ್ನು ಹೊಂದು; ನಿನ್ನ ಸ್ವಭಾವವಾದ ಚಾಪಲ್ಯವನ್ನು ಪೂರ್ಣವಾಗಿ ತ್ಯಜಿಸು.

"ಸುಧಾಸಾಮ್ಯಂ ವಾಚಾಂ ಗುರುವರ ಸುದೂರಂ ತವ ಗತಂ
ಸುಧಾಂ ಪೀತ್ವಾ ದೇವಾ ಮಖಚರುಪುರೋಡಾಶರುಚಯಃ ।
ನಿಪೀಯ ತ್ವದ್ವಾಚಂ ನಿಯತಕರಣಾ ನಿತ್ಯಸುಖಿತಾಃ
ನಿರೀಕ್ಷಂತೇ ಧನ್ಯಾ ನಿಖಿಲಮಪಿ ಲೋಕಂ ತೃಣಮಿವ ॥ ೮೩ ॥

"ಶ್ರೀಗುರೂತ್ತಮರೆ, ತಮ್ಮ ಉಪದೇಶವಚನಗಳನ್ನು ಅಮೃತಕ್ಕೆ ಸಮಾನಗಳೆಂದು ಕೆಲವರು ವರ್ಣಿಸುತ್ತಾರೆ; ಇದು ಸರಿಯಲ್ಲ. ಏಕೆಂದರೆ, ತಮ್ಮ ವಚನಗಳಿಗೂ ಅಮೃತಕ್ಕೂ ಬಹು ವ್ಯತ್ಯಾಸವಿದೆ. ಅಮೃತವನ್ನು ನಿತ್ಯವೂ ಸೇವಿಸುವ ದೇವತೆಗಳು ಯಜ್ಞಗಳಲ್ಲಿ ಚರು ಮತ್ತು ಪುರೋಡಾಶ (ಅನ್ನ ಮತ್ತು ಹಿಟ್ಟು)ಗಳಲ್ಲಿ ಆಸೆಯುಳ್ಳವರಾಗಿದ್ದಾರೆ; ಜಿತೇಂದ್ರಿಯರಾಗಿ ತಮ್ಮ ವಚನವನ್ನು ಪಾನಮಾಡಿದ ಧನ್ಯರು, ಸಮಸ್ತಜಗತ್ತನ್ನೂ ಹುಲ್ಲುಕಡ್ಡಿಗೆ ಸಮವಾಗಿ ತಿರಸ್ಕಾರವಾಗಿ ಕಾಣುವರು!

"ಸುಧಾಯಾಸ್ತ್ವದ್ವಾಚಾಮಪಿ ಮಧುರಿಮಾಣಂ ವಿವಿದಿಷೌ
ಸಮಾರೋಪ್ಯ ಸ್ಪಷ್ಟಂ ತುಲಯತಿ ತುಲಾಯಾಂ ಕಮಲಜೇ ।
ಸುಧಾ ತತ್ರೋರ್ಧ್ವಸ್ಥಾ ಸುರವರಪುರಂ ಪ್ರಾಪ ಸುತರಾಂ
ಅಧಃಸ್ಥಾ ವಾಚಸ್ತೇ ಪ್ರಮದನುತಿಮಾತ್ರಂ ವಿದಧತೇ ॥ ೮೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

"ಹೇ ಗುರೋ, ಕಮಲಾಸನನಾದ ಶ್ರೀಬ್ರಹ್ಮದೇವನು, ಅಮೃತದ ಮತ್ತು ತಮ್ಮ ಮಾತುಗಳ ಮಾಧುರ್ಯವನ್ನು ತೂಕಮಾಡಿ—'ಯಾವುದು ಹೆಚ್ಚು' —ಎಂಬುವನ್ನು ನಿಶ್ಚಯಿಸುವುದಕ್ಕಾಗಿ, ಇವೆರಡನ್ನೂ ತಕ್ಕಡಿಯಲ್ಲಿಟ್ಟು ತೂಕ ಮಾಡಿದನು; ಆಗ ಅಮೃತವು ಅತ್ಯಂತಹಗುರವಾಗಿ ಮೇಲಿನ ಸ್ವರ್ಗಕ್ಕೆ ಏರಿತು; ತಮ್ಮ ಅಮೋಘಗಳಾದ ಮಾತುಗಳು ಗುರುತರಗಳಾಗಿ ಭೂಲೋಕ ದಲ್ಲಿ ಎಲ್ಲೆಡೆಯಲ್ಲಿಯೂ ಅತಿಶಯಾನಂದವನ್ನು ಉಂಟುಮಾಡುತ್ತಿವೆ.

"ಪರಾಂ ಶ್ರೀಮದ್ವಾಣೀಗಲದಮೃತಮಾಧುರ್ಯಲಹರೀಂ
ಪಯೋ ದೃಷ್ಟ್ವಾ ಭೀತಂ ನಿನಸತಿ ಗವಾಮೂಧಸಿ ಸದಾ ।
ಸುಧಾ ಲಜ್ಜಾಕ್ರಾಂತಾ ಗುರುತಿಲಕ ಲೋಕಾಂತರಮಗಾತ್
ಸಿತಾ ಚಿಂತಾಕ್ರಾಂತಾ ಸಪದಿ ಸಿತಿಮಾನಂ ಗತವತೀ ||೮೫||

"ಹೇ ಗುರುತಿಲಕರೆ, ತಮ್ಮ ಉಪದೇಶವಚನಗಳ, ಶಬ್ದದಿಂದಲೂ ಅರ್ಥ ದಿಂದಲೂ ಅಮೃತಕ್ಕೆ ಸಮಾನವಾದ ರುಚಿಯನ್ನು ಕಂಡು, ಹಾಲು ಭಯ ಪಟ್ಟು ಹಸುಗಳ ಕೆಚ್ಚಲಿನಲ್ಲಿ ಅಡಗಿಕೊಂಡಿದೆ; ಅಮೃತವೂ ಲಜ್ಜೆಗೊಂಡು ಲೋಕಾಂತರಕ್ಕೇ ತೆರಳಿತು; ಸಕ್ಕರೆಯೂ ಚಿಂತಾಕ್ರಾಂತವಾಗಿ, ಕಾಂತಿಹೀನ ವಾಗಿ ಬಿಳುಪಾಯಿತು.

"ಸಮಾಲೋಕ್ಯಸ್ಫಾರಂ ಬತ ಮಧುರಿಮಾಣಂ ತವ ಗಿರಾಂ
ಸಮುಂದಾಕ್ಷಾ ದ್ರಾಕ್ಷಾ ಚರತಿ ಖಲು ಸಂಕೋಚನಿಯಮಂ ।
ಅಸೂಯಾಂಧಂ ಮೋಚಾಫಲಮಪಿ ಮುಖೇ ನೈಲ್ಯಮಯತೇ
ಪರಾಭೂತಂ ಭೀತ್ಯಾ ಪನಸಮಪಿ ರೋಮಾಂಚಿತವಪುಃ"
|| ೮೬ ||

"ಭೋ ಸ್ವಾಮಿನ್, ತಮ್ಮ ಉಪದೇಶವಾಕ್ಯಗಳ ಅತಿಶಯಿತಶ್ರೇಯಸ್ಕರ ಗಳಾದ ವೈಭವಗಳನ್ನು ಕಂಡು, ದ್ರಾಕ್ಷಿಯ ಹಣ್ಣು ಮುದುರಿಕೊಂಡು ಸಂಕುಚಿತವಾಗಿದೆ; ರಸಬಾಳೆಯ ಹಣ್ಣು ಅಸೂಯೆಯಿಂದ ಕಪ್ಪಾದ ಮುಖ ವುಳ್ಳದ್ದಾಗಿದೆ; ಹಲಸಿನಹಣ್ಣು ತಿರಸ್ಕಾರಹೊಂದಿ ಭಯದಿಂದ ರೋಮಾಂಚ ವುಳ್ಳದ್ದಾಗಿದೆ."

7

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕದಲ್ಲಿ ಸಹಜವಾಗಿ ಸಿದ್ಧವಾಗಿರುವ ವಸ್ತುಗಳ ಸ್ಥಿತಿಯನ್ನೇ ಅವಲಂಬಿಸಿಕೊಂಡು, ಕವಿಗಳು, ತಾವು ವರ್ಣಿಸಬೇಕಾಗಿರುವ ವಿಷಯಗಳ ಮೇಲ್ಮೆಯನ್ನು, ಅದರಿಂದಲೇ ಆಗಿರುವಂತೆ ನಿರೂಪಿಸುತ್ತಾರೆ.

ಜಗತ್ಸಮಸ್ತಂ ಕಲಿನಾ ವಿನಷ್ಟಂ
ದೃಷ್ಟ್ವಾ ಯತೀಶಶ್ಚಕಮೋಽಭ್ಯುಪಾಯಂ ।
ವಿನಿಶ್ಚಿತೇ ಜೀವಿತಸಂಶಯೇಽಪಿ
ಚಿಕಿತ್ಸನಂ ನೋ ಭಿಷಜಸ್ತ್ಯಜಂತಿ ॥ ೮೭ ॥

ಪ್ರಬಲವಾದ ಕಲಿದೋಷದಿಂದ ಜನಗಳ ದುರಾಚಾರಾನಾಚಾರಗಳಿಂದ ದುರ್ಬುದ್ಧಿದುಸ್ತರ್ಕಗಳು ಪ್ರಬಲಿಸಿ, ಸಾತ್ವಿಕವಾದ ಆಸ್ತಿಕ್ಯ ಶಾಸ್ತ್ರಶ್ರದ್ಧೆಗಳು ಕ್ಷಣಕ್ಷಣಕ್ಕೂ ಕ್ಷೀಣಿಸುತ್ತ, ತಮ್ಮ ಇದುವರೆಗಿನ ಪ್ರಯತ್ನಗಳೆಲ್ಲ ವ್ಯರ್ಥವಾದದ್ದನ್ನು ಪರಿಭಾವಿಸಿ, ಶ್ರೀಗುರುವರ್ಯರು, ತುಂಬ ವ್ಯಥೆಪಟ್ಟು, ಜನರಿಗೆ ಸದ್ಬುದ್ಧಿಯನ್ನು ಉಂಟುಮಾಡಲು ಮತ್ತೆ ಯತ್ನಶೀಲರಾದರು.

ರೋಗಿಯು ಮರಣೋನ್ಮುಖವಾಗಿರುವುದು ಸರ್ವಥಾ ನಿಶ್ಚಿತವಾಗಿದ್ದರೂ, ವೈದ್ಯವರನು ತನ್ನ ಚಿಕಿತ್ಸಾಕ್ರಮದಲ್ಲಿ ಅನಾದರನಾಗುವುದು ಯುಕ್ತವಲ್ಲವಲ್ಲವೆ ?

ಪ್ರತಿಗ್ರಾಮಂ ಗತ್ವಾ ಪ್ರತಿಜನಮಥಾಹೂಯ ಸದಯಂ
ಸದಾಚಾರಸ್ತೇಷಾಂ ಸಮುಪಜನನೀಯಃ ಕಥಮಪಿ ।
ಕೃತೇಽಪ್ಯೇವಂ ನಷ್ಟಾ ನ ಹಿ ಯದಿ ದುರಾಚಾರಸರಣಿಃ
ಭರೋ ನಿಕ್ಷೇಪ್ತವ್ಯಃ ಸಪದಿ ಮಮ ಭಾಷ್ಯಪ್ರದಾಯಿನಿ"

"ನಿಖಿಲಲೋಕಾಧಿಪತಿಯಾಗಿರುವ ಶ್ರೀಪರಮೇಶ್ವರನು ವೇದಶಾಸ್ತ್ರಗಳನ್ನು ಲೋಕದಲ್ಲಿ ಪ್ರಚಾರಮಾಡಿರುವುದೇ ಲೋಕಕ್ಷೇಮಕರವಾದ ಶಾಸ್ತ್ರೀಯ ಧರ್ಮಸ್ಥಾಪನೆಗಾಗಿದೆ; ಇದಕ್ಕಾಗಿಯೇ ಶ್ರೀಪರಶಿವನು ಶ್ರೀಶ್ಶಂಕರಭಗವತ್ಪಾದರವರ ರೂಪದಿಂದ, ಅವತರಿಸಿಬಂದು ಭಾಷ್ಯವಿರಚನೆ, ಮಠಸ್ಥಾಪನೆ, ಗುರುಸಂಪ್ರದಾಯಪ್ರವರ್ತನೆ—ಮುಂತಾದಕಾರ್ಯಗಳನ್ನು ಮಾಡಿರುತ್ತಾನೆ. ಈ ಶ್ರೀಶಾರದಾಜಗದ್ಗುರುಪರಂಪರೆಯಲ್ಲಿ ವಿರಾಜಿಸಿದ ಶ್ರೀವಿದ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ರಣ್ಯರೇ ಮೊದಲಾದ ಆಚಾರ್ಯವರ್ಯರುಗಳೂ ಇದುವರೆಗೂ ಇದನ್ನೇ ಯಶಸ್ವಿಯಾಗಿ ನೆರವೇರಿಸಿಕೊಂಡು ಬಂದಿರುತ್ತಾರೆ. ನಮ್ಮ ಪೂಜ್ಯಗುರು ವರ್ಯರೂ ಇದನ್ನು ಸಾಧಿಸಿಕೊಂಡು ಬಂದಿರುವುದಲ್ಲದೆ, ಇದನ್ನೇ ಅನುಸರಿಸಿ ಕೊಂಡುಬರಬೇಕೆಂದೂ ನಮಗೆ ಕಟ್ಟಪ್ಪಣೆಯನ್ನು ನೀಡಿರುತ್ತಾರೆ. ಶ್ರೀಗುರು ದೇವತಾನುಗ್ರಹದ ಅವಲಂಬನೆಯಿಂದ ನಾವೂ ಈ ದಿಶೆಯಲ್ಲಿಯೇ ವಿಶೇಷ ವಾಗಿ ಸಾಹಸಮಾಡಿದ್ದಾಗಿದೆ. ಆದರೂ, ಕಲಿಮಹಿಮೆಯೋ, ಜನಗಳ ದೌರ್ಭಾಗ್ಯವೋ, ನಮ್ಮ ದುರದೃಷ್ಟವೋ, ಯಾವಕಾರಣವೋ,—ಜನಗಳಲ್ಲಿ ಆಸ್ತಿಕ್ಯದ ಗಂಧವೂ ಉಂಟಾಗುವುದೂ ಕಾಣಬರುತ್ತಿಲ್ಲ. ಆದರೂ, ಕಡೆಯ ಪ್ರಯತ್ನವಾಗಿ, ಈಗ, ಪ್ರತಿಗ್ರಾಮಕ್ಕೂ ಹೋಗಿ, ಅಲ್ಲಿರುವ ಪ್ರತಿಯೊಬ್ಬ ರನ್ನೂ ಹತ್ತಿರಕ್ಕೆ ಬರಮಾಡಿಕೊಂಡು, ಅವರವರಿಗೆ ಬೇಕಾದ್ದನ್ನೆಲ್ಲ ಕೊಟ್ಟು, ಸದ್ಬುದ್ಧಿಯನ್ನು ಉಂಟುಮಾಡಲು ಯತ್ನಿಸೋಣ; ಇಷ್ಟಾದರೂ ಜನಗಳಲ್ಲಿ ಆಸ್ತಿಕ್ಯವು ಮೂಡದಿರುವ ಪಕ್ಷದಲ್ಲಿ, ಈ ಜಗದ್ಗುರುವಿನ ಅಧಿಕಾರವನ್ನು ನಿರ್ವಹಿಸಲು ನಾವು ಅಶಕ್ತರೆಂದಾಗುವುದರಿಂದ, ಈ ಅಧಿಕಾರವನ್ನು, ಪೀಠ ವನ್ನು ಸ್ಥಾಪಿಸಿ ಪ್ರವರ್ತಿಸಿರುವ ಶ್ರೀಮದ್ಭಾಷ್ಯಕಾರರ ಚರಣಾರವಿಂದಗಳಲ್ಲಿ ಅರ್ಪಿಸಿಬಿಡೋಣ"—ಎಂದು ಅತ್ಯಂತದುಃಖದಿಂದ ತೀರ್ಮಾನಿಸಿಕೊಂಡರು.

ಏವಂ ವಿನಿಶ್ಚಿತ್ಯ ಕುತೂಹಲೇನ
ವಾಂಛಂತಿ ಯೇ ಯೇ ಮನುಜಾ ಯಮರ್ಥಂ ।
ಮಂತ್ರಂ ವರಂ ವಾ ಪ್ರತಿಮಾಗೃಹೀತಿಂ
ದದೌ ತದಾನೀಂ ಗುರುಸಾರ್ವಭೌಮಃ ॥ ೪೯ ॥

ಈಪ್ರಕಾರವಾಗಿ ನಿಶ್ಚಯಿಸಿಕೊಂಡು, ಗುರುಸಾರ್ವಭೌಮರು, ಮಂತ್ರ ಗಳನ್ನೋ, ವರಗಳನ್ನೋ, ದೇವತಾಪ್ರತಿಮೆಗಳನ್ನೋ—ಯಾರು ಯಾರಿಗೆ ಏನೇನನ್ನು ಅಪೇಕ್ಷಿಸಿದರೋ, ಅವರವರಿಗೆ ಅದದನ್ನೆಲ್ಲ ಕೊಟ್ಟು, ಧರ್ಮನಿರತ ರಾಗುವಂತೆ ಹಿತವನ್ನು ಉಪದೇಶಿಸಿದರು. ವೇದಾಧ್ಯಯನಶಾಸ್ತ್ರಾಧ್ಯಯನ ಗಳಿಗಾಗಿ ಶೃಂಗೇರಿಯಲ್ಲಿಯೂ, ಬೆಂಗಳೂರಿನಲ್ಲಿಯೂ ಪಾಠಶಾಲೆಗಳನ್ನು ಪ್ರವರ್ತಿಸಿದರು; ವಿದ್ವಾಂಸರುಗಳಿಗೆ ಆಶ್ರಯಕೊಟ್ಟು ಪ್ರೋತ್ಸಾಹಿಸಿದರು; ವಿದ್ಯಾಗಣಪತ್ಯುತ್ಸವಸಂದರ್ಭದಲ್ಲಿ ಪಂಡಿತರ ವಿದ್ವತ್ಸಭೆಯನ್ನು ಕರೆದರು;

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಂಕರಭಗವತ್ಪಾದರವರ ಜಯಂತ್ಯುತ್ಸವಗಳನ್ನು ಏರ್ಪಡಿಸಿದರು; ಎಲ್ಲರನ್ನೂ ಆದರದಿಂದ ಬರಮಾಡಿಕೊಂಡು, ಅವರುಗಳ ಸಂದೇಹಗಳನ್ನೆಲ್ಲ ಕೇಳಿ, ಅವುಗಳನ್ನು ಅವರಿಗೆ ಮನವರಿಕೆಯಾಗುವಂತೆ ಸಮಾಧಾನಹೇಳಿ ಪರಿಹರಿಸಿದರು; ಹೀಗೆ ದಿವಾರಾತ್ರಿಯೂ ಈ ಚಿಂತೆಯಲ್ಲಿಯೇ ಗುರುವರ್ಯರು ಮಗ್ನರಾದರು. ಇವುಗಳ ವಿವರಗಳನ್ನು ಗುರುಸಾರ್ವಭೌಮರ ವಿಸ್ತೃತ ಚರಿತ್ರೆಯಿಂದ ವಿಶದವಾಗಿ ತಿಳಿಯಬಹುದು.

ಕಾಲೇ ಕಾಲೇ ಕಲಿವಿಲಸನಾದ್ವಿಶ್ಲಥೇ ಧರ್ಮಸೇತೌ
ಏನಃಸ್ರೋತಸ್ಯವನಿಮಖಿಲಾಂ ಮಜ್ಜಯತ್ಯಂತರಂತಃ ।
ಆಚಾರ್ಯತ್ವಂ ಭಗವತಿ ಪರೇ ಶಂಕರೇ ಸನ್ನಿಧಾತುಂ
ಕ್ಷೇತ್ರಂ ಯತ್ನಾದ್ವಿಚಿತಮಮುನಾ ಕಾಲಟೀ ನಾಮಧೇಯಂ ॥ ೬೦ ॥

ಕಲಿಕಾಲವು ಮುಂದುವರಿಯುತ್ತ ಬಂದಂತೆಲ್ಲ ಶಾಸ್ತ್ರೀಯಧರ್ಮವು ಶಿಥಿಲಶಿಥಿಲಪ್ರಾಯವೇ ಆಗುತ್ತ, ಪಾಪದ ಪ್ರಬಲವಾದ ಪ್ರವಾಹವು ಜಗತ್ತನ್ನೇ ತನ್ನಲ್ಲಿ ಮುಳುಗಿಸಿಕೊಂಡಿರಲಾಗಿ; ಶ್ರೀಗುರುವರ್ಯರು, ತಮ್ಮ ಗುರುತ್ವಾಧಿಕಾರವನ್ನು ಪರಮಪೂಜ್ಯರಾದ ಶ್ರೀಭಗವತ್ಪಾದರಲ್ಲಿ ಅರ್ಪಿಸಿಬಿಡುವ ನಿಶ್ಚಯದಿಂದ, ಶ್ರೀಭಗವತ್ಪಾದರ ಜನ್ಮಸ್ಥಳವಾದ ಕಾಲಟೀಅಗ್ರಹಾರವನ್ನು ಪ್ರಯತ್ನಪೂರ್ವಕವಾಗಿ ಗೊತ್ತುಹಚ್ಚಿ, ಕೇರಳ ಮತ್ತು ಕೊಚ್ಚಿ ದೇಶಗಳ ರಾಜರುಗಳ ನೆರವನ್ನು ಪಡೆದು, ಕಾಲಟೀ ಅಗ್ರಹಾರವನ್ನು ಶ್ರೀಮಠದ ಅಧೀನಪಡಿಸಿಕೊಂಡು, ಅಲ್ಲಿ ಶ್ರೀಭಗವತ್ಪಾದರವರ ಮತ್ತು ಶ್ರೀಭಗವತ್ಪಾದರವರ ಮಾತೃಶ್ರೀಯವರ ಸ್ಥಾನದಲ್ಲಿ—'ಭಜೇ ಶಾರದಾಂಬಾಮಜಸ್ರಂ ಮದಂಬಾಂ'—ಎಂಬ ಶ್ರೀಭಗವತ್ಪಾದರವರ ಸ್ತೋತ್ರದಂತೆ, ಅವರು ಮಾತೃಶ್ರೀಯಂತೆ ಪರಿಗಣಿಸಿದ್ದ ಶ್ರೀಶಾರದಾದೇವಿಯನ್ನೂ ಪ್ರತಿಷ್ಠಿಸಿ, ಹಿಂದೆಂದೂ ನಡೆಯದ, ಮುಂದೆಂದೂ ನಡೆಯಲಾರದ ನಿರತಿಶಯಮಹತ್ವದಿಂದ ಪ್ರತಿಷ್ಠಾಮಹೋತ್ಸವವನ್ನು, ಎಲ್ಲರಿಗೂ ಸರ್ವವಿಧದಿಂದಲೂ ಭಕ್ತಿಶ್ರದ್ಧೆಗಳೂ ಆಸ್ತಿಕ್ಯವೂ ಉಂಟಾಗುವಂತೆ, ಮಹತಾವೈಭವದಿಂದ ನೆರವೇರಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಗುರುಃ ಪ್ರಾದಾನ್ಮಹ್ಯಂ ಯದಪಿ ಜಗದಾಚಾರ್ಯಕಪದಂ
ಮಯಾಪ್ಯೇತಾವಂತಂ ಸಮಯಮವಿತಂ ತತ್ಕಥಮಪಿ ।
ಮತಿಃ ಪಾತುಂ ನಾತಃ ಪರಮುದಯತೇ ತೇ ತ್ವಧಿಕೃತಿಂ
ಭವಾನೂರೀಕುರ್ಯಾದಿತಿ ಪರಗುರೌ ಪ್ರಾರ್ಥಿತಮಭೂತ್
॥ ೯೧ ॥

"ನಮ್ಮ ಗುರುವರ್ಯರು ಶಾಸ್ತ್ರೀಯಧರ್ಮರಕ್ಷಣೆಯನ್ನು ಮಾಡುವ ಭಾರವನ್ನು ನನಗೆ ವಹಿಸಿಕೊಟ್ಟರು; ನಾನೂ ಇದುವರೆವಿಗೂ ಮಹಾಪ್ರಯತ್ನಗಳಿಂದ ಇದನ್ನು ಪಾಲಿಸಿಕೊಂಡು ಬಂದಿರುತ್ತೇನೆ; ಆದರೂ, ಇದು ತೃಪ್ತಿಕರವಾಗಿ ನೆರವೇರಿರುವುದಿಲ್ಲ; ಇನ್ನು ಮುಂದೆ ಏನುಮಾಡಬೇಕೆಂಬುದನ್ನು ತಿಳಿಯದವನಾಗಿದ್ದೇನೆ; ಆದ್ದರಿಂದ ನನ್ನ ಈ ಅಧಿಕಾರವನ್ನು ತಾವೇ ವಹಿಸಿಕೊಳ್ಳೋಣವಾಗಬೇಕು"—ಎಂದು ಭಗವತ್ಪೂಜ್ಯಪಾದರಲ್ಲಿ ಪ್ರಾರ್ಥಿಸಿಕೊಂಡರು

ಶ್ರೀಭಗವತ್ಪಾದರಲ್ಲಿ ಶ್ರೀಗುರುವರ್ಯರ ಈ ಪ್ರಾರ್ಥನೆಯು ಈ ಪ್ರಕಾರವಾಗಿದೆ—

"ಶುದ್ಧಾದ್ವೈತಪಥಸ್ಯ ಪಾಲನಕೃತೇ ಪೂರ್ವಂ ತ್ವಯಾ ಸ್ಥಾಪಿತೇ
ಸ್ಥಾನೇಷ್ವನ್ಯತಮಸ್ಥ ಶಿಷ್ಯತತಿಗಸ್ತತ್ಕಾರ್ಯಕೃತ್ಯಕ್ಷಮಃ ।
ಅಜ್ಞಾನಾಂ ಧುರಿ ಕೀರ್ತನೀಯಚರಿತೋ ನಾದ್ಯಾಪಿ ವಿದ್ಯಾಲಯಃ
ತಸ್ಮಾತ್ಸ್ಥಾನಮಿದಂ ಗುರೂತ್ತಮ ಕೃಪಾವಾರ್ಧೇ
ತ್ವಮೇವಾಶ್ರಯ ॥

"ವೇದಾಂತಪ್ರಮಾಣಕವಾದ ಅದ್ವಿತೀಯಬ್ರಹ್ಮಾತ್ಮತ್ವತತ್ತ್ವದ ಅನುಭವಕ್ಕೆ ಸಾಧನವಾಗಿರುವ ವೈದಿಕಸನಾತನವರ್ಣಾಶ್ರಮಧರ್ಮಮಾರ್ಗದ ರಕ್ಷಣೆಗಾಗಿ ಹಿಂದೆ ತಾವು ಸ್ಥಾಪಿಸಿದ ನಾಲ್ಕು ಪೀಠಗಳಲ್ಲಿ ಒಂದಾಗಿರುವ ಈ ಶೃಂಗಗಿರಿಶ್ರೀಶಾರದಾಪೀಠದಲ್ಲಿನ ಶಿಷ್ಯಪರಂಪರೆಯಲ್ಲಿ ಬಂದವನಾಗಿರುವ ನಾನು, ಈ ಕಾರ್ಯವನ್ನು ಸಾಧಿಸುವುದರಲ್ಲಿ ಅಸಮರ್ಥನಾಗಿದ್ದೇನೆ; ಧರ್ಮಶ್ರದ್ಧೆಯ ಹೆಸರೇ ಹೋಗಿದ್ದಂಥ ಕಾಲದಲ್ಲಿ ತಾವು ಅವತರಿಸಿಬಂದು ಧರ್ಮವನ್ನು ಪೂರ್ಣವಾಗಿ ಸ್ಥಾಪಿಸಿರುವ ತಮ್ಮ ಮಹಿಮೆಯು ಪರಮಾದ್ಭುತವು;

Sri Vidyabharathi Book Centre, Sringeri

CC-O. In Public Domain. Digitized by eGangotri
ಜನರಿಗೆ ಸರಿಯಾಗಿ ಬೋಧಿಸುವ ತಿಳಿವಿಲ್ಲದ ನನ್ನನ್ನು ಅಜ್ಞರಲ್ಲಿ ಮೊದಲನೆಯವನನ್ನಾಗಿ ಗಣಿಸಬೇಕಾಗಿದೆ; ಆದಕಾರಣ ದಯಾಮಯರಾದ ಗುರುಶ್ರೇಷ್ಠರೇ, ಈ ಸ್ಥಾನವನ್ನು ತಾವೇ ಆಶ್ರಯಿಸಿ ಧರ್ಮರಕ್ಷಣೆಯನ್ನು ಮಾಡಬೇಕಾಗಿದೆ;

"ಯದ್ಯಾ ದುರ್ಮತಭೇದಪಾಟವವತೀಂ ಮೇಧಾಂ
ನವೋನ್ಮೇಷಿಣೀಂ।
ವಿದ್ಯಾಮಾಶ್ರುತಶಾಸ್ತ್ರಪಾಠನಚಣಾಂ ದದ್ಯಾ ದ್ಧ್ರುತಂ
ಚೇದ್ಗುರೋ।
ಸಾಹಾಯ್ಯಂ ಚ ಸುಧನ್ವಪಾರ್ಥಿವಸದೃಗ್ರಾಜಾವಳೇಸ್ತ್ವರ್ಹಂ
ತ್ವದ್ವೀಕ್ಷಾಬಲತೋ ಯತೇ ಯತಿಪತೇ ತತ್ಸಾ-
ಧ್ವಸಂವೃದ್ಧಯೇ" ॥

"ನಿನಗೆ ಕೊಟ್ಟ ಅಧಿಕಾರವನ್ನು ನಡೆಸಬೇಕಾದ್ದು ನಿನ್ನ ಕರ್ತವ್ಯ; ಅದಕ್ಕೆ ಬದಲಾಗಿ,—'ಈ ಅಧಿಕಾರವನ್ನು ನೀವೇ ವಹಿಸಿಕೊಳ್ಳಿ'—ಎಂಬ ಈ ಮಾತು ಎಂಥದ್ದು?"—ಎಂದು ತಾವು ಆಕ್ಷೇಪಿಸುವುದಾದರೆ, ಹಾಗಾದರೆ, ದುಸ್ತರ್ಕಗಳಿಂದ ಅಸಂಗತವಾಗಿ ಪ್ರಶ್ನೆಮಾಡುವ ಈಗಿನ ಜನರಿಗೆ ಸಮಂಜಸವಾಗಿ ಸಮಾಧಾನವನ್ನು ಹೇಳಿ ಅವರನ್ನು ಒಪ್ಪಿಸುವಂಥ ಬುದ್ಧಿಶಕ್ತಿಯನ್ನೂ; ಹಾಗೆಯೇ ಶಾಸ್ತ್ರಾರ್ಥವನ್ನು ವ್ಯಾಖ್ಯಾನಮಾಡುವ ಸಾಮರ್ಥ್ಯವನ್ನೂ; ಮತ್ತೂ ಶಾಸ್ತ್ರನಿಯಮಗಳನ್ನು ಅನುಸರಿಸದೆ ಉಚ್ಛೃಂಖಲರಾಗಿ ವರ್ತಿಸುವ ಜನರನ್ನು ನಿಗ್ರಹಿಸುವಂಥ, ತಮಗೆ ದೊರೆತಿದ್ದಂಥ ಸುಧನ್ವನೇ ಮೊದಲಾದವರಿಗೆ ಸಮರಾದ ರಾಜಾದಿಗಳ ಸಹಾಯವನ್ನೂ ತಾವು ನನಗೆ ಒದಗಿಸಿಕೊಡುವುದಾದರೆ, ಆಗ, ಹೇ ಯತಿಸಾರ್ವಭೌಮವರ್ಯರೆ, ಧರ್ಮಮಾರ್ಗದ ಪ್ರಚಾರಕಾರ್ಯದಲ್ಲಿ, ತಮ್ಮ ಅನುಗ್ರಹದ ಬಲದಮೇಲೆ, ಯಥಾಶಕ್ತಿ ಪ್ರಯತ್ನಿಸುತ್ತೇನೆ."

ಈ ಪದ್ಯಗಳು ಕಾಲಟೀಕ್ಷೇತ್ರದಲ್ಲಿನ ಶ್ರೀಭಗವತ್ಪಾದರವರ ದೇವಾಲಯದಲ್ಲಿ ಗೋಡೆಯ ಮೇಲೆ ಕೆತ್ತಲ್ಪಟ್ಟಿರುತ್ತದೆ. ಈ ಪ್ರಕಾರವಾಗಿ ತಮ್ಮ ಅಧಿಕಾರವನ್ನು ಶ್ರೀಭಗವತ್ಪಾದರಲ್ಲಿ ಅರ್ಪಿಸಿದ್ದ ಕಾರಣದಿಂದಲೇ ಶ್ರೀಗುರು

Sri Vidyabharathi Book Centre, Sringeri

CC-O. In Public Domain. Digitized by eGangotri

ವರ್ಯರು ತಮ್ಮ ಪೀಠಕ್ಕೆ ಉತ್ತರಾಧಿಕಾರಿಗಳನ್ನು ಸ್ವಹಸ್ತದಿಂದ ಸಾಕ್ಷಾತ್ತಾಗಿ ಪರಿಗ್ರಹಿಸದೆ, ಯೋಗ್ಯರಾದ ಶಿಷ್ಯರನ್ನು ನಿರ್ದೇಶಮಾತ್ರಮಾಡಿದರು ಅನಂತರ ಇವರೇ ಗುರುಪೀಠದಲ್ಲಿ ಪಟ್ಟಾಭಿಷಿಕ್ತರಾಗಿ ಶ್ರೀಚಂದ್ರಶೇಖರ ಭಾರತೀ ಮಹಾಸ್ವಾಮಿಗಳೆಂದು ಪ್ರಸಿದ್ಧಿಪಡೆದು ಮಹಾಮಹಿಮೆಗಳಿಂದ ವಿರಾಜಿಸಿದರು.

ಸಂಸಾರಾಬ್ಧಿಂ ಸಕಲವಿಪದಾಮಾಕರಂ ಸಂತರೀತುಂ
ಪಾದಾಬ್ಜೇ ನೋ ಪರಮಕರಣೇ ಸಂಶ್ರಯಧ್ವಂ ಸುಖೇನ।
ಇತ್ಯಾದೇಷ್ಟುಂ ಕರಧೃತವರಜ್ಞಾನಮುದ್ರಾಪದೇಶಾತ್
ಸಾರಂ ತತ್ತ್ವಂ ಸಮುಪದಿಶತಾ ತೇನ ತಚ್ಚಾಭಿನೀತಂ ॥೯೨॥

"ಸರ್ವಾಪತ್ತುಗಳಿಗೂ ಗಣಿಯಾಗಿರುವ ಸಂಸಾರಸಾಗರವನ್ನು ಅನಾಯಾಸವಾಗಿ ದಾಟಲು ಹಡಗಾಗಿರುವ ನನ್ನ ಪಾದಕಮಲಗಳನ್ನೇ ಎಲ್ಲರೂ ಆಶ್ರಯಿಸಿರಿ"—ಎಂಬುದನ್ನು ಲೋಕಕ್ಕೆ ಬೋಧಿಸುವುದಕ್ಕಾಗಿ ಕೈಯಲ್ಲಿ ಹಿಡಿದಿರುವ ಜ್ಞಾನಮುದ್ರೆಯ ನೆಪದಿಂದ ಶ್ರೀಭಗವತ್ಪಾದರು ಯತಿವರ್ಯರ ಈ ಪ್ರಾರ್ಥನೆಯನ್ನು ಅಂಗೀಕರಿಸಿದರು !

ಚೈತನ್ಯರೂಪೇಣ ಗುರೋರನುಜ್ಞಾ
ನಿರ್ವೋಢುಮರ್ಹೇತಿ ವಿನಿಶ್ಚಯೇನ।
ಸ್ವಂ ವೈಭವಂ ತು ಸ್ವಮನೋರಥೇಽಸ್ಮಿ-
ನ್ನಿವೇಶ್ಯ ವಿಜ್ಞಾಪ್ಯ ಮಹೇಶಮುಖ್ಯಾನ್ ॥೯೩॥

ಅಬ್ದೇ ಪರೀತಾಪಿನಿ ಚೈತ್ರಮಾಸೇ
ಶುದ್ಧದ್ವಿತೀಯೇಽಹನಿ ಯೋಗಶಕ್ತ್ಯಾ।
ತೇಜಃ ಸ್ವಕೇ ತೇಜಸಿ ಲೀನಮಾಸೀ
ತ್ಸದಾ ಚಿದಾನಂದಮಯೇ ವಿಶುದ್ಧೇ ॥೯೪॥

ಔಪಾಧಿಕವಾದ ಈ ಪರಿಚ್ಛಿನ್ನರೂಪದಿಂದ ಶ್ರೀಗುರ್ವಾಜ್ಞೆಯನ್ನು ನಿರ್ವಹಿಸುವುದು ಅಶಕ್ಯವೆಂದೂ, ನಿರುಪಾಧಿಕವಾಗಿ ಸರ್ವವ್ಯಾಪಕವಾದ

Sri Vidyabharathi Book Centre, Sringeri

CC-O. In Public Domain. Digitized by eGangotri
ಪಾರಮಾರ್ಥಿಕಚೈತನ್ಯಸ್ವರೂಪದಿಂದಲೇ ಇದು ಸಾಧ್ಯವೆಂದೂ ಭಾವಿಸಿ; ಜಗದ್ಗುರುಪೀಠದ ಈ ವೈಭವವನ್ನು ತಾವು ನಿಶ್ಚಯಿಸಿರುವ ತಮ್ಮ ಉತ್ತರಾಧಿಕಾರಿಗೆ ವಹಿಸತಕ್ಕದ್ದೆಂದು ರಾಜಾದಿಗಳಿಗೆ ತಿಳಿಸಿ;

ಪರಿತಾಪಿಸಂವತ್ಸರದ ಚೈತ್ರಶುದ್ಧದ್ವಿತೀಯಾಶುಭತಿಥಿಯ ಮಧ್ಯಾಹ್ನದ ಸಮಯದಲ್ಲಿ ಯತಿವರ್ಯರ ಚೈತನ್ಯವು, ಔಪಾಧಿಕಸ್ವರೂಪವನ್ನು ಪರಿತ್ಯಜಿಸಿ, ಮಾಯಾತೀತವಾಗಿ ಪರಿಶುದ್ಧವಾದ ಅಪರಿಚ್ಛಿನ್ನಾದ್ವಿತೀಯಾಖಂಡಸಚ್ಚಿದಾನಂದರೂಪಪರಬ್ರಹ್ಮಚೈತನ್ಯಸ್ವರೂಪವಾಯಿತು !

ಸಚ್ಚಿದಾನಂದರೂಪತ್ವಂ ಶಿವತ್ವಂ ನವರೂಪತಾ ।
ನೃಸಿಂಹತ್ವಂ ಭಾರತೀತ್ವಂ ನಿತ್ಯಸಿದ್ಧಂ ಗುರೋರಿದಂ ॥ ೯೫ ॥

ಸಚ್ಚಿದಾನಂದರೂಪವೂ, ಮಂಗಳಸ್ವರೂಪವೂ, ಯಾವಾಗಲೂ ಹೊಸ ಹೊಸದಾಗಿರುವಿಕೆಯೂ, ಪುರುಷೋತ್ತಮತ್ವವೂ, ಸರ್ವಜ್ಞತ್ವವೂ— ಇವೆಲ್ಲವೂ, ಶ್ರೀಗುರುವರ್ಯರಿಗೆ ನಿತ್ಯಸಿದ್ಧಗಳೇ ಆಗಿವೆ.

ಶಾಸ್ತ್ರಶ್ರದ್ಧಾ ದೈವಭಕ್ತಿಃ ಧರ್ಮೇ ನಿಷ್ಠಾ ಚ ನಿತ್ಯದಾ ।
ಕಾರುಣ್ಯಂ ಭಕ್ತನಿಕರೇ ಸಹಸಿದ್ಧಂ ಯತೀಶ್ವರೇ ॥ ೯೬ ॥

ಶಾಸ್ತ್ರದಲ್ಲಿ ದೃಢವಾದ ನಂಬಿಕೆ, ದೇವತೆಗಳಲ್ಲಿ ಪರಮಭಕ್ತಿ, ಶಾಸ್ತ್ರೀಯ ಧರ್ಮದಲ್ಲಿ ನಿಷ್ಠೆ, ಭಕ್ತಜನರಲ್ಲಿ ಅತಿಶಯಕರುಣೆ—ಇವು ಶ್ರೀಯತಿಸಾರ್ವಭೌಮರಲ್ಲಿ ಸಹಜಸಿದ್ಧಗಳೇ ಆಗಿವೆ.

ಶ್ರೀಗುರೋರ್ವಚನಂ ಪಥ್ಯಂ ಸಂಸಾರವಶವರ್ತಿನಾಂ।
ಆದ್ರಿಯಧ್ವಂ ಗುರೋರ್ವಾಕ್ಯಂ ಪ್ರಾಪ್ನುವಧ್ವಂ ಪರಂ ಫಲಂ
॥ ೯೭ ॥

ಸಂಸಾರದುಃಖಕ್ಕೆ ಗುರಿಯಾಗಿರುವವರಿಗೆ, ಶ್ರೀಗುರುವರ್ಯರ ಉಪದೇಶವು ಅತ್ಯಂತಹಿತಕರವಾದುದು. ಆದ್ದರಿಂದ ವಿಚಾರಕುಶಲರಾದ ಜನರು ಶ್ರೀಗುರೂಪದೇಶವನ್ನು ಆದರದಿಂದ ಸ್ವೀಕರಿಸಿ, ಧರ್ಮಸನ್ಮಾರ್ಗದಲ್ಲಿ ವರ್ತಿಸಿ, ಪರಮಫಲವಾದ ಪುರುಷಾರ್ಥವನ್ನು ಪಡೆದು ಧನ್ಯರಾಗತಕ್ಕದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುಚರಣಸರೋಜಸನ್ನಿಧಾನೇ
ಸುಖದೇ ಕಿಮಿತೋಽಮುಧಾ ಪ್ರಯಾಸಿ।
ಅಯಿ ಮನ ನಿಯತಂ ಸ್ಥಿರಂ ಭವಾತ್ರ
ನಿರತಿಶಯಂ ಸುಖಮಾಪ್ಸ್ಯಸಿ ಧ್ರುವಂ ತ್ವಂ ॥ ೯೮ ॥

ಎಲೆ ಮನಸ್ಸೆ, ಶ್ರೀಗುರುಶ್ರೇಷ್ಠರ ಚರಣಕಮಲಗಳು ಹತ್ತಿರದಲ್ಲಿಯೇ ಸಿದ್ಧವಿರುವಾಗ, ಆದನ್ನು ಬಿಟ್ಟು ವ್ಯರ್ಥವಾಗಿ ಬೇರೆ ಎಲ್ಲಿ ಅಲೆಯುತ್ತಿ ? ಶ್ರೀಗುರುವರ್ಯರ ಪಾದಪದ್ಮಗಳಲ್ಲಿಯೇ ಸ್ಥಿರವಾಗಿ ನೆಲೆಸು; ನಿರತಿಶಯ ಸುಖವು ನಿನಗೆ ನಿಶ್ಚಯವಾಗಿಯೂ ದೊರೆಯುವುದು.

ಗುರುಕಾರುಣ್ಯಬಲೇನ ಲೇಶತಸ್ತ-
ದ್ಗುರುಮಾಹಾತ್ಮ್ಯಮಿಹಾತ್ರ ಕೀರ್ತಿತಂ ಮೇ।
ಗುರುರಾಡ್ಗುಣದೋಷವಿನ್ಮಮಾತ್ರ
ಗುಣದೃಕ್ಪರಿಪಾತು ಸಂಸೃತೇರ್ಮಾಂ ॥ ೯೯ ॥

ಶ್ರೀಮಚ್ಚಂದ್ರಶೇಖರಭಾರತೀಗುರುಗಳ ಮತ್ತು ಶ್ರೀಸಚ್ಚಿದಾನಂದ ಶಿವಾಭಿನವನರಸಿಂಹಭಾರತೀಗುರುವರ್ಯರ ಗುರುತರವಾದ ಕಾರುಣ್ಯದ ಬಲದಿಂದ, ಶ್ರೀಗುರುವರ್ಯರ ಆಜ್ಞಾನುಬದ್ಧನಾಗಿ ಶ್ರೀಗುರುಸಾರ್ವಭೌಮರ ಮಹಿಮೆಯನ್ನು ಲೇಶಮಾತ್ರ ಈ ಪ್ರಕಾರವಾಗಿ ಕೀರ್ತಿಸಿದ್ದೇನೆ, ಗುಣ ದೋಷಗಳನ್ನು ಬಲ್ಲ ಶ್ರೀಗುರುವರ್ಯರು, ನನ್ನ ದೋಷಗಳನ್ನು ಎಣಿಸದೆ, ಇರುವ ಅಲ್ಪಗುಣವನ್ನು ಗ್ರಹಿಸಿ, ನನ್ನನ್ನು ಈ ಸಂಸಾರದುಃಖದಿಂದ ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ.

ಮಂಗಳಂ ದೇಶಿಕೇಂದ್ರಾಯ ಚಂದ್ರಮೌಳೀಶ್ವರಾಯಚ।
ರತ್ನಗರ್ಭಗಣೇಶಾಯ ಶಾರದಾಯಾಸ್ತು ಮಂಗಳಂ ॥ ೧೦೦ ॥

ಶ್ರೀಶಾರದಾಚಂದ್ರಮೌಳೀಶ್ವರರತ್ನಗರ್ಭಗಣಪತಿಶ್ರೀಶಂಕರಸದ್ಗುರುಬ್ರಹ್ಮರಿಗೆ ನಿತ್ಯಮಂಗಳವು !

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸದ್ಗುರೂಪದೇಶಃ

ಶ್ರೀಮಚ್ಛಂಕರಭಗವತ್ಪಾದರವರ ಅವತಾರಪುರುಷರಾದ ಶ್ರೀಮತ್ಸಚ್ಚಿದಾನಂದಶಿವಾಭಿನವನೃಸಿಂಹಭಾರತೀಸ್ವಾಮಿಗಳವರು ಶ್ರೀಶೃಂಗಗಿರಿ ಶ್ರೀಶಾರದಾ ಜಗದ್ಗುರುಪೀಠದಲ್ಲಿ ವಿರಾಜಿಸಿ ಲೋಕವಿಖ್ಯಾತರಾಗಿದ್ದಾರೆ. ಈ ಮಹನೀಯರ ಅನೇಕಕೃತಿಗಳಲ್ಲಿ ಉಪದೇಶಚತುರ್ವಿಂಶತಿಯೆಂಬುದು ಒಂದು. ಇದರಲ್ಲಿ ಕಡೆಯ ಎಂಟು ಪದ್ಯಗಳು ಸದ್ಗುರುಗಳ ಲಕ್ಷಣವನ್ನು ತಿಳಿಸುತ್ತವೆ. ಮೊದಲಿನ ಹದಿನಾರು ಪದ್ಯಗಳಲ್ಲಿ ಸದ್ಗುರುಗಳ ಉಪದೇಶವು ನಿರೂಪಿತವಾಗಿದೆ.

ಸದ್ಗುರುಗಳು ತಾವು ಸ್ವತಃ ಕೃತಾರ್ಥರಾಗಿ, ಎಲ್ಲರಿಗೂ ಕ್ಷೇಮವನ್ನು ತಿಳಿದು ಬಯಸುವವರಾಗಿರುತ್ತಾರೆ. ಇಂಥವರ ಉಪದೇಶವು ಎಲ್ಲರಿಗೂ ಅನುಸರಣೀಯವಾಗಿದೆ. ಆದ್ದರಿಂದ ಈ ಉಪದೇಶವನ್ನು ಕನ್ನಡನುಡಿಯಲ್ಲಿ ವಿವರಿಸಿ ಪ್ರಕಟಿಸಿದೆ.

ಶೃಂಗಗಿರಿಯಭಿಜನಃ
ಕವಿಃ ನರಸಿಂಹಶರ್ಮಾ.

ಅದ್ವೈತಾಶ್ರಮಃ ।
5. 'ರಮಾ', ಶ್ರೀಲಕ್ಷ್ಮೀಅಗ್ರಹಾರಃ ।
ಶ್ರೀಕಂಠಪುರೀ, ನಂಜನಗೂಡು.
೧೭-೭-೧೯೮೧

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸದ್ಗುರೂಪದೇಶಃ

ಸದ್ಗುರುಗಳ ಹಿತೋಪದೇಶವು

ಕರಣಂ ಸರ್ವಸಿದ್ಧೀನಾಂ ಚಿತ್ತಾನುಸರಣಂ ಗುರೋಃ ।
ಇತಿ ನಿಶ್ಚಿತ್ಯ ಸರ್ವೇಷು ಕಾರ್ಯೇಷು ಪ್ರವಿಶಾರ್ಭಕ ॥ ೧ ॥

ಅರ್ಭಕ ಮಗುವೇ, **ಸರ್ವಸಿದ್ಧೀನಾಂ** ಎಲ್ಲ ಇಷ್ಟಾರ್ಥಗಳು ಸಿದ್ಧಿಸುವುದಕ್ಕೂ, **ಗುರೋಃ** ಸದ್ಗುರುಗಳ, **ಚಿತ್ತಾನುಸರಣಂ** ಅಭಿಪ್ರಾಯವನ್ನು ಅನುಸರಿಸುವುದು, **ಕರಣಂ** ಮುಖ್ಯವಾದ ಕಾರಣವು- **ಇತಿ** ಎಂದು, **ನಿಶ್ಚಿತ್ಯ** ನಿಶ್ಚಯವಾಗಿ ತಿಳಿದುಕೊಂಡು, **ಸರ್ವೇಷು ಕಾರ್ಯೇಷು** ನಿನ್ನ ಎಲ್ಲ ಕಾರ್ಯಗಳಲ್ಲಿಯೂ, **ಪ್ರವಿಶ** ಪ್ರವೇಶಮಾಡು, ಪ್ರವರ್ತಿಸು.

ಯಾವ ಕಾರ್ಯವನ್ನು ಮಾಡಬೇಕಾದರೂ ಅದರಿಂದ ಎಂಥ ಫಲವು ದೊರೆಯುವುದೆಂಬುದನ್ನು ಮೊದಲು ನಿಶ್ಚಯಿಸಿಕೊಳ್ಳಬೇಕು. ವಿಚಾರ ಮಾಡದೆ ಕೇಡನ್ನು ಉಂಟುಮಾಡುವಂಥ ಕೆಲಸವನ್ನು ಮಾಡಿಬಿಟ್ಟರೆ, ಆ ಮೇಲೆ ಅದರ ಕೆಟ್ಟ ಫಲವನ್ನು ತಪ್ಪಿಸಿಕೊಳ್ಳಲಾಗದೆ ಹೋಗುವುದು. ಕರ್ಮಗಳ ಫಲವನ್ನು ದೂರದೃಷ್ಟಿಯಿಂದಲೇ ತಿಳಿಯಲಾಗುವುದು. ಆತ್ಮನು ನಿತ್ಯನಾದ್ದರಿಂದಲೂ, ಇವನಿಗೆ ಮುಂದಿನ ಜನ್ಮಗಳು ಇರುವುದರಿಂದಲೂ, ಈಗ ಮಾಡುವ ಕರ್ಮಗಳೇ ಮುಂದಕ್ಕೆ ಫಲಿಸುವುದರಿಂದಲೂ, ಮುಂದೆ ಎಂದೂ ಕೇಡು ಸಂಭವಿಸದೆ ಒಳ್ಳೆಯದೇ ಆಗುವಂತೆ ಈಗ ನಡೆದುಕೊಳ್ಳುವುದು ಅವಶ್ಯವು. ಇದನ್ನು ಸದ್ಗುರುಗಳೇ ಬಲ್ಲವರಾದ್ದರಿಂದ ಅವರ ಹಿತೋಪದೇಶವನ್ನು ಅನುಸರಿಸುವುದು ಕ್ಷೇಮಕರವು.

ಸುತೇಷು ಕರುಣಾ ಯದ್ವತ್ ಪ್ರಸವಿತ್ರ್ಯಾಃ ತತೋಽಪಿ ಚ ।
ಪ್ರಭೂತಾ ಕರುಣಾ ಶಿಷ್ಯೇ ಸದ್ಗುರೋರಿತಿ ನಿಶ್ಚಿನು ॥ ೨ ॥

ಪ್ರಸವಿತ್ರ್ಯಾಃ ಹೆತ್ತ ತಾಯಿಗೆ, **ಸುತೇಷು** ತನ್ನ ಮಕ್ಕಳಲ್ಲಿ, **ಕರುಣಾ** ನಿಜವಾದ ವಾತ್ಸಲ್ಯವು, **ಯದ್ವತ್** ಎಷ್ಟರಮಟ್ಟಿಗೆ ಇರುವುದೋ,

Sri Vidyabharathi Book Centre, Sringeri

CC-O. In Public Domain. Digitized by eGangotri
ಸದ್ಗುರೋಃ ಸದ್ಗುರುಗಳಿಗೆ, **ಶಿಷ್ಯೇ** ಶಿಷ್ಯನಲ್ಲಿ, **ತತಃ ಅಪಿ** ಅದಕ್ಕಿಂತಲೂ, **ಪ್ರಭೂತಾ ಕರುಣಾ** ಹೆಚ್ಚು ದಯೆಯು, **ಇತಿ** ಇರುವುದೆಂದು, **ನಿಶ್ಚಿನು** ನಿಶ್ಚಿತವಾಗಿ ತಿಳಿದುಕೋ.

ಮಗುವಿನ ಕ್ಷೇಮಕ್ಕಾಗಿ ತನ್ನ ಹಿತವನ್ನೂ ಕಡೆಗಾಣುವ ಹೆತ್ತತಾಯಿಗೆ ಮಗುವಿನಲ್ಲಿ ತನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಯಿರುವುದು ಪ್ರಸಿದ್ಧವು. 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ |'—'ಕೆಟ್ಟ ಮಗನು ಹುಟ್ಟಬಹುದು, ಆದರೆ ಕೆಟ್ಟ ತಾಯಿಯು ಎಲ್ಲಿಯೂ ಇರುವುದಿಲ್ಲ'— ಎಂದು ಶ್ರೀಮಚ್ಛಂಕರಭಗವತ್ಪಾದರು ಅಪ್ಪಣೆಕೊಟ್ಟಿದ್ದಾರೆ. ತನ್ನನ್ನು ನಂಬಿರುವ ಶಿಷ್ಯನ ಮೇಲೆ ಸದ್ಗುರುಗಳಿಗೆ ಅದಕ್ಕಿಂತಲೂ ಅಧಿಕಪ್ರೀತಿಯೇ ಇರುತ್ತದೆ.

ತಾಯಿಗೆ ತನ್ನ ಮಗುವಿನ ಮೇಲೆ ವಿಶೇಷಪ್ರೀತಿಯಿರುವುದಾದರೂ, ಅದಕ್ಕೆ ವಾಸ್ತವವಾಗಿ ಹಿತಕರವಾದುದು ಯಾವುದೆಂಬುದನ್ನು ಆಕೆಯು ತಿಳಿದಿರುವುದಿಲ್ಲ. ಆದಕಾರಣ ತಾತ್ಕಾಲಿಕವಾಗಿ ಅದಕ್ಕೆ ಅನುಕೂಲವೆಂದು ತನಗೆ ತಿಳಿದುಬರುವುದನ್ನು ಮಾಡುವಳು. ಆದ್ದರಿಂದ ಮುಂದೆ ಅದಕ್ಕೆ ಕೇಡು ಸಂಭವಿಸುವುದಿಲ್ಲವೆಂಬ ನಿಶ್ಚಯವೇನೂ ಇರುವುದಿಲ್ಲ. ಶಿಷ್ಯನಿಗೆ ಮುಂದೆ ಸಂಭವಿಸುವ ಕೇಡುಗಳನ್ನು ಸದ್ಗುರುಗಳು ತಿಳಿದಿರುವುದರಿಂದಲೂ, ಶಿಷ್ಯನಿಂದ ಅವರಿಗೆ ಆಗಬೇಕಾದ ಪ್ರಯೋಜನವು ಏನೂ ಇಲ್ಲದುದರಿಂದಲೂ, ತನ್ನನ್ನೇ ಶರಣುಬಂದಿರುವ ಶಿಷ್ಯನಿಗೆ ವಾಸ್ತವವಾಗಿಯೂ ಹಿತಕರವಾದುದನ್ನೇ ಉಪದೇಶಿಸುತ್ತಾರೆ. ಇದು ಒಂದುವೇಳೆ, ರೋಗಿಗೆ ಔಷಧಿಯಂತೆ, ತಾತ್ಕಾಲಿಕವಾಗಿ ಅಹಿತವೆಂದು ಕಂಡುಬರುವಂತಿದ್ದರೂ, ಮುಂದಿನ ಹಿತದ ದೃಷ್ಟಿಯಿಂದ ಅದನ್ನೇ ಅನುಸರಿಸಬೇಕು.

ಮಾತಾಪಿತರಾವಸ್ಮಿನ್ ಜನ್ಮನ್ಯೇವಾರ್ಭಕಸ್ಯ ಸುಖವೃದ್ಧಿಂ |
ಇಚ್ಛತ ಆಗಾಮಿಜನುಃಸೌಖ್ಯಂ ಸ್ಮರತೋ ನಜಾತ್ವಪಿ ಹಿ ||೩||

ಮಾತಾಪಿತರೌ ತಾಯಿತಂದೆಗಳು, **ಅರ್ಭಕಸ್ಯ** ತಮ್ಮ ಮಗುವಿನ, **ಅಸ್ಮಿನ್ ಜನ್ಮನಿ ಏವ** ಈಗಿನ ಜನ್ಮದಲ್ಲಿ ಮಾತ್ರವೇ, **ಸುಖವೃದ್ಧಿಂ** ಹೆಚ್ಚು ಸುಖವನ್ನು, **ಇಚ್ಛತಃ** ಹಾರೈಸುತ್ತಾರೆ. ಆದರೆ, **ಆಗಾಮಿಜನುಃಸೌಖ್ಯಂ**

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂದಿನ ಜನ್ಮಗಳ ಸುಖವನ್ನು, **ಜಾತು ಅಪಿ ಸ್ವಲ್ಪವೂ, ನ ಸ್ಮರತಃ** ಸ್ಮರಿಸುವುದೂ ಇಲ್ಲ; ಹಿ ಅಲ್ಲವೆ !

ತಾಯಿತಂದೆಗಳಿಗೆ ತಮಗೂ ತಮ್ಮ ಮಕ್ಕಳಿಗೂ ಮುಂದೆ ಜನ್ಮಾಂತರಗಳು ಇರುವುವೆಂಬ ತಿಳಿವೇ ಇರುವುದಿಲ್ಲ. ಒಂದು ವೇಳೆ ಇದನ್ನು ಅವರು ಸಾಮಾನ್ಯವಾಗಿ ತಿಳಿದಿದ್ದರೂ, ಅಲ್ಲಿನ ಸ್ಥಿತಿಗತಿಗಳ ಪರಿಚಯವಿಲ್ಲದ್ದರಿಂದ, ಮುಂದಿನ ಕ್ಷೇಮಕ್ಕಾಗಿ ಈಗ ಹೇಗೆ ನಡೆದುಕೊಳ್ಳಬೇಕೆಂಬ ಪರಿಜ್ಞಾನವು ಅವರಿಗೆ ಇರುವುದಿಲ್ಲ. ಆದ್ದರಿಂದ ತಮ್ಮ ಮಕ್ಕಳು ಈ ಜೀವಿತದಲ್ಲಿ ಧನಧಾನ್ಯಾದಿಸಂಪತ್ತುಗಳಿಂದ ಸುಖವಾಗಿ ಮೆರೆಯಲಿ—ಎಂದು ಇಷ್ಟನ್ನು ಮಾತ್ರವೇ ಇವರು ಆಸೆಪಡುತ್ತಾರೆಯೇ ಹೊರತು, ಮುಂದಿನ ಜನ್ಮಗಳ ಕ್ಷೇಮವನ್ನು ಸ್ವಲ್ಪವೂ ಚಿಂತಿಸುವುದಿಲ್ಲ.

ಶಿಷ್ಯಸ್ಯ ಸದ್ಗುರುಃ ಖಲು ಸಂಚಿತಮುಖಪಾಪಸಂಗರಾಹಿತ್ಯಂ ।
ಕಿಂಚಾವೃತ್ತಿವಿಹೀನಂ ಬ್ರಹ್ಮಪದಂ ಕಾಂಕ್ಷತೇ ಕೃಪಯಾ ॥ ೪ ॥

ಸದ್ಗುರುಃ ಸದ್ಗುರುಗಳು, **ಶಿಷ್ಯಸ್ಯ** ಶಿಷ್ಯನಿಗೆ, **ಸಂಚಿತಮುಖಪಾಪಸಂಗರಾಹಿತ್ಯಂ** ಸಂಚಿತವೊದಲಾದ ಪಾಪಗಳ ಸಂಬಂಧವಾಗದಿರುವಿಕೆಯನ್ನೂ, **ಕಿಂ ಚ** ಮತ್ತೂ, **ಆವೃತ್ತಿವಿಹೀನಂ** ಜನ್ಮಾಂತರಗಳು ಉಂಟಾಗದಂಥ, **ಬ್ರಹ್ಮಪದಂ** ಮುಕ್ತಿಯನ್ನೂ ಸಹ, **ಕೃಪಯಾ** ಕೇವಲ ದಯೆಯಿಂದಲೇ, **ಕಾಂಕ್ಷತೇ** ಇಚ್ಛಿಸುತ್ತಾರೆ; **ಖಲು** ಇದು ಪ್ರಸಿದ್ಧವು.

ಯಾವ ಕೆಲಸವನ್ನೂ ಮಾಡದೆ ಕ್ಷಣಮಾತ್ರವೂ ಇರುವುದು ಯಾರಿಗೂ ಸಾಧ್ಯವಿಲ್ಲ. ಮಾಡುವುದೆಲ್ಲ ಪುಣ್ಯವೋ ಪಾಪವೋ ಆಗುತ್ತದೆ. ಪುಣ್ಯವು ಸುಖಕ್ಕೂ ಪಾಪವು ದುಃಖಕ್ಕೂ ಕಾರಣವು. ಮಾಡಿದ ಕರ್ಮಗಳ ಫಲಗಳನ್ನು ಅನುಭವಿಸದೇ ತೀರದು. ಈ ಫಲಗಳ ಅನುಭವಕ್ಕಾಗಿ ಅದಕ್ಕೆ ತಕ್ಕ ಅನೇಕಜನ್ಮಾಂತರಗಳನ್ನು ಮತ್ತೆ ಮತ್ತೆ ಎತ್ತುತ್ತಿರಬೇಕಾಗುವುದು. ಇದೇ ಸಂಸ್ಕಾರವು.

ನಿತ್ಯನಾದ ಆತ್ಮನು ಅನಾದಿಕಾಲದಿಂದ ಲೆಕ್ಕವಿಲ್ಲದ ಜನ್ಮಗಳ ಹಲವಾರುವಿಧಗಳಾದ ಪುಣ್ಯಪಾಪಗಳನ್ನು ಕೂಡಿಹಾಕಿಕೊಂಡು ಬಂದಿರುವಲ್ಲಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದೊಂದು ಜನ್ಮದಲ್ಲಿ ಒಂದು ವಿಧಗಳಾದ ಕೆಲವುಕರ್ಮಗಳ ಫಲಗಳು ಮಾತ್ರವೇ ಅನುಭವಕ್ಕೆ ಬರುವುದರಿಂದ, ಇತರ ಕರ್ಮಗಳು ಅವುಗಳಿಗೆ ತಕ್ಕ ಜನ್ಮಗಳನ್ನು ಕಾಯುತ್ತ ಇರುತ್ತವೆ; ಇವೇ ಸಂಚಿತಕರ್ಮಗಳು. ಈಗಿನ ಜನ್ಮದಲ್ಲಿ ಫಲವನ್ನು ಕೊಡುವುದಕ್ಕೆ ಆರಂಭವಾಗಿರುವ ಕರ್ಮಗಳು ಪ್ರಾರಬ್ಧ ಕರ್ಮಗಳು. ಸಂಚಿತಕರ್ಮಗಳೊಡನೆ ಸೇರಿಕೊಂಡು ಮುಂದಿನ ಜನ್ಮಗಳಲ್ಲಿ ಫಲವನ್ನು ಕೊಡುವಂಥ ಈಗಿನ ಜನ್ಮದಲ್ಲಿ ಮಾಡುವ ಕರ್ಮಗಳು ಆಗಾಮಿ ಕರ್ಮಗಳು. ಮೂರು ವಿಧಗಳಾದ ಈ ಕರ್ಮಗಳು ಯಾವುವೂ ಇಲ್ಲವಾದರೆ, ಆಗ ಮುಂದೆ ಜನ್ಮಾಂತರಗಳಿಗೆ ಕಾರಣವಿಲ್ಲವಾಗಿ, ಸಂಸಾರವಿಮುಕ್ತನಾಗಿ, ನಿತ್ಯಾನಂದಸ್ವರೂಪವಾದ ಬ್ರಹ್ಮನಾಗಿ ಧನ್ಯನಾಗುತ್ತಾನೆ. ಸದ್ಗುರುಗಳು ಶಿಷ್ಯನಿಗೆ ಇಂಥ ಪರಮಫಲವನ್ನು ಆಶಿಸುತ್ತಾರೆ.

ಲೌಕಿಕರಾದ ತಾಯಿತಂದೆಗಳು, ಈ ಮುಂದಿನ ಶ್ರೇಯಃಸನ್ನು ತಿಳಿಯದೆ, ಪುಣ್ಯಪಾಪಗಳ ಪರಿಜ್ಞಾನವಿಲ್ಲದವರಾಗಿ, ತಮ್ಮ ಮಕ್ಕಳು ಈಗ ಸುಖವಾಗಿರುವುದಕ್ಕೆ, ಹೇಗೋ ಸಂಪದ್ಭರಿತರಾಗಿರಲಿ—ಎಂದು ಇಷ್ಟು ಮಾತ್ರವನ್ನೇ ಇಚ್ಛಿಸುತ್ತಾರೆ. ವಿಚಾರಮಾಡದೆ ಶಾಸ್ತ್ರದ ವಿಧಿನಿಷೇಧಗಳಿಗೆ ವಿರುದ್ಧವಾಗಿ ನಡೆದರೆ—'ಹಸದ್ಭಿರ್ಯತ್ಕೃತಂ ಕರ್ಮ ರುದದ್ಭಿರನುಭೂಯತೇ |'—'ಈಗ ನಗುತ್ತ ಮಾಡುವ ಅಕಾರ್ಯದ ಫಲವನ್ನು ಮುಂದೆ ಅಳುತ್ತ ಅನುಭವಿಸುವನು'—ಎಂಬ ಗಾದೆಯಾಗುವುದು.

ಸೌಖ್ಯಂ ಚ ತದಪಿ ಸಂಶೃಣು ಯತ್ಪಿತರಾವಿಚ್ಛತಸ್ತನೂಜಸ್ಯ |
ಭಾರ್ಯಾಂ ಬಿಭರ್ತು ತನಯಾನ್ ಪ್ರಾಪ್ನೋತು ತನೋತು ಸತತತದ್ರಕ್ಷಾಂ ||೫||

ಪಿತರೌ ತಾಯಿತಂದೆಗಳು, **ತನೂಜಸ್ಯ** ಮಗನಿಗೆ, **ಯತ್ ಸೌಖ್ಯಂ** ಎಂಥ ಸುಖವನ್ನು, **ಇಚ್ಛತಃ** ಹಾರೈಸುತ್ತಾರೋ, **ತತ್ ಅಪಿ** ಅದನ್ನೂ, **ಸಂಶೃಣು** ಚೆನ್ನಾಗಿ ಕೇಳು, ಕೇಳಿತಿಳಿದುಕೋ. **ಭಾರ್ಯಾಂ ಬಿಭರ್ತು** ಹೆಂಡತಿಯನ್ನು ಮದುವೆಯಾಗಲಿ; **ತನಯಾನ್** ಮಕ್ಕಳನ್ನು, **ಪ್ರಾಪ್ನೋತು** ಪಡೆಯಲಿ; ಮತ್ತು **ಸತತತದ್ರಕ್ಷಾಂ** ಯಾವಾಗಲೂ ಅವರ ರಕ್ಷಣೆಯನ್ನು **ತನೋತು** ಮಾಡುತ್ತಿರಲಿ;

Sri Vidyabharathi Book Centre, Sringeri

CC-O. In Public Domain. Digitized by eGangotri

ಆರ್ಜಯತು ಚ ಧನಮನಿಶಂ ಯುಯಾಕಯಾಚಿತ್ಪ್ರಣಾಲ್ಯಾಯಂ।
ಅಪಿ ನೌ ಜೀರ್ಣವಯಸ್ಕೌ ಪಾತು ಚ ಮೋದೇನ
ಸರ್ವವಿಷಯೇಷು ॥ ೬ ॥

ಜೀರ್ಣವಯಸ್ಕೌ ವೃದ್ಧರಾದ, **ನೌ ಅಪಿ** ನಮ್ಮನ್ನೂ ಸಹ, **ಸರ್ವವಿಷಯೇಷು** ನಮಗೆ ಬೇಕಾಗುವ ಎಲ್ಲ ವಿಷಯಗಳನ್ನೂ ಒದಗಿಸಿ ಕೊಡುತ್ತ, **ಮೋದೇನ** ಸಂತೋಷದಿಂದ. **ಪಾತು** ಕಾಪಾಡಲಿ. ಇದಕ್ಕಾಗಿ, **ಅಯಂ** ಇವನು, **ಯುಯಾಕಯಾಚಿತ್ ಪ್ರಣಾಲ್ಯಾ** ಪುಣ್ಯಪಾಪಗಳನ್ನು ಎಣಿಸದೆ ಯಾವರೀತಿಯಿಂದಲಾದರೂ ಸರಿಯೇ, **ಅನಿಶಂ** ಯಾವಾಗಲೂ, **ಧನಂ** ಹಣವನ್ನು, **ಆರ್ಜಯತು** ಸಂಪಾದಿಸುತ್ತಿರಲಿ;

ರಾಜ್ಞಾಂ ವಾ ಧನಿಕಾನಾಂ ಮನೋಽನುವೃತ್ತಿಂ ವಿಧಾಯ
ತನುಜಾತಃ।
ಅಭ್ಯಧಿಕಂ ತತ್ತೋಷಂ ಪ್ರಾಪ್ನೋತು ಚ ತೇನ ಬಹುಲಧನಂ ॥೭॥

ತನುಜಾತಃ ಮಗನು, **ರಾಜ್ಞಾಂ** ರಾಜರುಗಳ, **ವಾ** ಅಥವಾ, **ಧನಿಕಾನಾಂ** ಇತರ ಹಣವಂತರ, **ಮನೋಽನುವೃತ್ತಿಂ** ಮನಸ್ಸಿನ ಅನುಸರಣೆಯನ್ನು, **ಅಭ್ಯಧಿಕಂ** ವಿಶೇಷವಾಗಿ, **ವಿಧಾಯ** ಮಾಡಿ, **ತತ್ತೋಷಂ** ಅವರ ಪ್ರೀತಿಯನ್ನು, **ಅಭ್ಯಧಿಕಂ** ಹೆಚ್ಚಾಗಿ, **ಪ್ರಾಪ್ನೋತು** ಪಡೆಯಲಿ; **ಚ** ಮತ್ತು, **ತೇನ** ಅದರಿಂದ, **ಬಹುಲಧನಂ** ಹೆಚ್ಚು ಹಣವನ್ನು, **ಪ್ರಾಪ್ನೋತು** ಸಂಪಾದಿಸಲಿ;

"ಹೆಂಡತಿ-ಮಕ್ಕಳ ಮತ್ತು ವೃದ್ಧರಾದ ತಮ್ಮ ಈಗಿನ ಸುಖಕ್ಕೆ ಬೇಕಾದ ಒಡವೆ ವಸ್ತುಗಳನ್ನು ಒದಗಿಸುವುದಕ್ಕಾಗಿ, ತನ್ನದಾಗಲೀ ಇತರ ಹಣವಂತರದ್ದಾಗಲಿ ಜಾತಿಕುಲಗೋತ್ರಗಳನ್ನೆಣಿಸದೆ, ನೀಚಸೇವೆಯಿಂದಲಾದರೂ— ಮುಖ್ಯವಾಗಿ ಹೆಚ್ಚು ಹಣವನ್ನು ಸಂಪಾದಿಸಿದರೆ ಸರಿ"—ಇಷ್ಟನ್ನೇ ಅವರು ಅಪೇಕ್ಷಿಸುತ್ತಾರೆ!

ಇತಿ ಬಹುಲದುಃಖಮೇವ ಹಿ ಸೌಖ್ಯಾಭಾಸಂ ತನೂಜಸ್ಯ।
ಪಿತರೌ ಲೋಕೇ ರಾತ್ರಿಂದಿವಮೇವಂ ಚಿಂತಯಂತೌ ಸ್ತಃ ॥ ೮ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕೇ ಲೋಕದಲ್ಲಿ, **ಪಿತರೌ** ತಾಯಿತಂದೆಗಳು, **ತನೂಜಸ್ಯ** ಮಗನಿಗೆ, **ಇತಿ** ಇದೇಪ್ರಕಾರದ, **ಸೌಖ್ಯಾಭಾಸಂ** ಸುಖದಂತೆ ಕಾಣುಬರುವ, **ದುಃಖಂ ಏವ** ವಸ್ತುತಃ ದುಃಖವನ್ನೇ, **ರಾತ್ರಿಂದಿವಂ** ಹಗಲೂ ರಾತ್ರಿಯೂ ಸಹ, **ಚಿಂತಯಂತೌ ಸ್ತಃ** ಉಂಟಾಗಲೆಂದು ಯೋಚಿಸುತ್ತಿರುತ್ತಾರೆ.

ಸುಖಕ್ಕಾಗಿ ಪ್ರಯತ್ನಪಡುವುದು ಉಚಿತವು; ಹೆಚ್ಚಿನ ಸುಖಕ್ಕಾಗಿ ಸ್ವಲ್ಪ ಕಷ್ಟವನ್ನು ಸಹಿಸುವುದೂ ಯುಕ್ತವಾದೀತು. ಮುಂದೆ ಬಹುತರವಾದ ಕಷ್ಟಕ್ಕೆ ಕಾರಣವಾಗುವಂತೆ, ಈಗ ಸುಖಾಭಾಸಕ್ಕಾಗಿ, ಅಕಾರ್ಯಗಳನ್ನು ಮಾಡುವುದು ವಿವೇಕತನವೆನಿಸದು.

ಎಷ್ಟು ಪ್ರೀತಿಪಾತ್ರರಾಗಿದರೂ ಇತರರಿಗಿಂತಲೂ ತನ್ನ ಸುಖವೇ ಪ್ರತಿಯೊಬ್ಬರಿಗೂ ಹೆಚ್ಚಿನದು. ಲೌಕಿಕರಾದ ತಾಯಿತಂದೆಗಳಿಗೆ ತಮ್ಮ ಮುಂದಿನ ಸುಖದ ಪರಿಜ್ಞಾನವೂ ಸಹ ಇರುವುದಿಲ್ಲ. ಸದಾಚಾರಸಂಪನ್ನರಾದ ಮಕ್ಕಳು ಮಾಡುವ ಉತ್ತರಕ್ರಿಯೆಗಳಿಂದಲೇ ತಾಯಿತಂದೆಗಳಿಗೆ ಮುಂದೆ ಸದ್ಗತಿಯಾಗುತ್ತದೆ. 'ಅನುಶಿಷ್ಟಂ ಪುತ್ರಂ ಲೋಕ್ಯಮಾಹುಃ'—'ಶಾಸ್ತ್ರೀಯಧರ್ಮದಲ್ಲಿ ಶಿಕ್ಷಣಕೊಡಲ್ಪಟ್ಟು ಧಾರ್ಮಿಕನಾಗಿರುವ ಪುತ್ರನು ಪರಲೋಕದಲ್ಲಿ ಹಿತಕರನಾಗುವನು'-ಎಂದು ಶ್ರುತಿಯು ಇದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಇದನ್ನು ಅರಿಯದ ಲೌಕಿಕತಾಯಿತಂದೆಗಳಿಗೆ ತಮ್ಮ ಹಿತದ ಪ್ರರಿಜ್ಞಾನವೇ ಇಲ್ಲದ ಮೇಲೆ, ಇನ್ನು ಮಕ್ಕಳ ಹಿತವು ತಿಳಿದಿರುತ್ತದೆಯೇ? 'ಕೋಽರ್ಥಃ ಪುತ್ರೇಣ ಜಾತೇನ ಯೋ ನ ವಿದ್ವಾನ್ನ ಧಾರ್ಮಿಕಃ! ಕಿಂ ತಯಾ ಕ್ರಿಯತೇ ಧೇನ್ವಾ ಯಾ ನ ದೋಗ್ಧ್ರೀ ನ ಗರ್ಭಿಣೀ||' ಶಾಸ್ತ್ರವಿದ್ಯಾವಂತನೂ ಧರ್ಮನಿರತನೂ ಆಗದ ಪುತ್ರನಿಂದ ಯಾವ ಪ್ರಯೋಜನವೂ ಆಗುವುದಿಲ್ಲ; ಹಾಲನ್ನೂ ಕರೆಯದೆ, ಗರ್ಭಿಣಿಯೂ ಆಗದ ಹಸುವನ್ನು ಕಟ್ಟಿಕೊಂಡರೆ, ಅದನ್ನು ಸಾಕುವ ಭಾರವೊಂದೇ ಫಲವು!,

ಮಾ ಸಜ್ಜತು ಮುಚ್ಛಿಷ್ಯೋ ಧನದಾರಾಸ್ನಿಗ್ಧಪುತ್ರಗೇಹೇಷು।
ತದ್ರಕ್ಷಣಾರ್ಥಮರ್ಥಗ್ರಹಣೇ ಯತ್ನಂ ನ ಕಿಂಚಿದಪಿ
ಕುರ್ಯಾತ್ ॥೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಚ್ಛಿಷ್ಯಃ ನನ್ನ ಶಿಷ್ಯನು, **ಧನದಾರಾಸ್ನಿಗ್ಧಪುತ್ರಗೇಹೇಷು** ಹಣ, ಹೆಂಡತಿ, ಮಕ್ಕಳು, ಮನೆ—ಮುಂತಾದ ಪ್ರೀತಿಗೆ ಆಸ್ಪದಗಳಾದ ವಿಷಯಗಳಲ್ಲಿ, **ಮಾ ಸಜ್ಜತು** ಹೆಚ್ಚು ಅಭಿಮಾನವುಳ್ಳವನು ಆಗದಿರಲಿ. **ತದ್ರಕ್ಷಣಾರ್ಥಂ** ಅವರನ್ನು ತೃಪ್ತಿಪಡಿಸುವುದಕ್ಕೆಂದು, **ಅರ್ಥಗ್ರಹಣೇ** ಧನವನ್ನು ಸಂಪಾದಿಸುವುದಕ್ಕಾಗಿ, **ಕಿಂಚಿತ್ ಯತ್ನಂ ಅಪಿ** ಏನೊಂದು ಯತ್ನವನ್ನೂ, **ನ ಕುರ್ಯಾತ್** ಮಾಡುವುದು ಬೇಡ.

ವ್ಯವಹಾರನಿರ್ವಾಹಕ್ಕಾಗಿ ಪತ್ನೀಪುತ್ರಾದಿಗಳ ರಕ್ಷಣೆಯನ್ನು ಮಾಡುವುದು ಅವಶ್ಯವು; ಆದರೆ ಇದೇ ಮುಖ್ಯವಾದದ್ದಲ್ಲ. ಇಹಪರಗಳ ಶ್ರೆಯೋಽಭ್ಯುದಯಗಳನ್ನು ಸಾಧಿಸಿಕೊಳ್ಳುವುದು ಪ್ರತಿಯೊಬ್ಬರಿಗೂ ಅಗತ್ಯವು. ಇದಕ್ಕಾಗಿ ಅಧರ್ಮಕ್ಕೆ ಅವಕಾಶಕೊಡದಂತೆ ಇದ್ದು. ಸ್ವಧರ್ಮನಿರತನಾಗಿರಬೇಕು. ಇದಕ್ಕೆ ವಿರೋಧವಾಗದಂತೆ ವ್ಯವಹಾರವನ್ನು ಏರ್ಪಡಿಸಿಕೊಳ್ಳತಕ್ಕದ್ದು. "ಯಲ್ಲಭಸೇ ನಿಜಕರ್ಮೋಪಾತ್ತಂ ವಿತ್ತಂ ತೇನ ವಿನೋದಯ ಚಿತ್ತಂ" !– ಎಂದು ಶ್ರೀಶಂಕರಭಗವತ್ಪಾದರವರು ಉಪದೇಶಿಸಿರುವಂತೆ–ಆಸೆಗೆ ಪಾರವಿಲ್ಲ; ಕರ್ಮಾನುಸಾರವಾಗಿ ಲಭಿಸುವ ಹಣದಿಂದ, ಯಥೋಚಿತವಾಗಿ ವ್ಯವಹಾರವನ್ನು ನಡೆಯಿಸಿಕೊಳ್ಳುತ್ತ, ಯಥಾಶಕ್ತಿಯಾಗಿ ಸ್ವಧರ್ಮಪರನಾಗಿರಬೇಕು. ಇದಕ್ಕಿಂತಲೂ ಹೆಚ್ಚು ಆಸೆಪಟ್ಟರೆ, ಅಧರ್ಮಕ್ಕೆ ಗುರಿಯಾಗಿ, ಮುಂದೆ ವಿಶೇಷವಾದ ಅನರ್ಥಕ್ಕೆ ಭಾಗಿಯಾಗುವನು.

ಮಾ ಕುರುತಾದ್ದಶನಾನಾಂ ವಿವೃತಿಂ ಧನಿಕಾಗ್ರತಃ ಕದಾಚಿದಪಿ |
ಮಾ ಭೂಪತೋಷಣಾರ್ಥಂ ಸ್ತುತಿಮಪಿ ವಿತನೋತು
ದೀನವಾಕ್ಸರಣಿಂ ॥ ೧೦ ॥

ಧನಿಕಾಗ್ರತಃ ಹಣವಂತರ ಎದುರಿನಲ್ಲಿ, **ದಶನಾನಾಂ ವಿವೃತಿಂ** ಹಲ್ಲು ಕಿರಿಯುವುದನ್ನು, **ಕದಾಚಿದಪಿ** ಎಂದೂ, **ಮಾಕುರುತಾತ್** ಮಾಡುವುದು ಬೇಡ; **ಭೂಪತೋಷಣಾರ್ಥಂ** ರಾಜರಸಂತೋಷಕ್ಕೆಂದು, **ದೀನವಾಕ್ಸರಣಿಂ** ದೀನವಾದ ಮಾತುಗಳಿಂದ, **ಸ್ತುತಿಂ ಅಪಿ** ಅವರನ್ನು ಹೊಗಳುವುದನ್ನೂ, **ಮಾ ವಿತನೋತು** ಮಾಡುವುದು ಬೇಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಂಸಾಸೃಜ್ಮಲರಾಶೌ ದೇಹೇऽಹಂತಾ ಕದಾಪಿ ಮಾ ಭವತು।
ನಶ್ವರತಮೇಷು ಜಾತ್ವಪಿ ಭೋಗೇಷ್ವಾಸ್ಥಾಲವೋऽಪಿ
ಮಾಭೂಯಾತ್ ॥ ೧೧ ॥

ಮಾಂಸಾಸೃಜ್ಮಲರಾಶೌ ಮಾಂಸ, ರಕ್ತ, ಮೂಳೆ-ಮುಂತಾದ ಕಶ್ಮಲವಸ್ತುಗಳ ರಾಶಿಯಾಗಿರುವ, **ದೇಹೇ** ತನ್ನ ದೇಹದಲ್ಲಿ, **ಅಹಂತಾ** ನಾನು-ಎಂಬ ತಿಳಿವಳಿಕೆಯು, **ಕದಾ ಅಪಿ** ಎಂದೂ, **ಮಾ ಭವತು** ಆಗದಿರಲಿ; **ನಶ್ವರತಮೇಷು ಭೋಗೇಷು** ಅತ್ಯಂತಕ್ಷಣಿಕಗಳಾಗಿರುವ ಪ್ರಾಪಂಚಿಕಸುಖಗಳಲ್ಲಿ, **ಆಸ್ಥಾಲವಃ ಅಪಿ** ಲೇಶಮಾತ್ರವೂ ಆಸಕ್ತಿಯು, **ಜಾತು ಅಪಿ** ಎಂದೂ, **ಮಾ ಭೂಯಾತ್** ಆಗದೆ ಇರಲಿ.

ಮಾ ಸಾರ್ವಭೌಮಪದವೀಂ ವಾಂಛತು ಮಾ ದೇವರಾಜತಾಂ
ಕ್ವಾಪಿ।
ಶಮದಾಂತ್ಯುಪರತಿಮುಖಷಟ್‌ಸಂಪದಮಾಪ್ನೋತು ಸುಸ್ಥಿರಾಂ
ಶೀಘ್ರಂ ॥ ೧೨ ॥

ಸಾರ್ವಭೌಮಪದವೀಂ ಈ ಲೋಕದ ಚಕ್ರವರ್ತಿಯ ಪದವಿಯನ್ನಾಗಲಿ, **ದೇವರಾಜತಾಂ** ಸ್ವರ್ಗದ ದೇವೇಂದ್ರಪದವಿಯನ್ನಾಗಲಿ **ಕ್ವ ಅಪಿ** ಎಲ್ಲಿಯೂ, ಯಾವಾಗಲೂ, **ಮಾ ವಾಂಛತು** ಬಯಸದೆ ಇರಲಿ. **ಶಮದಾಂತ್ಯುಪರತಿಮುಖಷಟ್ಸಂಪದಂ** ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ ಮತ್ತು ಸಮಾಧಾನಗಳೆಂಬ ಈ ಆರರ, **ಸುಸ್ಥಿರಾಂ ಸಂಪದಂ** ದೃಢವಾದ ಸಂಪತ್ತನ್ನು, **ಶೀಘ್ರಂ** ಬೇಗನೆ, **ಆಪ್ನೋತು** ಪಡೆಯಲಿ.

ಕರ್ಮಾನುಸಾರವಾಗಿ ಪರಮೇಶ್ವರನು ಅನುಗ್ರಹಿಸಿರುವ ಲೌಕಿಕ ಧನಾದಿ ಸಂಪತ್ತುಗಳಿಂದ ಶಾಸ್ತ್ರವಿರೋಧವಾಗದಂತೆ ಯಥೋಚಿತವಾಗಿ ವ್ಯವಹಾರವನ್ನು ನಡೆಯಿಸಿಕೊಂಡು, ದುಃಖಮಯವೂ ನಶ್ವರವೂ ಆಗಿರುವ ಸಾಂಸಾರಿಕಭೋಗಗಳಲ್ಲಿ ಆಸಕ್ತನಾಗದೆ, ಹೇಯವಾದ ದೇಹದಲ್ಲಿ ಅಭಿಮಾನವನ್ನು ಬಿಟ್ಟು, ಲೌಕಿಕಸಂಪತ್ತುಗಳನ್ನೂ ದೇಹೇಂದ್ರಿಯಾದಿಗಳನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹ ನಿಷ್ಕಾಮಸ್ವಧರ್ಮಾನುಷ್ಠಾನಕ್ಕೆ ಉಪಯೋಗಿಸಿಕೊಳ್ಳಬೇಕು. ಇದರಿಂದ ಚಿತ್ತಶುದ್ಧಿಯು ಉಂಟಾಗಿ, ಶಮಾದಿಷಟ್ಕಸಂಪತ್ತಿಯು ಲಭಿಸುತ್ತದೆ.

ನಿತ್ಯಾನಿತ್ಯವಿವೇಕಂ ಮೋಕ್ಷಸ್ಪ್ರಾಸಾದಗಮನನಿಃಶ್ರೇಣಿಂ ।
ದೃಢತರಮುಮುಕ್ಷುತಾಮಪ್ಯಾಶ್ರಯತಾತ್ಸತ್ವರಂ ಸುಖೇನೈವ
॥ ೧೩ ॥

ಮೋಕ್ಷಪ್ರಾಸಾದಗಮನನಿಃಶ್ರೇಣಿಂ ಮೋಕ್ಷವೆಂಬ ಮಹಡಿಯನ್ನು ಹತ್ತಿಹೋಗಲು ಮೆಟ್ಟಲಾಗಿರುವ, **ನಿತ್ಯಾನಿತ್ಯವಿವೇಕಂ** ನಿತ್ಯವಾದುದು ಯಾವುದು, ಅನಿತ್ಯವಾದುದು ಯಾವುದು—ಎಂಬ ತಿಳಿವಳಿಕೆಯನ್ನೂ, **ದೃಢತರಮುಮುಕ್ಷುತಾಂ ಅಪಿ** ನಿತ್ಯವಾದ ಮೋಕ್ಷವನ್ನೇ ಸಂಪಾದಿಸಬೇಕೆಂಬ ಬಲವಾದ ಆಸೆಯನ್ನೂ, **ಸತ್ವರಂ** ಬೇಗನೆ, **ಸುಖೇನ ಏವ** ಅನಾಯಾಸವಾಗಿಯೇ, **ಆಶ್ರಯತಾತ್** ಹೊಂದಲಿ.

ಶಾಸ್ತ್ರಬೋಧಿತವಾಗಿರುವ ಸ್ವಧರ್ಮವನ್ನು ನಿಷ್ಕಾಮವಾಗಿ ಅನುಷ್ಠಿಸುವುದರಿಂದ ಈಶ್ವರಾನುಗ್ರಹವು ಲಭಿಸಿ, ಚಿತ್ತವು ಶುದ್ಧವಾಗುವುದು; ಆಗ ಇಹಪರಗಳ ಚಕ್ರವರ್ತಿ—ದೇವೇಂದ್ರಪದವಿಗಳೂ ಸಹ ಕರ್ಮಫಲಗಳಾಗಿ ನಶ್ವರಗಳೆಂದು ನಿಶ್ಚಿತವಾಗಿ ತಿಳಿದುಬಂದು, ತೀವ್ರವಾದ ವಿರಕ್ತಿಯು ಮೂಡುವುದು; ಮತ್ತು ನಿತ್ಯವಾದ ಮೋಕ್ಷವೊಂದರಲ್ಲಿಯೇ ದೃಢವಾದ ಆಸಕ್ತಿಯು ಹುಟ್ಟುವುದು. ಹೀಗೆ ವಿವೇಕಿಯಾಗಿ ಮುಮುಕ್ಷುವಾಗಬೇಕು.

ಸುವಿಧಾಯ ಸಶಿಖವಪನಂ ಛಿತ್ವಾ ಕರ್ಮಾರ್ಥಮಾದೃತಂ ಸೂತ್ರಂ।
ಸ್ವೀಕೃತಪಾರಮಹಂಸ್ಯೋ ವಿಹರ ಸುಖೇನೇತಿ ಸದ್ಗುರುರ್ಬ್ರೂತೇ
॥ ೧೪ ॥

ಕರ್ಮಾರ್ಥಂ ಶಾಸ್ತ್ರೀಯಕರ್ಮಗಳ ಅನುಷ್ಠಾನಕ್ಕಾಗಿ, **ಆದೃತಂ** ಶಾಸ್ತ್ರನಿಯಮವನ್ನನುಸರಿಸಿ ಧರಿಸಿದ್ದ, **ಸೂತ್ರಂ** ಯಜ್ಞೋಪವೀತವನ್ನು, **ಛಿತ್ವಾ** ಕಿತ್ತೊಗೆದು, **ಸಶಿಖವಪನಂ** ಅಂಥ ಶಿಖೆಯನ್ನೂ ತೆಗೆದು ಮುಂಡಿಸ್ವವನ್ನು, **ಸುವಿಧಾಯ** ಶಾಸ್ತ್ರವಿಧಿಗೆ ಅನುಸಾರವಾಗಿ ಮಾಡಿ, **ಸ್ವೀಕೃತಪಾರಮಹಂಸ್ಯಃ** ಪರಮಹಂಸಸನ್ಯಾಸವನ್ನು ಸ್ವೀಕರಿಸಿ, **ಸುಖೇನ ವಿಹರ**

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಖರೂಪನಾಗು, ಇತಿ ಎಂದು, **ಸದ್ಗುರುಃ** ಸದ್ಗುರುಗಳು, **ಬ್ರೂತೇ** ಹಿತವನ್ನು ಉಪದೇಶಮಾಡುತ್ತಾರೆ.

ಚಿತ್ತಶುದ್ಧಿಗಾಗಿಯೇ ಶಾಸ್ತ್ರವು ವರ್ಣಾಶ್ರಮಧರ್ಮಗಳನ್ನು ವಿಧಿಸಿರುವುದು. ಸಂಸಾರದಲ್ಲಿ ವಿರಕ್ತಿಯು ಹುಟ್ಟಿ, ನಿತ್ಯವಾದ ಮೋಕ್ಷವೊಂದನ್ನೇ ಬಯಸಿ, ಶಮದಮಾದಿಷಟ್ಕಸಂಪನ್ನನಾಗಿರುವ ಮುಮುಕ್ಷುವಿಗೆ ಕರ್ಮಗಳಿಂದ ಏನೂ ಪ್ರಯೋಜನವಿರುವುದಿಲ್ಲ. ಮತ್ತು ಮೋಕ್ಷಸಿದ್ಧಿಗಾಗಿ ಇವನು ಎಡಬಿಡದೆ ತತ್ವಚಿಂತನೆಯನ್ನು ಮಾಡಬೇಕಾದುದರಿಂದ, ಕರ್ಮಾನುಷ್ಠಾನವು ಇದಕ್ಕೆ ಅಡ್ಡಿಯೂ ಆಗುತ್ತದೆ. ಆದರೆ, ಶಾಸ್ತ್ರವಿಧಿಗೆ ಬದ್ಧನಾಗಿ ಮಾಡಬೇಕಾಗಿರುವ ಕರ್ತವ್ಯಕರ್ಮಗಳನ್ನು ಸುಮ್ಮನೆ ತ್ಯಜಿಸಿದರೆ ದೋಷವುಂಟಾಗಿ ಅನರ್ಥಕರವೇ ಆಗುತ್ತದೆ. ಆದಕಾರಣ ಶಾಸ್ತ್ರವಿಧಿಯನ್ನು ಅನುಸರಿಸಿಯೇ ಕರ್ಮಗಳನ್ನು ಬಿಡಬೇಕು. ಶಾಸ್ತ್ರೋಕ್ತವಾದ ರೀತಿಯಿಂದ ಪರಮಹಂಸಸನ್ಯಾಸಾಶ್ರಮವನ್ನು ಸ್ವೀಕರಿಸಿದರೆ, ಆಗ ಕರ್ಮಗಳ ಸಂಬಂಧವು ಬಿಟ್ಟುಹೋಗುವುದು. ಅನಂತರ ಸದ್ಗುರುಗಳ ಉಪದೇಶದಂತೆ ವೇದಾಂತಗಳ ತಾತ್ಪರ್ಯಾರ್ಥವನ್ನು ಶ್ರವಣಮನನಗಳಿಂದ ದೃಢಪಡಿಸಿಕೊಂಡು ನಿದಿಧ್ಯಾಸನಮಾಡುತ್ತ ಬರುವುದರಿಂದ, ಅದು ಪರಿಪಕ್ವವಾಗಿ ಆತ್ಮತತ್ತ್ವದ ಸಾಕ್ಷಾತ್ಕಾರವನ್ನು ಉಂಟುಮಾಡುವುದು. ಇದರಿಂದ ಸರ್ವಸಂಸಾರವಿನಿರ್ಮುಕ್ತನಾಗಿ ಕೃತಕೃತ್ಯನಾಗುವನು. ಇದನ್ನು ಬಿಟ್ಟು, ಶ್ರೇಯಃಸಿದ್ಧಿಗೆ ಬೇರೆ ಉಪಾಯವು ಯಾವುದೂ ಇಲ್ಲ. ಶ್ರೀಸದ್ಗುರುಗಳ ಉಪದೇಶವು ಇಂಥ ಪರಮೋತ್ಕೃಷ್ಟವಾದ ಫಲವನ್ನು ಕೊಡುವಂಥದ್ದು.

ಯದಿ ಯೌ ಕೌಚಿತ್ಪಿತರೌ ಇಚ್ಛತ ಆತ್ಮೋದ್ಭವಸ್ಯ ಪರಮಪದಂ।
ತೌ ತರ್ಹಿ ಸದ್ಗುರುಸ್ಥಲಕೃತಾಭಿಷೇಕೌ ವಿಜಾನೀಹಿ ॥೧೫॥

ಯೌ ಕೌಚಿತ್ ಪಿತರೌ ಯಾವ ತಂದೆತಾಯಿಗಳಾದರೂ, **ಆತ್ಮೋದ್ಭವಸ್ಯ** ತಮ್ಮ ಮಗನಿಗೆ, **ಪರಮಪದಂ** ಮೇಲೆ ಹೇಳಿದ ಮೋಕ್ಷವೆಂಬ ಪರಮಪದವಿಯನ್ನು, **ಇಚ್ಛತಃ ಯದಿ** ಬಯಸುವವರು ಆಗಿದ್ದರೆ, **ತರ್ಹಿ** ಹಾಗಿರುವ ಪಕ್ಷದಲ್ಲಿ, **ತೌ** ಅಂಥ ತಂದೆತಾಯಿಗಳನ್ನು, **ಸದ್ಗುರು**

Sri Vidyabharathi Book Centre, Sringeri

 CC-O. In Public Domain. Digitized by eGangotri

ಸ್ಥಲಕೃತಾಭಿಷೇಕೌ ಸದ್ಗುರುಗಳ ಸ್ಥಾನದಲ್ಲಿ ಪಟ್ಟಾಭಿಷಿಕ್ತರಾದವರೆಂದೇ ವಿಜಾನೀಹಿ ತಿಳಿದುಕೋ.

'ನಮ್ಮ ಮಗನಿಗೆ ಮೋಕ್ಷವೆಂಬ ಪರಮಪುರುಷಾರ್ಥವು ಸಿದ್ಧಿಸಬೇಕು; ಇದಕ್ಕಾಗಿ ಇವನು ಶಾಸ್ತ್ರೀಯಸ್ವಧರ್ಮದಲ್ಲಿಯೇ ನಿಷ್ಠನಾಗಿರಲಿ; ವ್ಯವಹಾರದಲ್ಲಿಯೂ ಸಹ ತನ್ನ ಜಾತಿಕುಲಗೋತ್ರಸ್ಥಾನಮಾನಾದಿಗಳಿಗೆ ತಕ್ಕಂತೆ ತನ್ನ ಘನತೆಯನ್ನು ಕಳೆದುಕೊಳ್ಳದೆ ಇರಲಿ'—ಎಂದು ಹಾರೈಸುವ ತಾಯಿತಂದೆಗಳು ಯಾರೂ ಇಲ್ಲ; ಇದ್ದರೆ ಅವರು ಸದ್ಗುರುಗಳೇ ಸರಿ !

ಪಿತ್ರೋಶ್ಚ ಸದ್ಗುರೋರಪಿ ಅಂತರಮೇವಂ ವಿಮೃಶ್ಯ ವತ್ಸ ಚಿರಂ ।
ನಿತ್ಯಸುಖೇಚ್ಛಾ ಚೇತ್ತವ ತರಸಾ ವ್ರಜ ಸದ್ಗುರು ಶರಣಂ ॥ ೧೬ ॥

ವತ್ಸ ಅಪ್ಪ, ಮಗು, **ಪಿತ್ರೋಃ** ತಾಯಿತಂದೆಗಳಿಗೂ, **ಸದ್ಗುರೋಃ ಅಪಿ** ಮತ್ತು ಸದ್ಗುರುಗಳಿಗೂ ಇರುವ, **ಅಂತರಂ** ಇಷ್ಟೊಂದು ವ್ಯತ್ಯಾಸವನ್ನು, **ಏವಂ** ಮೇಲೆ ವಿವರಿಸಿದಂತೆ, **ಚಿರಂ ವಿಮೃಶ್ಯ** ಚೆನ್ನಾಗಿ ವಿಚಾರಪೂರ್ವಕವಾಗಿ ತಿಳಿದು, **ತವ** ನಿನಗೆ, **ನಿತ್ಯಸುಖೇಚ್ಛಾ** ನಿತ್ಯವಾದ ಮೋಕ್ಷಸುಖದಲ್ಲಿ ಇಚ್ಛೆಯು, **ಚೇತ್** ಇರುವುದಾದರೆ, **ತರಸಾ** ಕೂಡಲೆ, **ಸದ್ಗುರುಂ** ಸದ್ಗುರುಗಳನ್ನು, **ಶರಣಂ ವ್ರಜ** ಶರಣುಹೊಂದು, ಅವರ ಉಪದೇಶದಂತೆ ನಡೆದುಕೋ. ನಿನಗೆ ಶ್ರೇಯಸ್ಸು ನಿಶ್ಚಿತವಾಗಿಯೂ ಸಿದ್ಧಿಸುವುದು. ಇದೊಂದೇ ಕ್ಷೇಮಕ್ಕೆ ದಾರಿ.

ಸದ್ಗುರುರಿಹ ಸಂಪ್ರಾಪ್ತಂ ಶಿಷ್ಯಂ ತತ್ತ್ವಂ ಯಥಾವದುಪದಿಶ್ಯ ।
ದಯಯಾ ನೈಸರ್ಗಿಕ್ಯಾ ನಿತ್ಯಸುಖಂ ಪ್ರಾಪಯೇತ್ತರಸಾ ॥ ೧೭ ॥

ಇತಿ ಯತಿವಚಃಪ್ರಬುದ್ಧಃ ಶಿಶುರೂಹಾಪೋಹದಕ್ಷಮತಿರೇವಂ ।
ಪ್ರಪಚ್ಛ ಮುಕ್ತಿಕಾಮಃ ತ್ಯಕ್ತ್ವೈಹಿಕಪಾರಲೌಕಿಕೇಚ್ಛಃ ಸನ್ ॥ ೧೮ ॥

ಶಿಷ್ಯ ಉವಾಚ—

ಸದ್ಗುರುಸೇವನಮೇವ ಹಿ ನಿತ್ಯಸುಖಾವಾಪ್ತಿಸಾಧನಂ ಬ್ರೂಷೇ ।
ಸದ್ಗುರುರೀದೃಶ ಇತಿ ಮೇ ಯತಿವರ ತಲ್ಲಕ್ಷಣಂ ಬ್ರೂಹಿ ॥ ೧೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುರುವಾಚ—

ನಿರ್ಹೇತುಕಕರುಣಾಜನಿಭೂಮಿಃ ಸಂತ್ಯಕ್ತವಿಷಯೇಚ್ಛಃ ।
ಲುಪ್ತಸ್ವಪರತ್ವಮತಿಃ ಸ್ಮಿತಲಸದಾಸ್ಯಾಂಬುಜಃ ಸತತಂ ॥ ೨೦ ॥

ಶೀಲಿತನಿಗಮಾಂತತತಿಃ ಪಾಲಿತಮೈತ್ರೀಪ್ರಮುಖ್ಯಗುಣಜಾಲಃ ।
ತತ್ತ್ವೋಪದೇಶನಿರತಃ ಸತ್ವರಮೇವಾಂಘ್ರಿನಮ್ರಲೋಕಾನಾಂ ॥ ೨೧ ॥

ಸಕ್ರೋಧಾನಕ್ರೋಧಾನ್ ರಾಗಾಢ್ಯಾನ್ರಾಗನಿರ್ಮುಕ್ತಾನ್ ।
ಕುರ್ವಾಣೋ ವಿಷಯೇಷ್ವತಿವೈರಸ್ಯಂ ಬೋಧಯಂಸ್ತರಸಾ ॥ ೨೨ ॥

ಲೋಕಾರ್ಥಮಾಶ್ರಮೋಚಿತಚರ್ಯಾನಿರತಃ ಸಮಾಧಿರಹಿತೇಷು ।
ಕಾಲೇಷು ಕಿಂಚ ಕೃಷ್ಣದ್ವೈಪಾಯನಸೂತ್ರಜಾಲಬೋಧಯಿತಾ ॥ ೨೩ ॥

ಹಠರಾಜಮುಖ್ಯಯೋಗಾನ್ ಅಧಿಕಾರಿಭೇದತಃ ಪ್ರಣಮ್ರೇಭ್ಯಃ ।
ಪ್ರತಿಪಾದಯನ್ನಜಸ್ರಂ ಹರ್ಷಪ್ರಾಗ್ಭಾರತುಂದಿಲಸ್ವಾಂತಃ ॥ ೨೪ ॥

ಇತ್ಯುಪದೇಶಚತುರ್ವಿಂಶತಿಃ

ಸಂಪೂರ್ಣಾ

Sri Vidyabharathi Book Centre, Sringeri

ಶ್ರೀಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀ
CC-O. In Public Domain. Digitized by eGangotri
ಜಗದ್ಗುರುಮಹಾಸ್ವಾಮಿಭಿಃ ವಿರಚಿತಂ

ಶ್ರೀಗುರುಪಾದುಕಾನಮುಕಸ್ತೋತ್ರಂ

ನಾಲೀಕನೀಕಾಶಪದಾದೃತಾಭ್ಯಾಂ
ಭ್ರಾಂತ್ಯಾದಿದೋಷಪ್ರಪಂಜಭಂಕಾಭ್ಯಾಂ ।
ನಮಜ್ಜನಾಭೀಷ್ಟತತಿಪ್ರದಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧

ಶಮಾದಿಷಟ್ಕಪ್ರದವೈಭವಾಭ್ಯಾಂ
ಸಮಾಧಿದಾನವ್ರತದೀಕ್ಷಿತಾಭ್ಯಾಂ ।
ಉಮಾಧವಾಂಘ್ರಿಸ್ಥಿರಭಕ್ತಿದಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨

ನೃಪಾಲಮೌಲಿವ್ರಜರತ್ನಕಾಂತಿ-
ಸರಿದ್ವಿರಾಜಜ್ಝಷಕನ್ಯಕಾಭ್ಯಾಂ ।
ನೃಪತ್ವದಾಭ್ಯಾಂ ನತಲೋಕಪಂಕ್ತೇಃ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೩

ಅನಂತಸಂಸಾರಸಮುದ್ರತಾರ-
ನೌಕಾಯಿಭಾತ್ಯಾಂ ಗುರುಭಕ್ತಿದಾಭ್ಯಾಂ ।
ವಿವೇಕಸಾಮ್ರಾಜ್ಯದಪೂಜನಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೪

ಪಾಪಾಂಧಕಾರಾರ್ಕಪರಂಪರಾಭ್ಯಾಂ
ತಾಪತ್ರಯಾಹೀಂದ್ರಖಗೇಶ್ವರಾಭ್ಯಾಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾಡ್ಯಾಬ್ಧಿಸಂಶೋಷಣಬಾಡಬಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾ ॥ ೫

ಕವಿತ್ವವಾರಾಶಿನಿಶಾಕರಾಭ್ಯಾಂ
ದಾರಿದ್ರ್ಯದಾವಾಂಬುದಮಾಲಿಕಾಭ್ಯಾಂ ।
ದೂರೀಕೃತಾಪನ್ನವಿಪತ್ತತಿಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೬

ನತಾ ಯಯೋಃ ಶ್ರೀಪತಿತಾಂ ಸಮೀಯುಃ
ಕದಾಚಿದಪ್ಯಾಶು ದರಿದ್ರವರ್ಯಾಃ ।
ಮೂಕಶ್ಚ ವಾಚಸ್ಪತಿತಾಂ ಹಿ ತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೭

ಕಾಮಾದಿಷಡ್ವರ್ಗವಿಭಂಜಕಾಭ್ಯಾಂ
ವಿಜ್ಞಾನವೈರಾಗ್ಯನಿಧಿಪ್ರದಾಭ್ಯಾಂ ।
ಬೋಧಪ್ರದಾಭ್ಯಾಂ ದ್ರುತಮೋಕ್ಷದಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೮

ಸ್ವಾರ್ಚಾಪರಾಣಾಮಖಿಲೇಷ್ಟದಾಭ್ಯಾಂ
ಸ್ವಾಹಾಸಹಾಯಾಕ್ಷಧುರಂಧರಾಭ್ಯಾಂ ।
ಸ್ವಾಂತಾಚ್ಛಭಾವಪ್ರದಪೂಜನಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೯

ಇತಿ ಶ್ರೀಶಿವಾಭಿನವನೃಸಿಂಹಭಾರತೀಪೂಜ್ಯಪಾದವಿರಚಿತಂ
॥ ಶ್ರೀಗುರುಪಾದುಕಾನವಕಸ್ತೋತ್ರಂ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವಿಶ್ವನಾಥವಿದ್ವದ್ವಿರಚಿತಃ ॥ ೪೮ ॥
ಶ್ರೀಗುರುಪಾದುಕಾಸ್ತವಃ ।
(ಶ್ರೀಗುರುನಾಮಾಕ್ಷರಸಂಕೇತಘಟಿತಃ ।)

ಶ್ರೀರಾವಿರಾಸ್ತೇ ರಸನಾಗ್ರರಂಗೇ
ವಾಣೀ ಸದಾ ನೃತ್ಯತಿ ಯನ್ಮಹಿಮ್ನಾ ।
ತಾಭ್ಯಾಂ ಮಹಾಶ್ಚರ್ಯನಿಕೇತನಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧ ॥

ಸತ್ವಂ ಗುಣಶ್ಚೇತಸಿ ಸನ್ನಿಧತ್ತೇ
ಸಾಮೋದಮಾಸೀದತಿ ಭಕ್ತಿರಗ್ರ್ಯಾ ।
ಯತ್ಪ್ರಭವಾದ್ವಿಶ್ರುತವೈದುಷೀ ಚ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨ ॥

ಚಿದ್ರೂಪತಾಯೈ ಪ್ರಭವಂತಿ ಸಂತೋ
ಯದ್ಧ್ಯಾನವಿಧ್ವಸ್ತಸಮಸ್ತಪಾಪಾಃ ।
ತಾಭ್ಯಾಂ ಪ್ರದತ್ತಾಖಿಲವಾಂಛಿತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೩ ॥

ದಾತಾ ಧನಾನಾಮಧಿಪಃ ಪಶೂನಾ-
ಮಖಂಡಭೂಮಂಡಲಸಾರ್ವಭೌಮಃ ।
ಜಾಯೇತ ಯತ್ಸ್ತೋತ್ರಬಲೇನ ತ್ಯಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೪

ನಂದಂತಿ ಸಂದೇಹವಿಹೀನಬೋಧಂ
ವೇಧಾವಿನಃ ಪ್ರಾಪ್ಯ ಚ ಯತ್ಪ್ರಭಾವಾತ್ ।
ಶ್ರುತ್ಯಂತಸಿದ್ಧಾಂತಮಹಾಮಹಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ

Sri Vidyabharathi Book Centre, Sringeri

CC-O. In Public Domain. Digitized by eGangotri

ದಯಾನಿಧೇಃ ಸದ್ಗುರುಸಾರ್ವಭೌಮಾ-
ತ್ಸಂಪ್ರಾಪ್ಯ ರಕ್ಷಾವಿಧಿಮತ್ಯುದಾರಂ ।
ಸಮಾಗತಾಭ್ಯಾಮಿವ ಪಾತುಮಸ್ಮಾ-
ನ್ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೬ ॥

ಶಿವಾಕೃತಿರ್ಮಂಜುಲಶಬ್ದಬದ್ಧಾ
ಸಾಹಿತ್ಯಲಂಕಾರಗುಣಾ ಕವೀನಾಂ ।
ಯದ್ವರ್ಣನಾದಾಶು ಭವತ್ಯಮೂಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೭ ॥

ವಾಂಛಾಭಿಪೂರ್ತ್ಯೈ ಸ್ಮರಣಂ ಯದೀಯಂ
ವಂದಾರುವೃಂದಸ್ಯ ವಿನೈವ ಯಾಚ್ಞಾಂ ।
ಮಂದಾರಭೂರುಡ್ಭವತೀಹ ತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೮ ॥

ಭಿಂದಂತ್ಯನಾಯಾಸಮಮಂದಬೋಧಾ-
ದ್ದ್ವಂದ್ವಾನಿ ದುಃಖೈಕನಿಕೇತನಾನಿ ।
ಯದ್ದ್ವಂದ್ವಭಕ್ತ್ಯಾಮಿತವೈಭವಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೯ ॥

ನವಂ ವಪುಃ ಶ್ರೀಶ್ಚ ನವಾ ಮುಖೇಂದೌ
ಶೀಲಂ ನವಂ ಯತ್ರ ಕೃತಾದರಾಣಾಂ ।
ಭವಂತ್ಯಯತ್ನಂ ಗುಣಸಾಗರಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೦ ॥

ವಶಂವದಾನೀಂದ್ರಿಯಮಾನಸಾನಿ
ವಶೇ ಜಗತ್ತಿಷ್ಠತಿ ಸರ್ವಮೇವ ।
ಯದ್ಧ್ಯಾಯಿನಾಂ ಸಂಯಮಿನಾಮಮೂಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೧ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ನೃಣಾಂ ಯದರ್ಚಾಮಹಿಮಾತಿರೇಕಾ-
ನ್ನಿಸ್ತಾರಶೂನ್ಯಾನ್ಯಪಿ ಪಾತಕಾನಿ ।
ಪ್ರಯಾಂತಿ ಚಾಯಾಂತಿ ಶುಭಾನಿ ತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೨ ॥

ಸಿಂಹೋ ನರಾಣಾಂ ಪ್ರಮುದಾಂಬುರಾಶೌ
ಯತ್ಪೂಜನೇ ಮಜ್ಜನಮಾತನೋತಿ ।
ತಾಭ್ಯಾಂ ಪ್ರಶಂಸಾಪದಚಾತುರೀಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೩ ॥

ಸ್ತಂಹ ಪ್ರಯಾತ್ಯತ್ರ ವಿಮುಕ್ತಿಲಕ್ಷ್ಮೀ-
ರ್ಯಚ್ಚಿಂತನೇ ಸಾದರಮಾನಸಾನಾಂ ।
ತಾಭ್ಯಾಂ ಶುಭಾಭ್ಯಾಂ ಶುಭದಾಯಿನೀಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೪ ॥

ಭಾಂತಿ ಸ್ವಯಂ ಯನ್ಮನನೇ ನರಾಣಾ-
ಮಷ್ಟಾಂಗಯೋಗೋ ನಿಗಮಾಗಮಾಶ್ಚ ।
ತಾಭ್ಯಾಂ ಕುಶಾಗ್ರೀಯಮತಿಪ್ರದಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೫ ॥

ರತೀಶಕೋಪಾದಿಮಶತ್ರುಸಂಘಂ
ಯದ್ಧ್ಯಾನಲೇಶೇನ ಜನೋ ನಿಹಂತಿ ।
ತಾಭ್ಯಾಂ ವಿವೇಕಪ್ರದಸೇವನಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೬ ॥

ತೀವ್ರಃ ಪ್ರಪಂಚೇಷು ವಿರಾಗಭಾವೋ
ಯದ್ಧ್ಯಾನತಃ ಸಿದ್ಧ್ಯತಿ ಪುಣ್ಯಭಾಜಾಂ ।
ತಾಭ್ಯಾಮಸಂಖ್ಯೇಯಗುಣಾಕರಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೭ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾರಾಜ್ಯಸಾಮ್ರಾಜ್ಯಮುಖಾಃ ಪದವ್ಯೋ
ಯದ್ಭಕ್ತಿಲಾಭಾತ್ಸುಲಭಾ ಭವಂತಿ ।
ತಾಭ್ಯಾಮನನ್ಯಾಶ್ರಯವೈಭವಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೮ ॥

ಮಿಲಂತಿ ಯದ್ಭಕ್ತಿರತೇಷು ಸಂಪ-
ತ್ಪರಂಪರಾಃ ಸೌಹೃದಮುಶ್ನುವಾನಾಃ ।
ತಾಭ್ಯಾಂ ಚ ವಿಸ್ಮಾಪನವೈಭವಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೧೯ ॥

ನಾಮ್ನಾಂ ಸಮಾಮ್ನಾನರಸಾತಿರೇಕಾ-
ತ್ಸದ್ವೈವ ಸಂಜಾತಚಮತ್ಕೃತಿಭ್ಯಾಂ ।
ಅನ್ಯಾದೃಶಾಶ್ಚರ್ಯನಿಕೇತನಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೦ ॥

ಪಾತುಂ ಪ್ರಪನ್ನಾನಪಿ ಪಾಪಿನೋಽಸ್ಮಾನ್
ಯಾಭ್ಯಾಂ ವಿನಾ ನಾಸ್ತಿ ಗತಿರ್ಜಗತ್ಯಾಂ ।
ತತ್ಪ್ರೋಪದೇಶೈಕಪರಾಯಣಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೧ ॥

ಮುರೋದರಾದಿಪ್ರವಣಾಶಯಾನಾಂ
ದುಃಖಾನುಭೂತೌ ನಿರಯೇಽತಿವೇಲಂ ।
ಅಮಂದತಾಪಪ್ರತಿಪಾದಕಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೨ ॥

ಕೇದಾರರಾಮಾದಿಸಮೃದ್ಧಿರಾಶಿಂ
ಯತ್ಸೇವಕೋ ವಾಂಛತಿ ನೋ ಕದಾಪಿ ।
ತಾಭ್ಯಾಂ ವಿರಕ್ತಾಗ್ರಿಮಸೇವಿತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೩ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ವಿಶ್ವಾಧಿಕತ್ವಸ್ಯ ಗುರುಪ್ರಸಾದೋ
ನಿದಾನಮಿತ್ಯಾಹ ಪುರಾಣವಾಣೀ ।
ಯದ್ಧ್ಯಾನತಃ ಸೋಽಪಿ ಘಟೇತ ತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೪ ॥

ರಾಕಾಶಶಾಂಕೋಽಪಿ ಭಯೇನ ರಾತ್ರಾ
ಯದ್ಭಕ್ತವರ್ಯಸ್ಯ ಯಶಃಸುಧಾಂಶೋಃ ।
ನಭೋಽಂಗಣೇ ಸಂಚರತೀವ ತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೫ ॥

ಜೇತಾ ಮದಾದಿಪ್ರತಿಪಕ್ಷರಾಶೇಃ
ಜ್ಞಾತಾ ಕಲಾನಾಮಪಿ ದುರ್ಲಭಾನಾಂ ।
ಯಚ್ಛಾತ್ರಸೂರಿಃ ಭವತೀಹ ತಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೬ ॥

ತೇ ಮಾನನೀಯಾ ಭುವಿ ತೇ ಮಹಾಂತೋ
ಯೇಷಾಂ ಮನೋವೇಶ್ಮನಿ ಪಾದುಕೇ ದ್ವೇ ।
ಕೀರ್ತ್ಯಾ ಸಮಾಕ್ರಾಂತಜಗತ್ತ್ರಯಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ॥ ೨೭ ॥

ಅಲಂಕಾರಾ ನಾಲಂ ಪ್ರಭವಿತುಮಲಂಕಾರಪದವೀಂ
ವಿನಾಲಂಕಾರ್ಯಂ ತ್ವಾಂ ವಿಬುಧವರ ವಿಶ್ವಾಧಿಕವಿಭೋ ।
ನ ವಾ ರಮ್ಯಂ ಗಾತ್ರಂ ಭವತಿ ಚಿತಿಹೀನಂ ತು ತದಿಮಾ-
ನಲಂ ಕರ್ತುಂ ಯಾಚೇ ಬಹುತರಮಲಂಕಾರ್ಯ
ಭಗವನ್ ॥ ೨೮ ॥

ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀಸ್ವಾಮಿನಾಂ
ಪಾದುಕೇ ವಿರಾಜೇತೇ ॥

ಇತಿ ವಿಶ್ವನಾಥವಿದುಷಾ ಕಾಲಟೀಕ್ಷೇತ್ರೇ ವಿರಚಿತಃ
ಶ್ರೀಗುರುಪಾದುಕಾಸ್ತವಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮತ್ಸಚ್ಚಿದಾನಂದಶಿವಾಭಿನವನರಸಿಂಹಭಾರತೀ-
ಮಹಾಸ್ವಾಮಿವಿರಚಿತಂ

ಶ್ರೀಭವಬಂಧಮುಕ್ತ್ಯಷ್ಟಕಂ

ಏಕಂ ದ್ವಿತೀಯರಹಿತಂ ಸದಬಾಧಿತಂ ಚ
ಸಚ್ಚಿತ್ಸ್ವರೂಪಮಿತಿ ಯಚ್ಛ್ರುತಿಶೀರ್ಷಪೂಗೈಃ ।
ಜೇಗೀಯತೇ ಸಕಲಲೋಕವಿವರ್ತಭೂತಂ
ತದ್ಭಾವಯಾಮಿ ಸತತಂ ಭವಬಂಧಮುಕ್ತ್ಯೈ ॥೧॥

"ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ ; ಸತ್ಯಂ ಜ್ಞಾನಮನಂತಂ ಬ್ರಹ್ಮ"—ಎಂದು ಮುಂತಾಗಿ–ಅತೀಂದ್ರಿಯವಾದ ತತ್ತ್ವದ ವಿಷಯದಲ್ಲಿ ಒಂದೇ ಪ್ರಮಾಣಗಳಾಗಿರುವ ವೇದಾಂತಗಳು—ಈ ತತ್ತ್ವವು ಬ್ರಹ್ಮವೆಂದೂ, ಇದು ಅಖಂಡಾದ್ವಿತೀಯನಿತ್ಯನಿರತಿಶಯಾನಂದಸ್ವರೂಪದ್ದೆಂದೂ, ಇದು ಸಕಲಜಗತ್ತಿನ ಕಲ್ಪನೆಗೆ—ರಜ್ಜುವು ಹಾವಿನ ಕಲ್ಪನೆಗೂ, ಕಪ್ಪೆಚಿಪ್ಪು ಬೆಳ್ಳಿಯ ಕಲ್ಪನೆಗೂ ಅಧಿಷ್ಠಾನವಾಗಿರುವಂತೆ—ವಿವರ್ತಕಲ್ಪನಾಧಿಷ್ಠಾನವಾಗಿರುವುದೆಂದೂ ; ಇದು ನಮ್ಮ ಪಾರಮಾರ್ಥಿಕಸ್ವರೂಪವೆಂದೂ ; ಇದರ ಅನುಭವರೂಪವಾದ ಸಾಕ್ಷಾತ್ಕಾರವೇ ಸಕಲಸಂಸಾರಬಂಧನದ ಮುಕ್ತಿಗೆ ಒಂದೇ ಸಾಧನವೆಂದೂ ; ಈ ತತ್ವದ ನಿರಂತರಧ್ಯಾನವೇ ಇದರ ಸಾಕ್ಷಾತ್ಕಾರಕ್ಕೆ ಸಾಧನವೆಂದೂ—ಪ್ರತಿಪಾದಿಸುತ್ತವೆ ; ಆದಕಾರಣ, ಇಂಥ ಪ್ರತ್ಯಗಭಿನ್ನಾದ್ವಿತೀಯಸಚ್ಚಿದಾನಂದಪರಬ್ರಹ್ಮತತ್ತ್ವವನ್ನೇ ಭವಬಂಧದ ಮುಕ್ತಿಗಾಗಿ ಭಾವಿಸುತ್ತೇನೆ.

ಅನ್ನಾಸುಮಾನಸಮುಖಪ್ರಕೃತೀನ್ ಜಗಾದ
ಕೋಶಾನ್ ಶ್ರುತಿರ್ಯದವಬೋಧಕೃತೇಽತ್ರ ಪಂಚ ।
ಸರ್ವಾಂತರಂ ಭೃಗುಮುನಿಪ್ರವರೇಣ ದೃಷ್ಟಂ
ತದ್ಭಾವಯಾಮಿ ಸತತಂ ಭವಬಂಧಮುಕ್ತ್ಯೈ ॥೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲನೆಯ ಪದ್ಯದಲ್ಲಿ ಬ್ರಹ್ಮದ ಸ್ವರೂಪವನ್ನು ಪರಿಶೀಲಿಸಿ, ಅದು ಪ್ರತ್ಯಗಭಿನ್ನಾದ್ವಿತೀಯಸಚ್ಚಿದಾನಂದಸ್ವರೂಪವೆಂಬುದು ನಿರ್ಧಾರಿತವಾಗಿದೆ ; ಪ್ರತ್ಯಗಾತ್ಮಸ್ವರೂಪವನ್ನು ವಿಮರ್ಶಿಸಿದರೂ ಇದೇ ತತ್ತ್ವವು ನಿಶ್ಚಿತವಾಗುವುದೆಂಬುದನ್ನು ಈಗ ತಿಳಿಸುತ್ತಾರೆ.

ಬಾಹ್ಯದ್ವೈತಪ್ರಪಂಚವೆಲ್ಲ ಜಡವೂ, ವಿಕಾರಿಯೂ, ನಶ್ವರವೂ, ದುಃಖರೂಪವೂ ಆಗಿ, ಅನಾತ್ಮವೆಂದು ಸ್ಪಷ್ಟವೇ ಇದೆ. ಆತ್ಮನು ಎಲ್ಲವನ್ನೂ ತಿಳಿಯುತ್ತ ಜ್ಞಾನಸ್ವರೂಪನೂ, ನಿರ್ವಿಕಾರಿಯೂ, ನಿತ್ಯನೂ, ಆನಂದರೂಪನೂ ಆಗಿರುತ್ತಾನೆ. ಆದರೆ, ನಮ್ಮ ನಿತ್ಯಾನುಭವದಲ್ಲಿ—"ನಾನು ಹುಟ್ಟಿದ್ದೇನೆ, ಮೃತನಾಗುತ್ತೇನೆ, ಸುಖೀ, ದುಃಖೀ—"ಎಂದು ಮುಂತಾಗಿಯೇ ತಿಳಿದುಬರುತ್ತಿದ್ದಾನೆ. ಇದು ವಸ್ತುತಃ ದೇಹೇಂದ್ರಿಯಮನೋಬುದ್ಧಿಗಳ ಧರ್ಮಗಳೇ ಆಗಿರುತ್ತವೆಯೋ ಹೊರತು, ಸರ್ವಕ್ಕೂ ಬೇರೆಯಾಗಿ, ಸಾಕ್ಷಿಯಾಗಿರುವ, ಆತ್ಮನ ಸ್ವರೂಪವಲ್ಲವೆಂಬುದನ್ನು ವಿವರಿಸುವುದಕ್ಕಾಗಿಯೇ ಶ್ರುತಿಯು-ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ—ಎಂಬ ಐದು ಕೋಶಗಳನ್ನು ತೋರಿಸಿಕೊಟ್ಟು, ಈ ಐದು ಕೋಶಗಳೂ ಅನಾತ್ಮಗಳೆಂದೂ, ಜಾಗ್ರತ್, ಸ್ವಪ್ನ, ಸುಷುಪ್ತಿ—ಎಂಬ ಈ ಅವಸ್ಥಾತ್ರಯವೂ ಈ ಕೋಶಗಳಿಗೇ ಸಂಬಂಧಿಸಿದವುಗಳೆಂದೂ, ಇವುಗಳೆಲ್ಲಕ್ಕೂ ಸಾಕ್ಷಿಯಾಗಿ, ಇವುಗಳಲ್ಲಿ ಅನುಗತವಾಗಿರುತ್ತ ಬೇರೆಯಾಗಿರುವ ಆತ್ಮನು ಅಖಂಡನಿತ್ಯನಿರ್ವಿಕಾರಾದ್ವಿತೀಯಸಚ್ಚಿದಾನಂದಸ್ವರೂಪನೆಂದೂ ಆತ್ಮನ ಪಾರಮಾರ್ಥಿಕಸ್ವರೂಪವನ್ನು ಶ್ರುತಿಯು ಸ್ಪಷ್ಟವಾಗಿ ತೋರಿಸಿಕೊಟ್ಟಿರುತ್ತದೆ. ಮತ್ತು, ಭೃಗುಮುನಿಗಳು ತಮ್ಮ ತಂದೆಗಳಾದ ವರುಣರಿಂದ ಈ ತತ್ತ್ವವನ್ನು ತಿಳಿದುಕೊಂಡು, ಆದರಂತೆಯೇ ಮನನಮಾಡಿ, ಈ ಪಂಚಕೋಶಗಳಿಗೂ ಬೇರೆಯಾಗಿ, ಸರ್ವಾಂತರನಾದ ಪ್ರತ್ಯಗಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಧನ್ಯರಾದರೆಂದೂ ವರ್ಣಿಸಿರುತ್ತದೆಯಾಗಿ ಇದೇ ಪರಮಾರ್ಥತತ್ತ್ವವು. ಆದ್ದರಿಂದ ನಾವೂ ಹೀಗೆ ಅನಾತ್ಮಗಳಾದ ಈ ಪಂಚಕೋಶಗಳನ್ನೂ ವಿವೇಚಿಸಿ, ಆತ್ಮನ ವಾಸ್ತವವಾದ ನಿತ್ಯಮುಕ್ತಾದ್ವಿತೀಯಬ್ರಹ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು ಮುಕ್ತರಾಗತಕ್ಕದ್ದು.

Sri Vidyabharathi Book Centre, Sringeri

CC-0. In Public Domain. Digitized by eGangotri

ಅನಾಶಕೇನ ತಪಸಾ ಬಹುದಕ್ಷಿಣೇನ
ಯಜ್ಞೇನ ದಾನನಿಚಯಾಚ್ಛ್ರುತಿಪಾಠತಶ್ಚ ।
ಇಚ್ಛಂತಿ ವೇತ್ತುಮಿಹ ಯದ್ಧರಣೀಸುರಾಗ್ರ್ಯಾಃ
ತದ್ಭಾವಯಾಮಿ ಸತತಂ ಭವಬಂಧಮುಕ್ತ್ಯೈ ॥೩॥

ಮೇಲೆ ಹೇಳಿದಂತೆ ಆತ್ಮತತ್ತ್ವದ ಅನುಭವರೂಪವಾದ ಸಾಕ್ಷಾತ್ಕಾರದ ಸಾಧನೆಯನ್ನು ಇಲ್ಲಿ ತಿಳಿಸುತ್ತಾರೆ. "ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾನಾಶಕೇನ।"— ಎಂದು ಶ್ರುತಿಯು ಈ ಸಾಧನೆಗಳನ್ನು ಉಪದೇಶಿಸುತ್ತದೆ. ಈ ಸಾಕ್ಷಾತ್ಕಾರವನ್ನು ಪಡೆಯುವುದಕ್ಕೆ ಬ್ರಾಹ್ಮಣ್ಯವೇ ಮುಖ್ಯಾಧಿಕಾರಕಾರಣವು. ವೇದಗಳನ್ನು ಅಧ್ಯಯನಮಾಡುವುದು; ಅದು ವಿಧಿಸುವ ವರ್ಣಾಶ್ರಮಧರ್ಮಗಳನ್ನು ಶ್ರೀಪರಮೇಶ್ವರಾರ್ಪಿತವಾಗಿ ಅನುಷ್ಠಿಸುವುದು; ಯಥಾಶಕ್ತಿ, ಲೋಭಾದಿಗಳಿಲ್ಲದೆ, ದೇಶಕಾಲಪಾತ್ರಗಳನ್ನರಿತು ದಾನಮಾಡುವುದು; ಶಮದಮವೈರಾಗ್ಯಾದಿಪೂರ್ವಕವಾಗಿ ಗುರೂಪದಿಷ್ಟವಾದ ಮಂತ್ರಾದಿಗಳನ್ನು ಧ್ಯಾನಮಾಡುವ ರೂಪವಾದ ತಪಸ್ಸು—ಇವುಗಳಿಂದ ಚಿತ್ತಶುದ್ಧಿ ಉಂಟಾಗಿ, ಆತ್ಮತತ್ತ್ವಾನುಭವವು ಸಿದ್ಧಿಸುವುದು. ಶಾಸ್ತ್ರದಲ್ಲಿ ವಿಹಿತಗಳಾಗಿ ಇರುವ ಸಾಧನೆಗಳೆಲ್ಲ ಇದೇ ಎಂದು ಶ್ರೀಭಗವಂತನೂ ಗೀತೆಯಲ್ಲಿ—"ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್। ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ ॥"—ಎಂದು ಉಪದೇಶಮಾಡಿದ್ದಾನೆ.

ಕಶ್ಚಿದ್ವಿಪಶ್ಚಿದಿಹ ಸಂಸೃತಿಸೌಖ್ಯವಾಂಛಾಂ
ಸಂತ್ಯಜ್ಯ ಸದ್ಗುರುಮುಪೇತ್ಯ ಕೃಪಾಪಯೋಧಿಂ ।
ವಿಜ್ಞಾಯ ತದ್ವಚನತಃ ಖಲು ವೇದತೇ
ಯತ್ತದ್ಭಾವಯಾಮಿ ಸತತಂ ಭವಬಂಧಮುಕ್ತ್ಯೈ ॥೪॥

ನಿಷ್ಕಾಮನೆಯಿಂದ ಮೇಲೆ ಹೇಳಿರುವ ಯಜ್ಞದಾನತಪಃಕರ್ಮಗಳನ್ನು ಯಥಾವತ್ತಾಗಿ ಅನುಷ್ಠಿಸುವುದರಿಂದ, ಆತ್ಮತತ್ತ್ವದ ಅನುಭವವು ಸಿದ್ಧಿಸುವುದಕ್ಕೆ ಅವಶ್ಯವಾದ ಚಿತ್ತಶುದ್ಧಿಯುಂಟಾಗುವುದು—ಅಷ್ಟೆ! ಭೂಮಿಯನ್ನು ಉತ್ತು, ಗೊಬ್ಬರಹಾಕಿ, ನೀರೆರೆಯುವುದರಿಂದ, ಭೂಮಿಯು ಬೆಳೆಬೆಳೆಯುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗ್ಯತೆಯನ್ನು ಪಡೆಯುವುದು ; ಬೆಳೆಯು ಬೆಳೆಯಬೇಕಾದರೆ, ತಕ್ಕ ಬೀಜವನ್ನು ಬಿತ್ತಬೇಕು. ಇಹಪರಗಳ ಸಂಸಾರಸುಖಗಳಲ್ಲಿ—'ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ |'—ಎಂಬ ಗೀತಾವಚನದಂತೆ—ಇವೆಲ್ಲ ಅನಿತ್ಯಗಳೂ ದುಃಖಮಯಗಳೂ ಆಗಿವೆಯೆಂಬ ಅನುಭವವು ಸಿದ್ಧಿಸುವುದೇ ಚಿತ್ತಶುದ್ಧಿಯಾದುದಕ್ಕೆ ಗುರುತು. ಇದರಿಂದ ಸಕಲಸಂಸಾರಾನುಭವದಲ್ಲಿಯೂ ತೀವ್ರವೂ ದೃಢವೂ ಆದ ವಿರಕ್ತಿಯು ಮೂಡುವುದು. ಇದು ಸಿದ್ಧಿಸುವ ಪರ್ಯಂತವೂ ಮೇಲೆ ಹೇಳಿದ ನಿಷ್ಕಾಮಕರ್ಮಗಳನ್ನು ಅನುಷ್ಠಿಸುತ್ತಿರಬೇಕು. ಅನಂತರ—"ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ|| ; "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ | ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ||"—"ಆತ್ಮತತ್ತ್ವವನ್ನು ತಿಳಿಯಲು ಗುರುದಕ್ಷಿಣಾಸಹಿತವಾಗಿ ಶ್ರೋತ್ರಿಯರೂ—ಎಂದರೆ ಶಾಸ್ತ್ರೀಯಸದಾಚಾರಸಂಪನ್ನರೂ, ಬ್ರಹ್ಮನಿಷ್ಠರೂ—ಎಂದರೆ ತತ್ತ್ವಜ್ಞಾನಸಂಪನ್ನರೂ ಆದ ಗುರುಗಳನ್ನು ಆಶ್ರಯಿಸಿ, ಅವರ ಉಪದೇಶದಿಂದಲೇ ತಿಳಿಯತಕ್ಕದು; ಶಾಸ್ತ್ರಜ್ಞಾನಸಂಪನ್ನರೂ ತತ್ತ್ವಾನುಭವಶಾಲಿಗಳೂ ಆಗಿರುವ ಸದ್ಗುರುಗಳನ್ನು ಸೇವಿಸಿ ಪ್ರಸನ್ನರನ್ನಾಗಿ ಮಾಡಿಕೊಂಡು, ವಿನಯಭಕ್ತಿಶ್ರದ್ಧಾಪೂರ್ವಕವಾಗಿ ಆತ್ಮತತ್ತ್ವವನ್ನು ಅನುಗ್ರಹಿಸಬೇಕೆಂದು ಶರಣಾಗತನಾಗಿ ಪ್ರಾರ್ಥಿಸಿಕೊಂಡರೆ, ಅಂಥ ಗುರುಗಳು ಆತ್ಮತತ್ತ್ವವನ್ನು ಉಪದೇಶಿಸುತ್ತಾರೆ." ಇಂಥ ಉಪದೇಶದಿಂದಲೇ ಆತ್ಮತತ್ತ್ವದ ಅನುಭವವು ಸಿದ್ಧಿಸುತ್ತದೆ.

ಪ್ರಾಣಾನ್ನಿಯಮ್ಯ ತು ಮನೋ ಹೃದಯಾರವಿಂದೇ
ಭ್ರೂಗಹ್ವರೇ ಶಿರಸಿ ವಾ ಪ್ರಣಿಧಾಯ ಸಮ್ಯಕ್ ।
ಧ್ಯಾಯಂತಿ ಯತ್ಪರಗುರೋರ್ವಚನಾನುಸಾರಾ-
ತ್ತದ್ಭಾವಯಾಮಿ ಸತತಂ ಭವಬಂಧಮುಕ್ತ್ಯೈ ||೫||

"ಸಕ್ಕರೆಯು ಸಿಹಿಯಾದುದು"—ಎಂಬ ಮಾತಿನಂತೆ, ಶಾಸ್ತ್ರವು—'ಆತ್ಮನು ಪರಮಾರ್ಥವಾಗಿ ನಿತ್ಯಮುಕ್ತಾದ್ವಿತೀಯಬ್ರಹ್ಮಸ್ವರೂಪನು'—ಎಂದು ಆತ್ಮನ ವಾಸ್ತವಸ್ವರೂಪವನ್ನು ಉಪದೇಶಿಸುತ್ತದೆ ; 'ಸಕ್ಕರೆಯನ್ನು-ಇದು ಸಕ್ಕರೆ'—ಎಂದು ತೋರಿಸಿಕೊಟ್ಟು, 'ಇದು ಸಿಹಿಯಾದುದು'—ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಬೋಧಿಸುವಂತೆ, ಶ್ರೀಸದ್ಗುರುಗಳು—'ದೇಹೇಂದ್ರಿಯಾದಿಪಂಚಕೋಶಗಳಿಗೂ ಬೇರೆಯಾಗಿರುವ ಪ್ರತ್ಯಕ್ಚೈತನ್ಯಸ್ವರೂಪನು ಆತ್ಮನು; ಇವನಲ್ಲಿಯೇ ಸಮಸ್ತ ದ್ವೈತಪ್ರಪಂಚವೂ, ಸ್ವಪ್ನಪ್ರಪಂಚದಂತೆ, ಕಲ್ಪಿತವಾಗಿರುತ್ತ ಆತ್ಮನು ವಾಸ್ತವವಾಗಿಯೂ ಅದ್ವಿತೀಯಾಖಂಡಚಿನ್ಮಾತ್ರಬ್ರಹ್ಮಸ್ವರೂಪನು'— ಎಂಬುದನ್ನು ತೋರಿಸಿಕೊಡುತ್ತಾರೆ. ಇಷ್ಟಾದರೂ, ಸಕ್ಕರೆಯನ್ನು ನಾಲಿಗೆಯಲ್ಲಿ ಹಾಕಿಕೊಂಡಲ್ಲದೆ ಅದರ ಸಿಹಿಯು ಅನುಭವಕ್ಕೆ ಬರುವುದಿಲ್ಲ; ಹಾಗೆಯೇ ಶಾಸ್ತ್ರಾಚಾರ್ಯೋಪದೇಶಗಳಿಂದ ನಿಶ್ಚಿತವಾಗಿ ತಿಳಿದುಬಂದಿರುವ ತನ್ನ ಅದ್ವಿತೀಯ—ಬ್ರಹ್ಮಾತ್ಮತತ್ತ್ವಸ್ವರೂಪವನ್ನು ತನ್ನ ಪ್ರಯತ್ನಗಳಿಂದ ಅನುಭವಸಿದ್ಧವನ್ನಾಗಿ ಮಾಡಿಕೊಳ್ಳಬೇಕು. ಇದಕ್ಕಾಗಿಯೇ ಯೋಗಶಾಸ್ತ್ರಗಳಲ್ಲಿ ವಿಹಿತಗಳಾಗಿರುವ—'ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣಸಮಾಧಿ'—ಗಳೆಂಬ ಅಷ್ಟಾಂಗಯೋಗಗಳು ಅವಶ್ಯವಾಗಿವೆ. ಶ್ರುತಿಯೂ ಸಹ—'ಶಾಂತೋ ದಾಂತ ಉಪರತಸ್ತಿತಿಕ್ಷುಃ ಸಮಾಹಿತಃ ಶ್ರದ್ಧಾವಿತ್ತೋ ಭೂತ್ವಾತ್ಮನ್ಯೇ—ವಾತ್ಮಾನಂ ಪಶ್ಯೇತ್ ।'—ಎಂದು ಇದನ್ನು ವಿಧಿಸುತ್ತದೆ.

ಈ ಕ್ರಮದಿಂದ ಪ್ರಾಣಾಯಾಮದ ಅಭ್ಯಾಸದಿಂದ ಕುಂಭಕದಲ್ಲಿ ನಿಂತು, ಮನಸ್ಸನ್ನು ಹೃದಯಕಮಲದಲ್ಲಿಯೋ, ಭ್ರೂಮಧ್ಯದಲ್ಲಿಯೋ, ನೆತ್ತಿಯ ಮೇಲಿನ ಬ್ರಹ್ಮರಂಧ್ರದಲ್ಲಿಯೋ ನಿಶ್ಚಲವಾಗಿಟ್ಟುಕೊಂಡು, ಗುರುದೇವತಾಭಕ್ತಿಪೂರ್ವಕವಾಗಿ ತತ್ತ್ವವನ್ನು ಧ್ಯಾನಮಾಡುವವರಿಗೆ ಆತ್ಮತತ್ತ್ವಸಾಕ್ಷಾತ್ಕಾರವು ಉದಯಿಸಿ, ಮುಕ್ತಿಯು ಸಿದ್ಧಿಸುವುದು. ಇಂಥ ಯೋಗಿಗಳು ಯಾವ ಆತ್ಮತತ್ತ್ವವನ್ನು ಧ್ಯಾನಿಸುತ್ತಾರೋ, ಆ ತತ್ತ್ವವನ್ನೇ ನಾವೂ ಭವಬಂಧದ ಮುಕ್ತಿಗಾಗಿ ಚಿಂತಿಸುತ್ತೇವೆ.

ಯಜ್ಜಾಗ್ರದಾದಿಸಮಯೇ ಧೃತವಿಶ್ವಮುಖ್ಯ—
ನಾಮಾತನೋತಿ ಬಹಿರಂತರವಸ್ತುಸೇವಾಂ ।
ಸುಪ್ತಾವಬೋಧಸಹಿತಸ್ಯ ಸುಖಸ್ಯ ಭೋಕ್ತೃ
ತದ್ಭಾವಯಾಮಿ ಸತತಂ ಭವಬಂಧಮುಕ್ತ್ಯೈ ॥೬॥

ಆತ್ಮನ ವಾಸ್ತವಸ್ವರೂಪವನ್ನು ವಿಶದಪಡಿಸುತ್ತಾರೆ. ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ—ಎಂಬ ಈ ಮೂರು ಅವಸ್ಥೆಗಳು ಎಲ್ಲರ ಅನುಭವದಲ್ಲಿಯೂ

Sri Vidyabharathi Book Centre, Sringeri

CC-O. In Public Domain. Digitized by eGangotri
ಇವೆ. ಚಕ್ಷುಸ್ಸು, ಶ್ರೋತ್ರ—ಮುಂತಾದ ಇಂದ್ರಿಯಗಳ ಮೂಲಕವಾಗಿ ಒಳ ಹೊರಗಿನ ವಸ್ತುಗಳ ವ್ಯವಹಾರವಾಗುವ ಸ್ಥಿತಿಯು ಜಾಗ್ರದವಸ್ಥೆಯು; ಈ ಜಾಗ್ರದವಸ್ಥೆಯನ್ನು ಅನುಭವಿಸುವ ಆತ್ಮನಿಗೆ 'ವಿಶ್ವ'ನೆಂದು ಶ್ರುತಿಯು ಹೆಸರಿಸಿದೆ. ಈ ಇಂದ್ರಿಯಗಳ ವ್ಯಾಪಾರವು ನಿಂತುಹೋಗಿ, ಜಾಗ್ರದವಸ್ಥೆಯ ಅನುಭವಗಳ ವಾಸನೆಗಳಿಂದ ಮನಸ್ಸಿನಲ್ಲಿ ಉಂಟಾಗುವ ವ್ಯವಹಾರದ ಅನುಭವವಾಗುವುದು ಸ್ವಪ್ನಾವಸ್ಥೆಯು; ಈ ಆತ್ಮನಿಗೆ 'ತೈಜಸ'ನೆಂದು ಹೆಸರು, ಮನಸ್ಸು ಲಯ ಹೊಂದಿ, ಅಜ್ಞಾನ ಮತ್ತು ಸುಖದ ಅನುಭವವು ಆಗುವ ಸ್ಥಿತಿಯು ಸುಷುಪ್ತಿಯು; ಸುಷುಪ್ತಿಯಿಂದ ಎಚ್ಚರವಾಗಿ ಜಾಗ್ರತ್ತಿಗೆ ಬಂದಾಗ—'ಇದುವರೆಗೂ ಏನನ್ನೂ ತಿಳಿಯಲಿಲ್ಲ, ಸುಖವಾಗಿದ್ದೆ'—ಎಂಬ ಅನುಭವವು ಆಗುವುದರಿಂದ, ಸುಷುಪ್ತಿಯಲ್ಲಿ ಅಜ್ಞಾನದ ಮತ್ತು ಸುಖದ ಅನುಭವವು ಇರುವುದು ಕಂಡುಬರುತ್ತದೆ; ಈ ಆತ್ಮನು 'ಪ್ರಾಜ್ಞ'ನೆನಿಸುವನು. ಈ ಮೂರು ಅವಸ್ಥೆಗಳೂ ಒಂದೊಂದಾಗಿ ಬಂದುಹೋಗುತ್ತಿರುವುದು ಎಲ್ಲರ ಅನುಭವದಲ್ಲಿಯೂ ಸ್ಪಷ್ಟವಾಗಿದೆ; ಒಂದು ಅವಸ್ಥೆಯ ಅನುಭವವು ಮತ್ತೊಂದರಲ್ಲಿರುವುದಿಲ್ಲ. ಇವೆಲ್ಲಕ್ಕೂ ಸಾಕ್ಷಿಯಾಗಿರುವ ಆತ್ಮನು ಈ ಅನುಭವಗಳ ಸಂಬಂಧವಿಲ್ಲದವನೆಂದು ಸ್ಪಷ್ಟವೇ ಆಗುವುದು. ಹೀಗೆ ಆತ್ಮನು ಸರ್ವಸಂಸಾರಸಂಬಂಧರಹಿತನಾಗಿ ನಿತ್ಯನಿರತಿಶಯಾನಂದಸ್ವರೂಪನೆಂದು ನಿಶ್ಚಿತವಾಗುವುದು. ಸಂಸಾರಬಂಧಮುಕ್ತಿಗಾಗಿ ಆತ್ಮನ ಈ ವಾಸ್ತವಸ್ವರೂಪವನ್ನೇ ನಿರಂತರವೂ ಧ್ಯಾನಮಾಡಬೇಕು.

ವಾಗಾದಯಃ ಸ್ವವಿಷಯೇಷು ಚರಂತಿ ಯೇನ
ಸಂಚೋದಿತಾಃ ಪ್ರಭುವರೇಣ ಯಥಾ ಸುಭೃತ್ಯಾಃ ।
ತತ್ಸರ್ವಕಾರ್ಯಕರಣವ್ಯವಹಾರಸಾಕ್ಷಿ
ಸಂಚಿಂತಯಾಮಿ ಸತತಂ ಭವಬಂಧಮುಕ್ತ್ಯೈ ॥೭॥

ಈ ದೇಹೇಂದ್ರಿಯಗಳಿಗೆ ಬೇರೆಯಾಗಿ ಆತ್ಮನು ಇರುವನೆಂಬುದೇ ಹಲವರಿಗೆ ತಿಳಿಯದು. ಶಾಸ್ತ್ರಜ್ಞರಲ್ಲಿಯೂ ಕೆಲವರು ಹೀಗೆಂದೇ ನಂಬಿರುವರು. ಯಂತ್ರಗಳಂತೆ ಈ ದೇಹವು ಕೆಲಸಮಾಡುತ್ತಿದೆಯೇ ಹೊರತು, ಇದಕ್ಕೆ ಬೇರೆಯಾಗಿ ಯಾವ ಆತ್ಮನೂ ಇಲ್ಲವೆಂದೇ ವೈಜ್ಞಾನಿಕಕುಶಲರೂ ನಿಶ್ಚಯಿಸಿದ್ದಾರೆ.

Sri Vidyabharathi Book Centre, Sringeri

 CC-0. In Public Domain. Digitized by eGangotri

ಆದರೆ, ಪ್ರಾಣಿಮಾತ್ರಕ್ಕೂ ಒಳಹೊರಗಿನ ವಿಷಯಗಳ ಅರಿವು ಆಗುತ್ತ, ಅದರ ನಿಮಿತ್ತದಿಂದ ಸುಖದುಃಖಗಳ ಅನುಭವವು ಆಗುವುದು ಪ್ರತ್ಯಕ್ಷವೇ ಇರುವುದು. ಜಡವಾದ ದೇಹೇಂದ್ರಿಯಗಳಿಗಾಗಲೀ, ಯಂತ್ರಗಳಿಗಾಗಲಿ ಇದು ಸಂಭವಿಸಲಾರದುದರಿಂದ, ಇವುಗಳ ಒಳಗೆ ಜ್ಞಾನಸ್ವರೂಪದ ಒಂದು ವಸ್ತುವು ಇರಬೇಕೆಂಬುದು ವಿಚಾರಪರರಿಗೆ ವಿಶದವಾಗುವುದು. ಈ ಜ್ಞಾನವಸ್ತುವೇ ಆತ್ಮನು. ಅಚೇತನವಸ್ತುಗಳು, ರಥಾದಿಗಳಂತೆ, ಚೇತನದ ಪ್ರೇರಣೆಯಿಲ್ಲದೆ ವ್ಯವಹಾರಸಮರ್ಥಗಳಾಗುವುದಿಲ್ಲ. ಅಚೇತನಗಳಾದ ವಾಗಾದೀಂದ್ರಿಯಗಳು ವ್ಯವಹಾರನಿರತವಾಗಿರುವುದು ಪ್ರತ್ಯಕ್ಷವಿರುವುದರಿಂದ, ಇವುಗಳಿಗೆ ಪ್ರೇರಕವಾದ ಚೇತನವು ಇರಬೇಕೆಂದು ನಿಶ್ಚಿತವಾಗುವುದು. ಹೊರಗಿನ ಚೇತನವು ಯಾವುದೂ ಕಂಡುಬರದಿರುವುದರಿಂದ, ಇದು ಒಳಗಿನದೆಂದೇ ದೃಢಪಡುವುದು. ಇದೇ ಜ್ಞಾನಸ್ವರೂಪವಾದ ಆತ್ಮನು. ಈ ಆತ್ಮನು ದೇಹೇಂದ್ರಿಯಾದಿಗಳ ವ್ಯಾಪಾರಗಳಿಗೆಲ್ಲ ಸಾಕ್ಷಿಯಾಗಿರುತ್ತ, ಇವುಗಳ ಸಂಬಂಧವಿಲ್ಲದೆ, ನಿತ್ಯನಿರ್ವಿಕಾರಾಸಂಗ ಚಿನ್ಮಾತ್ರಸ್ವರೂಪದ್ದಾಗಿದೆಯಾಗಿ, ಭವಬಂಧದ ಮುಕ್ತಿಗಾಗಿ ಆತ್ಮನ ಈ ಪರಮಾರ್ಥತತ್ತ್ವವನ್ನು ನಿರಂತರವೂ ಧ್ಯಾನಿಸತಕ್ಕದ್ದು.

ಸನ್ನ್ಯಸ್ಯ ಕರ್ಮನಿಚಯಂ ಚ ತದಂಗಭೂತಂ
ಸೂತ್ರಂ ಶಿಖಾಂ ಚ ಪುನರಪ್ಯಬಲಾದಿರಾಗಂ।
ಬೋಧಾಯ ಯಸ್ಯ ಯತತೇ ಪರಿಶುದ್ಧಚಿತ್ತಃ
ತದ್ಭಾವಯಾಮಿ ಸತತಂ ಭವಬಂಧಮುಕ್ತ್ಯೈ ॥೮॥

"ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಂ। ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ"—ಎಂಬ ಪ್ರಮಾಣವಚನಗಳಂತೆ, ಅನೇಕಜನ್ಮಗಳಲ್ಲಿ ನಿಷ್ಕಾಮಸ್ವಸ್ವವರ್ಣಾಶ್ರಮಶಾಸ್ತ್ರೀಯಧರ್ಮಗಳನ್ನು ಅನುಷ್ಠಿಸುತ್ತಬಂದು, ಸರ್ವದುರಿತವಾಸನೆಗಳೂ ತೊಲಗಿ ಅಂತಃಕರಣವು ಅತ್ಯಂತಪರಿಶುದ್ಧವಾಗಿ, ಸಂಸಾರದುಃಖವು ಮನಗಂಡುಬಂದು, ಸ್ರಕ್ಚಂದನವನಿತಾದಿಭೋಗಗಳಲ್ಲಿ ಆಸಕ್ತಿಯನ್ನು ತೊರೆದು, ತೀವ್ರವೂ, ದೃಢವೂ, ಶುದ್ಧವೂ, ಪೂರ್ಣವೂ ಆದ ವೈರಾಗ್ಯಸಂಪನ್ನನಾದವನು, ತತ್ತ್ವಜ್ಞಾನಕ್ಕೆ ಮುಖ್ಯಾಧಿಕಾರಿಯಾಗುವನು. ಆಗ ಇವನು ಕರ್ಮಾಂಗಗಳಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಖಾಯಜ್ಞೋಪವೀತಾದಿಗಳನ್ನೆಲ್ಲ ಯಥಾವಿಧಿಯಾಗಿ ಪರಿತ್ಯಜಿಸಿ, ಗುರೂಪದಿಷ್ಟವಾದ ತತ್ತ್ವದ ಅನುಭವಸಿದ್ಧಿಗಾಗಿ, ಯೋಗಾನುಷ್ಠಾನಪೂರ್ವಕವಾದ ನಿದಿಧ್ಯಾಸನಮಾಡಿ, ಅನುಭವಸಿದ್ಧನಾಗುವನು. ಇಂಥ ತತ್ತ್ವವನ್ನು ನಿರಂತರವೂ ಧ್ಯಾನಮಾಡುತ್ತೇನೆ

ಪದ್ಯಾಷ್ಟಕಂ ಪಠತಿ ಯೋಽರ್ಥವಿಬೋಧಪೂರ್ವಂ
ಸಂಚಿಂತಯನ್ನನುದಿನಂ ಪ್ರತಿಪಾದ್ಯವಸ್ತು ।
ಭಕ್ತ್ಯಾ ಯುತಃ ಕಲುಷದೂರನಿಜಾಂತರಂಗಃ
ತಸ್ಯಾಚಿರಾದ್ಧಿ ಭವಿತಾ ಭವಬಂಧಮುಕ್ತಿಃ ॥

ಈ ಎಂಟು ಪದ್ಯಗಳನ್ನು ಅರ್ಥಜ್ಞಾನಪೂರ್ವಕವಾಗಿ ಯಾರು ನಿತ್ಯವೂ ಪಠಿಸುತ್ತ, ಇದರಲ್ಲಿ ಪ್ರತಿಪಾದಿತವಾಗಿರುವ ಆತ್ಮತತ್ತ್ವವನ್ನು ಶ್ರದ್ಧಾಭಕ್ತಿ ಭರಿತನಾಗಿ ಚಿಂತಿಸುತ್ತ ಬರುವನೋ, ನಿರ್ಮಲಚಿತ್ತನಾದ ಅಂಥ ಪುರುಷ ಶ್ರೇಷ್ಠನಿಗೆ ಭವಬಂಧಮುಕ್ತಿಯು ಬೇಗನೆ ಕೈಗೂಡುವುದೆಂಬಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ಮೋಕ್ಷವೆಂಬ ಪರಮಪುರುಷಾರ್ಥಸಿದ್ಧಿಗೆ ಆತ್ಯವಶ್ಯವಾಗಿರುವ ಚಿತ್ತಶುದ್ಧಿಗೆ ನಿಷ್ಕಾಮಸ್ವಸ್ವವರ್ಣಾಶ್ರಮಧರ್ಮಾನುಷ್ಠಾನವೇ ಮುಖ್ಯಸಾಧನವಾಗಿರುವುದರಿಂದ, ಶ್ರೇಯಸ್ಕಾಮಿಗಳಾದ ವಿವೇಕವಂತರು ಸ್ವಧರ್ಮನಿತ್ಯರಾಗತಕ್ಕದ್ದೆಂದು ಶ್ರೀಗುರುಸಾರ್ವಭೌಮರು ಪರಮಹಿತವನ್ನು ಉಪದೇಶಿಸಿರುತ್ತಾರೆ.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯಶ್ರೀಮತ್ಸಚ್ಚಿದಾನಂದಶಿವಾಭಿನವನರಸಿಂಹಭಾರತೀಶ್ರೀಶೃಂಗಗಿರಿಜಗದ್ಗುರುಮಹಾಸ್ವಾಮಿಗಳವರಿಂದ ವಿರಚಿತವಾಗಿರುವ ಭವಬಂಧಮುಕ್ತ್ಯಷ್ಟಕವು ಶೃಂಗಗಿರಿ ಶ್ರೀಕವಿನರಸಿಂಹಶರ್ಮರ ತಾತ್ಪರ್ಯಾನುವಾದಸಹಿತವಾಗಿ ಸಮಾಪ್ತವಾದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶೃಂಗಗಿರಿಶ್ರೀಶಾರದಾಜದ್ಗುರುಪೀಠಾಧಿಪತಿ-
ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಗುರುವರ-
ಕರಕಮಲಸಂಜಾತಶ್ರೀಮಚ್ಚಂದ್ರಶೇಖರಭಾರತೀಮಹಾಸ್ವಾಮಿವಿರಚಿತಾ

ಶ್ರೀದೇಶಿಕೋತ್ಕರ್ಷಮಂಜರೀ

ಯದ್ವಕ್ತ್ರಾಬ್ಜನಿರೀಕ್ಷಣಾದನುಪಮಃ ಪಾಪೀ ಭವೇದ್ಧಾರ್ಮಿಕಃ
ಯದ್ವಾಚಾಮೃತಸೇಚನಾದಪಿ ಜಡಃ ಸ್ಯಾತ್ತತ್ತ್ವಬೋಧೇ
ಗುರುಃ ।
ಯತ್ಸಾನ್ನಿಧ್ಯಬಲಾದಿಯಂ ವಸುಮತೀ ಚಾಭೂತ್ಸತಾಮಾಸ್ಪದಂ
ಸ ಸ್ವಾಮೀ ಮಮ ದೇಶಿಕಸ್ತದಪರೋ ನಾಮ್ನಾಪಿ
ನಾಮ್ನಾಯತೇ ॥ ೧ ॥

ಶ್ರೀಮತ್ಸಚ್ಚಿದಾನಂದಶಿವಾಭಿನವನರಸಿಂಹಭಾರತೀಗುರುಸಾರ್ವಭೌಮರ ಮುಖಕಮಲವನ್ನು ದರ್ಶನಮಾಡುವ ಮಾತ್ರದಿಂದಲೇ ಅತ್ಯಂತ ಪಾಪಮಾಡಿದವನೂ ಸಹ ಅಸಮಾನಧರ್ಮನಿಷ್ಠನಾಗುವನು; ಅವರ ಉಪದೇಶಾಮೃತದ ಸೇಚನಮಾತ್ರದಿಂದಲೇ ಅತ್ಯಂತಜಡಬುದ್ಧಿಯವನೂ ಸಹ ತತ್ತ್ವವನ್ನು ಬೋಧಿಸುವ ಶ್ರೇಷ್ಠಗುರುವಾಗುವನು; ಶ್ರೀಗುರುವರ್ಯರು ಅಲಂಕರಿಸಿರವುದರಿಂದಲೇ ಈ ಭೂಮಿಯು ಸತ್ಪುರುಷರಿಗೆ ವಾಸಕ್ಕೆ ಯೋಗ್ಯವಾಗಿರುವುದು. ಶ್ರೀಮಚ್ಛಂಕರಭಗವತ್ಪಾದರವರು ತಮ್ಮ—'ಪ್ರಶ್ನೋತ್ತರ-ರತ್ನಾವಳಿ'—ಯೆಂಬ ಪ್ರಕರಣದಲ್ಲಿ—'ಕುತ್ರ ವಿಧೇಯೋ ವಾಸಃ ।'—'ಎಲ್ಲಿ ವಾಸಮಾಡುವುದು ಯೋಗ್ಯವು?'—ಎಂಬ ಪ್ರಶ್ನೆಗೆ—'ಸಜ್ಜನನಿಕಟೇಽಥವಾ ಕಾಶ್ಯಾಂ'—'ಸತ್ಪುರುಷರ ಸಹವಾಸವಿರುವಲ್ಲಿ, ಅಥವಾ ಶ್ರೀಕಾಶೀಕ್ಷೇತ್ರದಲ್ಲಿ' —ಎಂದು ಉತ್ತರ ಹೇಳಿರುತ್ತಾರೆ. ಕಾಶಿಯಲ್ಲಿ ಸತ್ಸಹವಾಸವು ದೊರೆಯಬಹುದೆಂಬ ಅಭಿಪ್ರಾಯದಿಂದ—'ಅಥವಾ ಕಾಶ್ಯಾಂ'—ಎಂದು ಹೇಳಿದ್ದೇ ಹೊರತು, ಸತ್ಸಹವಾಸವು ದೊರೆಯದಿದ್ದರೆ ಕಾಶೀವಾಸವೂ ಯುಕ್ತವಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವೆಂದು ತಾತ್ಪರ್ಯವು. "ಸಾಧುಸಂಗಮ ಏವಾತ್ರ ಪ್ರಥಮಂ ಸಾಧನಂ ಮತಂ'—ಎಂದು ಶ್ರೀಭಾಗವತದಲ್ಲಿಯೂ ಇದನ್ನೇ ಹೇಳಿರುತ್ತದೆ. ಇಂಥ ಮಹಾಮಹಿಮಶಾಲಿಗಳಾಗಿರುವ ಶ್ರೀಗುರುವರ್ಯರೇ ನಮಗೆ ಗುರುಗಳು; ಇತರರ ಹೆಸರನ್ನೂ ನಾವು ಹೇಳುವುದಿಲ್ಲ.

ಯೋ ಬಾಲ್ಯೇ ವಿಧಿವದ್ವಿಧೂಯ ಕುತುಕಾತ್ಕರ್ಮಾಣಿ
ಕರ್ಮಂದಿರಾಟ್
ಭೂತ್ವಾ ದ್ರಾಕ್ಸಮತೀತರನ್ನತಜನಾನ್ ಸಂಸಾರವಾರಾಂನಿಧಿಂ।
ಯಸ್ಯಾಸೀತ್ಕರುಣಾವಿಶೇಷಮನಿಶಂ ಪ್ರಾಣಿಷ್ವಶೇಷೇಷ್ವಪಿ
ಸ ಸ್ವಾಮೀ ಮಮ ದೇಶಿಕಸ್ತದಪರೋ ನಾಮ್ನಾಪಿ
ನಾಮ್ನಾಯತೇ ॥ ೨ ॥

ಶ್ರೀಗುರುವರ್ಯರು ತಮ್ಮ ಎಂಟನೆಯ ವಯಸ್ಸಿನ ಅತಿಬಾಲ್ಯದಲ್ಲಿಯೇ ಶಾಸ್ತ್ರವಿಧಿಗನುಸಾರವಾಗಿ ಪರಮವಿರಕ್ತಿಯಿಂದ ಪರಮಹಂಸಪಾರಿವ್ರಾಜ್ಯಾಶ್ರಮವನ್ನು ಸ್ವೀಕರಿಸಿ, ಪಾರಮಾರ್ಥಿಕಾದ್ವಿತೀಯಬ್ರಹ್ಮಾತ್ಮತತ್ತ್ವಾನುಭವಶಾಲಿಗಳಾಗಿ, ಸಕಲಸಂಸಾರಬಂಧನದಿಂದ ವಿಮುಕ್ತರಾಗಿ, ತಮ್ಮನ್ನು ಆಶ್ರಯಿಸುವ ಸಕಲರಲ್ಲಿಯೂ ಅತಿಶಯಕರುಣಾಳುಗಳಾಗಿ, ತತ್ತ್ವೋಪದೇಶದಿಂದ ಅವರನ್ನೆಲ್ಲ ಸಂಸಾರದುಃಖಸಾಗರದಿಂದ ಉದ್ಧಾರಮಾಡಿದರು; ಇಂಥ ಗುರುವರ್ಯರೇ ನಮಗೆ ದೇಶಿಕರು—ಇತರರ ಹೆಸರನ್ನೂ ನಾವು ಎತ್ತಲಾರೆವು.

ಯಃ ಸ್ವಾನುಗ್ರಹಕಾಂಕ್ಷಯಾ ನಿಜಪದಾಂಭೋಜಾತಯುಗ್ಮಂ
ಮುದಾ
ಸಂಪ್ರಾಪ್ತಾನ್ನಿವಿಧಾರ್ತಿಪೀಡಿತಜನಾನ್ಪ್ರೀತ್ಯಾನುಗೃಹ್ಣನ್
ಸ್ಥಿತಃ।
ಯದ್ವಕ್ತ್ರಂ ನತಕಷ್ಟಬೋಧಸಮಯೇ ಶುಷ್ಕಂ ಭವೇದಂಜಸಾ
ಸ ಸ್ವಾಮೀ ಮಮದೇಶಿಕಸ್ತದಿತರೋ ನಾಮ್ನಾಪಿ
ನಾಮ್ನಾಯತೇ ॥ ೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀದೇಶಿಕೇಂದ್ರರು, ತಮ್ಮ ಅನುಗ್ರಹವನ್ನು ಪಡೆಯುವ ಆಸೆಯಿಂದ ತಮ್ಮ ಪಾದಕಮಲಗಳನ್ನು ಆಶ್ರಯಿಸಿಬರುವವರ ನಾನಾವಿಧಗಳಾದ ಕಷ್ಟ ಕಾರ್ಪಣ್ಯಗಳನ್ನೂ ಪರಿಹರಿಸುವರು; ತಮಗೆ ಶರಣುಬಂದವರ ಕಷ್ಟಗಳನ್ನು ಕೇಳಿ, ಅವರ ಮುಖವು ದುಃಖಾತಿರೇಕದಿಂದ ಬಾಡಿಹೋಗುತ್ತಿತ್ತು; ಇಂಥ ಶ್ರೀಗುರುಮೂರ್ತಿಗಳನ್ನಲ್ಲದೆ, ಬೇರೆಯವರ ಹೆಸರನ್ನಾದರೂ ನಾವು ಹೇಳುವುದು ಅಯುಕ್ತವೇ ಸರಿ.

ಭಕ್ತಿರ್ಯಸ್ಯ ಗುರೌ ನಿತಾಂತಮಭವದ್ಯಸ್ಯಾಃ ಪ್ರಭಾವಾತ್ಸದಾ
ಸಂತುಷ್ಟಃ ಸ್ವಸಮೀಪಮಾಗತವತಸ್ತುಷ್ಟಾಂತರಂಗಾನ್ವ್ಯಧಾತ್।
ಯಸ್ಯಾಸೀಚ್ಚ ದೃಢಾ ಮತಿಃ ಶ್ರುತಿತತೌ ತನ್ಮಾರ್ಗಸಂರಕ್ಷಣೇ
ಸ ಸ್ವಾಮೀ ಮಮ ದೇಶಿಕಸ್ತದಪರೋ ನಾಮ್ನಾಪಿ
ನಾಮ್ನಾಯತೇ ॥ ೪ ॥

ಶ್ರೀಗುರುವರ್ಯರಿಗೆ ತಮ್ಮ ಗುರುಸಾರ್ವಭೌಮರಲ್ಲಿ ಅತ್ಯಂತಭಕ್ತಿಯಿತ್ತು; ಅದರ ಬಲದಿಂದಲೇ ಸಂತೃಪ್ತರಾಗಿರುತ್ತ, ತಮ್ಮಲ್ಲಿಗೆ ಬರುವ ಶಿಷ್ಯವರ್ಗವನ್ನೂ ತೃಪ್ತಿಗೊಳಿಸುತ್ತಿದ್ದರು; ಶ್ರೀಶ್ರೀಗಳವರಿಗೆ ಶ್ರುತಿಯಲ್ಲಿ ನಿರತಿಶಯವಾದ ಶ್ರದ್ಧೆಯು ಇದ್ದು, ಶ್ರುತಿವಿಹಿತವಾಗಿರುವ ವೈದಿಕಸನಾತನ ವರ್ಣಾಶ್ರಮದ ರಕ್ಷಣೆಯಲ್ಲಿ ಯಾವಾಗಲೂ ಆದರವುಳ್ಳವರಾಗಿ, ಪ್ರಯತ್ನಪರರಾಗಿದ್ದರು; ಇಂಥ ಜಗತೀಗುರುವರ್ಯರನ್ನು ಬಿಟ್ಟು, ಬೇರೆಯವರ ಹೆಸರನ್ನಾದರೂ ಹೇಳಬೇಕೇಕೆ ? ಧರ್ಮರಕ್ಷಕರೇ ನಿಜವಾದ ಜಗದ್ಗುರುಗಳು.

ಕೀರ್ತಿರ್ಯಸ್ಯ ದಿಗಂಗನಾಪ್ರಿಯಸಖೀ ಮೂರ್ತಿಶ್ಚ ಹೇಮಾಕೃತಿಃ
ಸ್ಫೂರ್ತಿರ್ದೇವಗುರುಂ ಸದೋಪಹಸತೀವಾರ್ತಿಂ
ನತಾನಾಂ ಜವಾತ್ ।
ಪೂರ್ತಿಶ್ಚಾಪಿ ದಯಾರಸಸ್ಯ ಹರತೇ ಸೂಕ್ತಿಃ ಸುಧಾಸ್ಯಂದಿನೀ
ಸ ಸ್ವಾಮೀ ಮಮ ದೇಶಿಕಸ್ತದಪರೋ ನಾಮ್ನಾಪಿ
ನಾಮ್ನಾಯತೇ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಗುರುವರ್ಯರ ಕೀರ್ತಿಯು ದಿಗಂಗನೆಯರ ಗೆಳತಿಯಾಗಿತ್ತು—ಎಂದರೆ ಹತ್ತು ದಿಕ್ಕುಗಳ ಕಡೆಯವರೆಗೂ ವ್ಯಾಪಿಸಿತ್ತು; ದೇಹವು ಹೊಂಬಣ್ಣದಿಂದ ಬೆಳಗುತ್ತಿತ್ತು; ಪ್ರಜ್ಞಾಪ್ರತಿಭೆಗಳು ದೇವಗುರುಗಳಾದ ಬೃಹಸ್ಪತಿಗಳನ್ನೂ ಅಪಹಾಸ್ಯಮಾಡುತ್ತ ಅಧಿಕವಾಗಿತ್ತು; ಶರಣಾಗತರಾಗಿ ಬರುವ ಭಕ್ತರ ಪೀಡೆಗಳನ್ನು ಶೀಘ್ರವಾಗಿ ಪರಿಹರಿಸುವವರು; ದುಃಖಿತರಾದವರ ಕಷ್ಟವನ್ನು ಪರಿಹರಿಸುವ ದಯಾಪೂರ್ಣರಾಗಿದ್ದರು; ಅವರ ಉಪದೇಶದ ವಚನಗಳು ಅಮೃತದಂತೆ ಎಲ್ಲರಿಗೂ ಪರಮಾನಂದಕರಗಳು; ಇಂಥ ಗುರುವರ್ಯರನ್ನಲ್ಲದೆ ಬೇರೆಯವರ ಹೆಸರೂ ನಮಗೆ ಬೇಕಿಲ್ಲ.

ಈ ಪದ್ಯದಲ್ಲಿ ಶಬ್ದಪ್ರಾಸಾಲಂಕಾರವು ಮನೋಹರವಾಗಿದೆ.

ತುಂಗಾತೀರಲಸತ್ತಪೋವನಭುವಿ ಸ್ವೈರಂ ಚರನ್ನನ್ವಹಂ
ಗಂಗಾವಾರಿಲಸಜ್ಜಟಾವಿಲಸಿತಂ ಚಿತ್ತೇ ಮುದಾ ಭಾವಯನ್ ।
ತುಂಗಾನಂದವಿಧಾಯಕಃ ಪ್ರಣಮತಾಂ ಶೃಂಗಾದ್ರಿವಾಸಪ್ರಿಯಃ
ಸ ಸ್ವಾಮೀ ಮಮ ದೇಶಿಕಃ ತದಿತರೋ ನಾಮ್ನಾಪಿ ನಾಮ್ನಾಯತೇ ॥ ೬ ॥

ಪಾವನೆಯಾದ ತುಂಗಭದ್ರಾನದಿಯ ದಡದಲ್ಲಿ ಶೋಭಿಸುತ್ತಿರುವ ತಪೋವನದಲ್ಲಿ ಆನಂದದಿಂದ ವಿಹರಿಸುತ್ತ ; ಶ್ರೀಗಂಗಾನದಿಯಿಂದ ಅಲಂಕೃತವಾಗಿರುವ ಜಟೆಯಿಂದ ವಿರಾಜಿಸುವ ಶ್ರೀಪರಮೇಶ್ವರನನ್ನು ನಿರಂತರವೂ ಚಿತ್ತದಲ್ಲಿ ಧ್ಯಾನಿಸುತ್ತ ; ಭಕ್ತಜನರಿಗೆ ಅಪಾರವಾದ ಮೋಕ್ಷಾನಂದವನ್ನು ಅನುಗ್ರಹಿಸುತ್ತ ; ಶ್ರೀಶೃಂಗಗಿರಿಕ್ಷೇತ್ರದಲ್ಲಿ ವಾಸಿಸುತ್ತಿರುವ ಶ್ರೀಗುರುದೇವರನ್ನು ಬಿಟ್ಟು, ಬೇರಾರ ಹೆಸರೂ ನಮಗೆ ಅನವಶ್ಯಕವು.

ಇಲ್ಲಿಯೂ ಶಬ್ದಾಲಂಕಾರವು ಶೋಭಿಸುತ್ತಿದೆ.

ಕಪಿಲಮಹರ್ಷಿಗಳ ಕೋಪಾಗ್ನಿಗೆ ತುತ್ತಾಗಿ ಭಸ್ಮವಾಗಿಹೋಗಿದ್ದ ಸಗರಚಕ್ರವರ್ತಿಯ ಅರವತ್ತು ಸಹಸ್ರ ಮಕ್ಕಳ ಸದ್ಗತಿಗಾಗಿ ಭಗೀರಥನು ಬ್ರಹ್ಮಲೋಕದಿಂದ ಬರಮಾಡಿಕೊಂಡ ಪರಮಪವಿತ್ರಳಾದ ಶ್ರೀಗಂಗಾನದಿಯು ಭೂಮಂಡಲವನ್ನೇ ಭೇದಿಸುವ ವೇಗದಿಂದ ಭೂಮಿಗೆ ಬಿದ್ದಾಗ, ಆ ಗಂಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಜಟೆಯಲ್ಲಿ ಬಂಧಿಸಿ, ಶ್ರೀಪರಶಿವನು, ಇತರಾರಿಂದಲೂ ಆಗದಿದ್ದ ಈ ಜಗದ್ರಕ್ಷಣೆಯನ್ನು ಮಾಡಿರುವುದು ಸರ್ವಪ್ರಸಿದ್ಧವಿದೆ.

ಯಸ್ಯಾಸ್ತಿಕ್ಯಮಭೂದಶೇಷಜನತಾವಿಸ್ಮಾಪಕಂ ಭೂತಲೇ
ಯತ್ಕರ್ಮಾಚರಣಪ್ರವೃತ್ತಿರಭವನ್ಮುಖ್ಯಂ ಪ್ರಮಾಣಂ ನೃಣಾಂ ।
ಯತ್ಕ್ಷಾಂತ್ಯಾ ವಸುಧಾ ಮುಮೋಚ ತರಸಾ ಸರ್ವಂಸಹತ್ವಪ್ರಥಾಂ
ಸ ಸ್ವಾಮೀ ಮಮ ದೇಶಿಕಸ್ತದಪರೋ ನಾಮ್ನಾಪಿ ನಾಮ್ನಾಯತೇ ॥ ೭ ॥

ಶ್ರೀಗುರುವರ್ಯರಲ್ಲಿ ಆಸ್ತಿಕ್ಯವು, ಲೋಕದ ಸರ್ವರೂ ಆಶ್ಚರ್ಯ ಪಡುವಂಥದ್ದಾಗಿತ್ತು; ಶ್ರೀಗುರುವರ್ಯರ ಕರ್ಮಾನುಷ್ಠಾನದ ಕ್ರಮವೇ ಎಲ್ಲರಿಗೂ ಅದರಲ್ಲಿ ಮುಖ್ಯಪ್ರಮಾಣವಾಗಿತ್ತು; ಜನಗಳು ತಮಗೆ ಮಾಡುವ ಎಲ್ಲ ಅಪರಾಧಗಳನ್ನೂ ಸಹಿಸಿಕೊಂಡು, ಪ್ರತಿಯಾಗಿ ಏನನ್ನೂ ಮಾಡದೆ, ಭೂದೇವಿಯು—"ಸರ್ವಂಸಹಾ"—ಎಂಬ ಬಿರುದಿನಿಂದ ಶೋಭಿಸುತ್ತಿದ್ದಾಳೆ; ಆದರೆ, ನಮ್ಮ ಶ್ರೀಗುರುವರ್ಯರ ಈ ಸಹನಸ್ವಭಾವವನ್ನು ಕಂಡು ಭೂದೇವಿಯು ತನ್ನ ಈ ಪ್ರಸಿದ್ಧಿಯನ್ನು ಕಳೆದುಕೊಂಡಳೋ—ಎಂಬಂತೆ, ಶ್ರೀಗುರವರ್ಯರು ಅಪಾರಸಹನಶೀಲರಾಗಿದ್ದರು. 'ನಮಃ ಸಹಮಾನಾಯ' —ಎಂದು ಶ್ರೀಪರಮೇಶನು 'ಸಹಮಾನ'ನೆಂದು ಶ್ರುತಿಪ್ರಸಿದ್ಧನಾಗಿದ್ದಾನೆ; ಶ್ರೀಗುರುವರ್ಯರೂ ಸಾಕ್ಷಾತ್ಪರಶಿವಾವತಾರರೇ ಅಲ್ಲವೆ ?

ಆತ್ಮಾನಾತ್ಮವಿವೇಚನೇsತಿಚತುರೋ ಮಿಥ್ಯಾತ್ವಮಾಪಾದಯನ್
ದ್ವೈತಸ್ಯಾತ್ಮನಿ ಸತ್ಯತಾಮತಿದೃಢಾಂ ಸಂಪಾದಯನ್ ಶಾಸ್ತ್ರತಃ ।
ಯಸ್ತತ್ತ್ವಂ ಮನಸಾ ವಿಚಿತ್ಯ ನಿತರಾಂ ಲೇಭೇsನುಭೂತಿಂ ನಿಜಾಂ
ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ ನಾಮ್ನಾಯತೇ ॥ ೮ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀದೇಶಿಕಾಧೀಶ್ವರರು ಆತ್ಮ ಮತ್ತು ಅನಾತ್ಮ—ಇವುಗಳನ್ನು ಬೇರೆ ಮಾಡಿ ತಿಳಿಯುವುದರಲ್ಲಿ ಪರಮಚತುರರಾಗಿದ್ದು, ಅನಾತ್ಮವಾದ ಸಕಲ ದ್ವೈತವನ್ನೂ ಅವಾಸ್ತವವೆಂದು ನಿಶ್ಚಯಿಸಿ, ಅದ್ವಿತೀಯಾತ್ಮತತ್ತ್ವವನ್ನು ಶಾಸ್ತ್ರಾನುಸಾರವಾಗಿ ದೃಢವಾಗಿ ತಿಳಿದು, ನಿರಂತರವೂ ಅದನ್ನು ನಿದಿಧ್ಯಾಸನ ಮಾಡಿ, ಅದ್ವಿತೀಯಾತ್ಮತತ್ತ್ವವನ್ನು ಅನುಭವರೂಪವಾಗಿ ಸಾಕ್ಷಾತ್ಕರಿಸಿ ಕೊಂಡು ಜೀವನ್ಮುಕ್ತರಾಗಿ ವಿರಾಜಿಸಿದ ಮಹಾಜ್ಞಾನಿವರ್ಯರು ; ಇಂಥ ಗುರುವರ್ಯರೇ ನಮಗೆ ಆಚಾರ್ಯರು ; ಇತರರ ಹೆಸರೂ ನಮಗೆ ಬೇಡ.

ಶಾಸ್ತ್ರಾರ್ಥಾನ್ ಬಹುಧಾ ವಿಚಾರ್ಯ ವಿಬುಧೈಃ ಸಾಕಂ
ವಿನೇಯಾನಲಂ
ಸಂಬೋಧ್ಯ ಶ್ರುತಿಭಿಸ್ತದಂಗನಿಚಯೈಸ್ತರ್ಕೈಸ್ತದಂತರ್ಗತೈಃ ।
ನಿಶ್ಚಿತ್ಯ ಸ್ವಯಮಾತ್ಮತತ್ತ್ವಮಖಿಲಾಂಶ್ಚಕ್ರೇ ಸುಬೋಧಾನ್
ಸುಖಂ
ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ
ನಾಮ್ನಾಯತೇ ॥ ೯ ॥

ಷಡಂಗಸಹಿತಗಳಾದ ನಾಲ್ಕು ವೇದಗಳ ಪರಮತಾತ್ಪರ್ಯಾರ್ಥವನ್ನು ಉಪಕ್ರಮೋಪಸಂಹಾರಾದಿತಾತ್ಪರ್ಯನಿರ್ಣಾಯಕನ್ಯಾಯಪೂರ್ವಕವಾಗಿ, ವಿಚಾರಮಾಡಿ, ದೃಢವಾಗಿ ನಿಶ್ಚಯಿಸಿಕೊಂಡು, ಶ್ರೀಗುರುಸಾರ್ವಭೌಮರು, ತಮ್ಮ ಶಿಷ್ಯರಿಗೆಲ್ಲ ಅನಾಯಾಸವಾಗಿ ಬೋಧಿಸಿ ತತ್ತ್ವಜ್ಞರನ್ನಾಗಿ ಮಾಡಿ, ಸಂಸಾರಸಾಗರದಿಂದ ಉದ್ಧರಿಸಿದರು; ಇಂಥ ಶ್ರೀಗುರುವರ್ಯರೇ ನಮಗೆ ಆಚಾರ್ಯರು—ಇತರರೇಕೆ ?

ಉತ್ಪಾದ್ಯಾತ್ಮವಿದಗ್ರಜನ್ಮಭವನೇ ಗರ್ಭಾಷ್ಟಮೋ ಸಂಸ್ಕೃತೋ
ಯಃ ಪೂರ್ವಾರ್ಜಿತಪುಣ್ಯಪುಂಜವಿಭವೈಃ ಸಂಪ್ರಾಪ್ತತು-
ರ್ಯಾಶ್ರಮಃ ।
ವೈರಾಗ್ಯಾದಿಭಿರಪ್ಯುತ್ಕೃಷ್ಟೈರ್ಗುಣಗಣೈಃ ಶ್ರೀಶಂಕರಾರ್ಯೋಽಪರಃ
ಸ ಸ್ವಾಮೀ ಮಮ ದೇಶಿಕಸ್ತದಪರೋ ನಾಮ್ನಾಪಿ
ನಾಮಾಯ್ನತೇ ॥ ೧೦ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರಭಗವತ್ಪಾದರಂತೆಯೇ, ಆತ್ಮತತ್ತ್ವಾನುಭವಶಾಲಿಗಳಾಗಿರುವ ಬ್ರಾಹ್ಮಣೋತ್ತಮರ ವಂಶದಲ್ಲಿ ಜನಿಸಿ, ಶ್ರೀಗುರುವರ್ಯರು, ಎಂಟನೆಯವಯಸ್ಸಿನಲ್ಲಿ ಉಪನಯನಸಂಸ್ಕಾರವನ್ನು ಪಡೆದು, ಪೂರ್ವಜನ್ಮಗಳ ಅಪಾರ ಪುಣ್ಯರಾಶಿಯ ಫಲವಾಗಿ ಸಂಸಾರದಲ್ಲಿ ಪೂರ್ಣವಿರಕ್ತಿಸಂಪನ್ನರಾಗಿ ಪುಣ್ಯೈಕಲಭ್ಯವಾಗಿರುವ ಪರಮಹಂಸಪಾರಿವ್ರಾಜ್ಯವನ್ನು ಸತ್ಸಂಪ್ರದಾಯಜ್ಞರಾದ ಆಚಾರ್ಯವರ್ಯರ ಅನುಗ್ರಹದಿಂದ ಹೊಂದಿ, ಜೀವನ್ಮುಕ್ತರಾಗಿ ವಿರಾಜಿಸಿದರು; ಇವರಲ್ಲದೆ ನಮಗೆ ಆಚಾರ್ಯರು ಬೇರೆ ಯಾರು ?

ಯಃ ಕಲ್ಯಾಣಪುರೇ ವಿಶಾಲಮತುಲಂ ನಿರ್ಮಾಪ್ಯ ಕಂಚಿನ್ಮಠಂ
ಸದ್ವಿದ್ಯಾಪ್ರಚಯಾಯ ತತ್ರ ವಿದುಷಃ ಸಾಕಂ
ಮಹಾಧ್ಯೇತೃಭಿಃ ।
ಸಂಸ್ಥಾಪ್ಯಾಶನವಸ್ತ್ರವಾಸನಿಲಯಾನ್ ದತ್ವಾತ್ಮವಿದ್ಯಾಮಪಾತ್
ಸ ಸ್ವಾಮೀ ಮಮ ದೇಶಿಕಸ್ತದಪರೋ ನಾವಾ್ನಪಿ
ನಾವಾ್ನಯತೇ ॥ ೧೧ ॥

ವೈದಿಕಧರ್ಮಸಂಸ್ಥಾಪನೆಯ ತಮ್ಮ ಜಗದ್ಗುರುತ್ವದ ಕರ್ತವ್ಯಭಾರವನ್ನು ನಿರ್ವಹಿಸುತ್ತ ಶ್ರೀಗುರುವರ್ಯರು, ಇದಕ್ಕಾಗಿಯೇ, ಕಲ್ಯಾಣಪುರವೆಂದು ಪ್ರಸಿದ್ಧವಾಗಿರುವ ಬೆಂಗಳೂರುನಗರದಲ್ಲಿ ವಿಶಾಲವೂ ಅಸದೃಶವೂ ಆದ ಶ್ರೀಶಂಕರಮಠವೆಂಬ ಭವ್ಯವಾದ ಮಠವನ್ನು ನಿರ್ಮಾಣಮಾಡಿಸಿ, ಅಲ್ಲಿ ಅಶನ, ವಸನ, ವಾಸಗೃಹಗಳೊಡನೆ ಯೋಗ್ಯರಾದ ವಿದ್ಯಾರ್ಥಿಗಳ ಸಹಿತವಾಗಿ ಉತ್ತಮರಾದ ಪಂಡಿತರುಗಳನ್ನು ಏರ್ಪಡಿಸಿ,—"ಭಾರತೀಯಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀಪಾಠಶಾಲೆಯೆಂಬ ಮಹಾವಿದ್ಯಾಲಯವನ್ನು ಸ್ಥಾಪಿಸಿ, ಪ್ರೌಢವಾದ ಪೂರ್ವೋತ್ತರಮೀಮಾಂಸಾಶಾಸ್ತ್ರಗಳ ಶಾಸ್ತ್ರೀಯಾಭ್ಯಾಸಗಳಿಗೆ ಅವಕಾಶಮಾಡಿಕೊಟ್ಟು, ಮುಖ್ಯವಾದ ಆತ್ಮವಿದ್ಯೆಯನ್ನು ರಕ್ಷಿಸಿದರು; ಇವರೇ ಜಗದೇಕಸದ್ಗುರುಸಾರ್ವಭೌಮರು—ಇತರರ ವಿಚಾರ ವೇತಕ್ಕೆ ?

ಶುದ್ಧಾದ್ವೈತಮತಪ್ರಚಾರಣಕೃತೇ ವಾದೇನ ಜಿತ್ವಾ ತು ಯಾಂ
ಶೃಂಗಾದ್ರೌ ವರಚಕ್ರರಾಜನಿಲಯಾಂ ಚಕ್ರೇ ಜಗದ್ದೇಶಿಕಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಯಸ್ತಸ್ಯೈ ನಿರಮೀಮಪಯದ್ದೃಢತರಂ ಕಾಂತಂ ಶಿಲಾಮಂದಿರಂ
ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ
ನಾಮ್ನಾಯತೇ ॥ ೧೨ ॥

ಪರಮಪ್ರಮಾಣವಾದ ವೇದಪ್ರತಿಪಾದಿತವಾಗಿರುವ ಶುದ್ಧಾದ್ವೈತ ಮತದ ಪ್ರಚಾರಕ್ಕಾಗಿ, ಶ್ರೀಮದ್ಭಗವತ್ಪಾದಜಗದ್ಗುರುಸಾರ್ವಭೌಮರು, ಸರ್ವವಿದ್ಯಾವಿಶಾರದೆಯಾಗಿರುವ ಶ್ರೀಶಾರದಾದೇವಿಯನ್ನೂ ವಾದದಲ್ಲಿ ಜಯಿಸಿ ಒಲಿಸಿಕೊಂಡು, ಶ್ರೀಶೃಂಗಗಿರಿಯಲ್ಲಿ ಶ್ರೇಷ್ಠವಾದ ಶ್ರೀಚಕ್ರದಲ್ಲಿ ಪ್ರತಿಷ್ಠಿಸಿದರು; ಶ್ರೀಶಾರದಾದೇವಿಗೆ ದೃಢತರವೂ ಸುಂದರವೂ ಆಗಿರುವ ಶಿಲಾಮಯದೇವಾಲಯವನ್ನು ನಿರ್ಮಾಣಮಾಡಿಸಿರುವ ಶ್ರೀಗುರುವರ್ಯರೇ ಶ್ರೇಷ್ಠಗುರುವರ್ಯರು, ಇವರನ್ನಲ್ಲದೆ ಇತರರ ಹೆಸರೂ ನಮಗೆ ಬೇಡ.

ಯಃ ಶ್ರೀಶಂಕರದೇಶಿಕೇಂದ್ರಜನನಸ್ಥಾನಂ ವಿದಿತ್ವಾ ಚಿರಾತ್
ಕೃತ್ವಾ ಚಾತ್ಮವಶಂ ಮುದಾ ಧನಚಯೈರ್ನಿರ್ಮಾಪ್ಯ
ಸನ್ಮಂದಿರಂ
ತತ್ರ ಸ್ಥಾಪಯತಿಸ್ಮ ಶಂಕರಗುರೋರ್ದೇವ್ಯಾಶ್ಚ ಮೂರ್ತೀಂ ಗಿರಾಂ
ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ
ನಾಮ್ನಾಯತೇ ॥ ೧೩ ॥

ಶ್ರೀಗುರುವರ್ಯರು ಕೇರಳದೇಶದಲ್ಲಿನ ಶ್ರೀಶಂಕರಭಗವತ್ಪಾದರವರ ಜನ್ಮಸ್ಥಳವಾದ ಕಾಲಟೀಅಗ್ರಹಾರವನ್ನು ಮಹಾಪ್ರಯಾಸದಿಂದ ಪತ್ತೆಹಚ್ಚಿ ವಶಪಡಿಸಿಕೊಂಡು, ಶ್ರೀಭಗವತ್ಪಾದರವರ ಸೇವಾದಿಗಳಿಂದ ಎಲ್ಲರೂ ಶ್ರೇಯೋವಂತರಾಗಲು ಅನುಕೂಲಿಸುವಂತೆ, ಅಲ್ಲಿ ಭವ್ಯಗಳಾದ ಮಂದಿರಗಳನ್ನು ಕಟ್ಟಿಸಿ, ಶ್ರೀಭಗವತ್ಪಾದರ ಮತ್ತು ಶ್ರೀಶಾರದಾದೇವಿಯ ದಿವ್ಯಮೂರ್ತಿಗಳನ್ನು ಪ್ರತಿಷ್ಠಿಸಿ ಭಕ್ತವರ್ಗವನ್ನು ಅನುಗ್ರಹಿಸಿರುತ್ತಾರೆ. ಇವರಲ್ಲದೆ ಜಗದೇಕಸದ್ಗುರುಸಾರ್ವಭೌಮರು ಬೇರೆ ಯಾರಿದ್ದಾರೆ !

Sri Vidyabharathi Book Centre, Sringeri

CC-0. In Public Domain. Digitized by eGangotri

ಸತ್ಯಂ ವಾಚಿ ದಯಾ ನತೇಷು ಪಟುತಾ ಧರ್ಮಾಧ್ವಸಂರಕ್ಷಣೇ
ಸೌಜನ್ಯಂ ಸುಜನೇ ಭೃಶಂ ವಿಮುಖತಾ ದುಷ್ಟೇಷು ಯಸ್ಯಾ-
ಭವತ್ ।
ರಕ್ತಿರ್ಬ್ರಹ್ಮಣಿ ನಿಂದಿತೇಷು ವಿಷಯೇಷ್ವಾಸೀದ್ವಿರಕ್ತಿರ್ದೃಢಾ
ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ
ನಾಮ್ನಾಯತೇ ॥ ೧೪ ॥

ಶ್ರೀಗುರುವರ್ಯರ ಮಾತಿನಲ್ಲಿ ಯಾವಾಗಲೂ ಸತ್ಯವೂ; ಇವರಿಗೆ ಶರಣಾಗತರಲ್ಲಿ ದಯೆಯೂ; ಧರ್ಮಮಾರ್ಗದ ರಕ್ಷಣೆಯಲ್ಲಿ ಪಟುತ್ವವೂ; ಧರ್ಮನಿಷ್ಠರಾದ ಸಜ್ಜನರಲ್ಲಿ ಪ್ರೀತಿಯೂ; ಧರ್ಮರಹಿತರಾದ ದುಷ್ಟರಲ್ಲಿ ವೈಮುಖ್ಯವೂ; ಪರಬ್ರಹ್ಮದಲ್ಲಿ ಪರಮಾಸಕ್ತಿಯೂ, ನಿಂದ್ಯಗಳಾದ ವಿಷಯಗಳಲ್ಲಿ ದೃಢವಾದ ವಿರಕ್ತಿಯೂ ನಿತ್ಯವೂ ಶೋಭಿಸುತ್ತಿತ್ತು. ಇಂಥ ಜಗದೇಕಸದ್ಗುರುಗಳನ್ನಲ್ಲದೆ, ಇತರರ ಹೆಸರನ್ನೂ ನಾವು ಹೇಳಲಾರೆವು.

ಯಸ್ಯಾಸೀದ್ದೃಢಭಾವನಾ ಪಥಿ ಕೃತಾಸ್ವೇಧೋಮೃದಶ್ಮಾದಿಭಿ-
ರ್ದೇವಾನಾಂ ಪ್ರತಿಮಾಸು ದೃಷ್ಟಿವಿಷಯಂ ಯಾತಾಸ್ವ-
ಕಸ್ಮಾದಪಿ ।
ಪೂಜಾಸ್ತೋತ್ರಜಪಾದಿಕರ್ಮಸು ದೃಢಾ ತಾದಾತ್ಮ್ಯಧೀರಂಜಸಾ
ಸ ಸ್ವಾಮೀ ಮಮ ದೇಶಿಕಸ್ತದಿತರೋ ನಾಮ್ನಾಪಿ
ನಾಮ್ನಾಯತೇ ॥ ೧೫ ॥

ದಾರಿಯಲ್ಲಿ ಹೋಗುವಾಗ, ಎಲ್ಲಿಯಾದರೂ, ಅಕಸ್ಮಾತ್ತಾಗಿ, ಮರದ, ಮಣ್ಣಿನ, ಲೋಹದ, ಅಥವಾ ಕಲ್ಲಿನ ದೇವತಾಪ್ರತಿಮೆಗಳನ್ನು ಕಂಡರೂ, ಆ ದೇವತೆಗಳ ಪೂಜೆ, ಸ್ತೋತ್ರ, ಜಪಮುಂತಾದ—ಕರ್ಮಗಳನ್ನು ಅನುಷ್ಠಿಸುತ್ತಾ ಶ್ರೀಗುರುವರ್ಯರು ಆಯಾದೇವತೆಗಳಲ್ಲಿ ತಾದಾತ್ಮ್ಯಭಾವನೆಯಿಂದ ತನ್ಮಯರೇ ಆಗುತ್ತಿದ್ದರು! ಇಂಥ ಶ್ರೀಸದ್ಗುರುವರ್ಯರೇ ನಮಗೆ ನಿತ್ಯಾರಾಧ್ಯರೇ ಹೊರತು, ಇತರರಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇತಿ, ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರುಪೀಠಾಧಿಪತಿಶ್ರೀಮತ್ಸ-ಚ್ಚಿದಾನಂದಶಿವಾಭಿನವನರಸಿಂಹಭಾರತೀಗುರುವರಕರಕಮಲಸಂಜಾತಶ್ರೀಮ-ಚ್ಚಂದ್ರಶೇಖರಭಾರತೀಮಹಾಸ್ವಾಮಿವಿರಚಿತಾ ಶ್ರೀದೇಶಿಕೋತ್ಕರ್ಷಮಂಜರೀ, ಶೃಂಗಗಿರಿ ಶ್ರೀಕವಿನರಸಿಂಹಶರ್ಮವಿರಚಿತಕರ್ಣಾಟಕಭಾಷಾ-ವಿವರಣಸಹಿತಾ ಸಮಾಪ್ತಾ ||

ಶ್ರೀಚಂದ್ರಶೇಖರಭಾರತೀ ಮಹಾಸ್ವಾಮಿಗಳವರೂ ತಮ್ಮ ಗುರುವರ್ಯರ ಆದೇಶದಂತೆ ಶ್ರೀಜಗದ್ಗುರುಪೀಠದ ಅಧಿಕಾರವನ್ನು ವಹಿಸಿಕೊಂಡು, ಪರಂಪರಾಪರಿಪ್ರಾಪ್ತವಾಗಿರುವ ಸನಾತನವೈದಿಕವರ್ಣಾಶ್ರಮಧರ್ಮದ ಪ್ರಚಾರಕ್ಕಾಗಿ ವಿಶೇಷಪರಿಶ್ರಮವನ್ನು ವಹಿಸಿರುವ ವಿಷಯವು, ಅವರ ಚರಿತ್ರೆ ಮತ್ತು ಉಪದೇಶಗಳಿಂದ ಪ್ರಸಿದ್ಧವಿದೆ. ಆದರೇನು ? ಮರಣೋನ್ಮುಖನಾಗಿರುವವನಿಗೆ ಅಶ್ವಿನೀದೇವತೆಗಳ ಚಿಕಿತ್ಸೆಯಾದರೂ ಪರಿಣಾಮಿಕಾರಿಯಾಗುವುದೆಂತು ? ಪ್ರಬಲತಮಕಲಿದೋಷದಿಂದ, ರಾಜಕೀಯದಿಂದ ಹಿಡಿದು ಜನಸಾಮಾನ್ಯದವರೆಗೂ ದುರ್ಬುದ್ಧಿದುಸ್ತರ್ಕಗಳಿಂದ, ಶ್ರೇಯಸ್ಕರವಾಗಿರುವ ಶಾಸ್ತ್ರೀಯಧರ್ಮದಲ್ಲಿ: ಪರಮದ್ವೇಷವೇ ಪ್ರಮುಖವಾಗಿರುವುದು ಪ್ರತ್ಯಕ್ಷವೇ ಇದೆ! ಆದರೂ, ಪ್ರಾಜ್ಞರು ಜಗತ್ತಿಗೆ ಹಿತೋಪದೇಶವನ್ನು ನೀಡುತ್ತಲೇ ಇರತಕ್ಕದ್ದಲ್ಲವೆ ?

ಗುರೋರ್ಮಹೋದರ್ಶನಕಾಂಕ್ಷಯೈವ
ಚಿರಂ ಪ್ರತೀಕ್ಷಾದರಪೂರಿತಾನಾಂ |
ಗುರೋಃ ಸಮೀಪಾಗಮಬೋಧಕಾಭ್ಯಾಂ
ನಮೋ ನಮಃ ಶ್ರೀಗುರುಪಾದುಕಾಭ್ಯಾಂ ||

ಶ್ರೀಗುರುವರ್ಯರ ದಿವ್ಯತೇಜೋಮಯಮೂರ್ತಿಯನ್ನು ಸಂದರ್ಶಿಸುವ ಮಹಾಕಾಂಕ್ಷೆಯಿಂದ ಬಹುಕಾಲದಿಂದ ಕಾದುನಿಂತಿರುವ ಭಕ್ತವೃಂದಕ್ಕೆ, ಶ್ರೀಗುರುಗಳು ಸಮೀಪಕ್ಕೆ ಬರುತ್ತಿರುವುದನ್ನು ತಮ್ಮ ಶಬ್ದಗಳಿಂದ ತಿಳಿಸುವ ಶ್ರೀಗುರುವರ್ಯರ ಪಾದುಕೆಗಳೆರಡಕ್ಕೂ ನಿರಂತರವೂ ನಮಸ್ಕಾರಗಳನ್ನು ಅರ್ಪಿಸುತ್ತೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶುದ್ಧಿಪತ್ರಂ

ಪುಟ	ಸಾಲು	ಶುದ್ಧಿ
7	16	ತನ್ಮ
8	18	ಧಾರ್ಮಿಕಶ್ಚ
8	21	ವಿದ್ವತ್ಪಕ್ಷಪಾತಿಯೂ, ಸಮಸ್ತದೇವತಾನು-ಗ್ರಹಪಾತ್ರನೂ,
8	25	ವಿಶದಯನ್
9	19	ವಿನಿಷ್ಪನ್ನೋ
10	7	ಭುಜಂಗಾಸಂಸರ್ಗಾ
11	13	ಪ್ರಲಾಪಿಸುತ್ತಾನೆ.
24	2	ತಾರ್ಥಯಂತಃ ।
27	2	ತ್ರಪಾಭರ
27	3	ಗತೇ
29	12	ಳೀಶ್ವರ
31	5	ಶಿಬಿಕಾ
36	5	ಪರಮ
37	18	ಪಾಶ್ರಿತೋಽಪಿ
46	14	ಕಿಮಿವ
47	4	ಗುರೂಣಾಂ
47	18	ಸಿದ್ಧಿಸಿಕೊಡುತ್ತ, ಎಲ್ಲ ಅಸೆಗಳನ್ನೂ ತೊರೆದದವರಿಗೂ ಸಹ ತಮ್ಮನ್ನು ಕಂಡು ಸೇವಿಸಬೇಕೆಂಬ ಆಸೆಯನ್ನು ಉಂಟುಮಾಡುತ್ತ;
50	4	ವಿನಷ್ಟಂ
51	19	ಪ್ರಣಯಿನಿ
52	15	ಜನ್ಮಸ್ಥಳ
56	6	ಮಾಯಾತೀತ
56	9	ನೃಸಿಂಹತ್ವಂ
56	18	ಪಥ್ಯಂ
57	4	ಸಖಿಮಾಪ್ಸ್ಯಸಿ
57	21	ಶಾರದಾಯೈ ಚ
59	12	ಪ್ರಕಟಿಸಿದ್ದೇನೆ
59	13	ಶೃಂಗಗಿರ್ಯಭಿಜನಃ

Sri Vidyabharathi Book Centre, Sringeri

CC-O. In Public Domain. Digitized by eGangotri

61	13	ತಪ್ಪಿಸಿ
61	14	ನಿತ್ಯನಾದ್ದ
62	14	ಆದರಿಂದ
62	6	ಕ್ವಚಿದಪಿ
63	22	ಸಂಸಾರವು.
66	7	ಈಗಿನ
66	9	ಪಾತ್ರರಾಗಿದ್ದರೂ
66	24	ಕಂಚಿದಪಿ
71	9	ಸದ್ಗುರುಂ
73	5	ಭಂಜ
73	17	ನೌಕಾಯಿತಾಭ್ಯಾಂ
74	2	ಪಾದುಕಾಭ್ಯಾಂ ‖
74	9	ಮೂಕಾಶ್ಚ
75	14	ತಾಭ್ಯಾಂ
75	14	ವಾಂಛಿತಾಭ್ಯಾಂ
75	18	ತಾಭ್ಯಾಂ
75	21	ಮಹಾಮಹೋಭ್ಯಾಂ
76	9	ಪೂರ್ತ್ಯಾ
77	9	ಹಸ್ತಂ
79	6	ಸುಧಾಂಶೋಃ ।
79	20	ನಾಲಂಕರ್ತುಂ
87	5	ವಸ್ತುವೇ
87	13	ಚಿನ್ಮಾತ್ರ
87	26	ಜ್ಞಾನಕ್ಕೆ
88	10	ಶ್ರದ್ಧಾ
90	8	ಷೇಷ್ವಪಿ
91	23	ಸ್ವಾಮಿ
93	6	ಯತ್ರಾಂತ್ಯಾ
94	6	[illegible]
94	15	ಷಡಂಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಾಂಕರತತ್ತ್ವಜ್ಞಾನಪ್ರಚಾರದ ಗ್ರಂಥಗಳು

ಶೃಂಗಗಿರಿಕವಿನರಸಿಂಹಶರ್ಮರ ಅರ್ಥತಾತ್ಪರ್ಯವಿವರಣಸಹಿತ

ವೇದಾಂತಸಿದ್ಧಾಂತ	20-00
ಶ್ರೀಸುರೇಶ್ವರಾಚಾರ್ಯರು	5-00
ಶ್ರೀಭಗವತ್ಪಾದರವರ ದಿವ್ಯಚರಿತ್ರೆ	3-00
ಶ್ರೀಶೃಂಗಗಿರಿಶ್ರೀಶಾರದಾಮಹಿಮಾದರ್ಶ	3-00
ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರುಪೀಠ-ವೈಶಿಷ್ಟ್ಯಂ	3-00
ಶ್ರೀಮಚ್ಛಂಕರಭಗವತ್ಪಾದರವರ ಅಷ್ಟೋತ್ತರ-ಸಹಸ್ರ ಮತ್ತು ಅಷ್ಟೋತ್ತರಶತನಾಮಾವಳಿಃ ; ಶ್ರೀಸುರೇಶ್ವರಾಚಾರ್ಯರ ಅಷ್ಟೋತ್ತರ-ಶತನಾಮಾವಳಿಃ	3-00
ಭರ್ತೃಹರಿಕವೀಂದ್ರರ ನೀತಿಶತಕಂ	5-00
ಶ್ರೀಬ್ರಹ್ಮಸೂತ್ರತಾತ್ಪರ್ಯವಿಮರ್ಶೆ; ಶ್ರೀಭಗವತ್ಪಾದರವರ ವೇದಾಂತಮರ್ಯಾದಾ; ಶ್ರೀಭಗವತ್ಪಾದರವರ ಸರ್ವಶಾಸ್ತ್ರಾರ್ಥಸಂಕ್ಷೇಪಃ।	5-00
ಶ್ರೀವ್ಯಾಸತಾತ್ಪರ್ಯನಿರ್ಣಯಃ ; ವೇದಾರ್ಥ ಅಥವಾ ವೈದಿಕದರ್ಶನಂ ; ಪುರುಷಾರ್ಥಃ ; ಶ್ರೀಭಗವತ್ಪಾದರವರ ಸಾಧನಪಂಚಕಂ।	5-00
ಶ್ರೀಭಗವತ್ಪಾದರವರ ವಿಜ್ಞಾನನೌಕಾ	1-00

Sri Vidyabharathi Book Centre, Sringeri

CC-O. In Public Domain. Digitized by eGangotri

೧೧. ಶ್ರೀಸಚ್ಚಿದಾನಂದವಿಜಯಃ ;
ಶ್ರೀಗುರೂಪದೇಶಃ ;
ಶ್ರೀಗುರುಪಾದುಕಾಸ್ತೋತ್ರಂ ;
ಶ್ರೀಗುರುಪಾದುಕಾಸ್ತವಃ ;
ಶ್ರೀದೇಶಿಕೋತ್ಕರ್ಷಮಂಜರೀ 5-00

೧೨. ಶ್ರೀಭಗವತ್ಪಾದರವರ ಶ್ರೀದಕ್ಷಿಣಾಮೂರ್ತಿ-ಸ್ತೋತ್ರಂ 1-00

೧೩. ಶ್ರೀಭಗವತ್ಪಾದರವರ ಆನಂದಲಹರೀ (ಭವಾನೀ ಸ್ತೋತ್ರಂ) 1-00

೧೪. ಶ್ರೀಭಗವತ್ಪಾದರವರ ಸ್ವಾತ್ಮನಿರೂಪಣ ಪ್ರಕರಣಂ 5-00

ಗ್ರಂಥಪ್ರಾಪ್ತಿ:—

ಶ್ರೀ ಎ. ಸುಬ್ರಹ್ಮಣ್ಯಶಾಸ್ತ್ರೀ
ಫೋಟೋ ಮತ್ತು ಪುಸ್ತಕವ್ಯಾಪಾರಿ
ಶ್ರೀಶೃಂಗೇರಿಮಠ
ಶೃಂಗೇರಿ ೫೭೭ ೧೩೯
(ಕರ್ನಾಟಕರಾಜ್ಯ)

Sri Vidyabharathi Book Centre, Sringeri